ನವೆಂಬರ್ 9, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2010

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಮಾರತ್‌ಹಳ್ಳಿ ಕುಬೇರ ಮುನಿರೆಡ್ಡಿ ಮಗಳು

# ಡಾ. ಕೃತಿಕಾ ರೆಡ್ಡಿ ಕೊಲೆಗಾರ ಡಾ. ಮಹೇಂದ್ರ ರೆಡ್ಡಿ ಕಳ್ಳಾಟ ಬಯಲು!





ಅನಸ್ತೇಶಿಯಾ ಕೊಟ್ಟು ಕೊಲೆ!




## ರೌಡಿ ನೌಫಾಲ್ ಕಗ್ಗೊಲೆ?!



## ಯಾವ ರಾಜಕಾರಣಿ ವಿಡಿಯೋ ಬ್ಲ್ಯಾಸ್ಟ್?!



## ಗಂಡನ ಕೊಲೆಗೆ ಸ್ಕೆಚ್ ಹಾಕಿ ಸಿಕ್ಕಿಬಿದ್ಲು ಸಂಗೀತಾ!

## ಹಾಸ್ಟೆಲ್ ವಿದ್ಯಾರ್ಥಿ ನಿಗೂಢ ಸಾವು!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯುರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಸೂಪರ್ ಕಾಪ್ ಸಾಂಗ್ಲಿಯಾನ ಜೊತೆ... ಮೈಸೂರು ವಿದ್ಯಾರ್ಥಿಗಳ ಜೈಲು ಭೇಟಿ...




ಸಾಂಗ್ಲಿಯಾನ ಐಪಿಎಸ್ 2001ರಲ್ಲಿ ಬೆಂಗಳೂರು ಪೊಲೀಸ್ ಕಮಿಷನರ್ ಆಗಿ ಅದ್ಭುತ ಆಡಳಿತ ಕೊಟ್ಟವರು. ಅದಕ್ಕೂ ಮೊದಲು ಅವರು ಎಸ್ಪಿಯಾಗಿದ್ದಾಗಲೂ ತಮ್ಮ ದಕ್ಷ ಸೇವೆಯಿಂದ ಹೆಸರುವಾಸಿ ಆಗಿದ್ದವರು.





ಅವರ ಹೆಸರಿನಲ್ಲಿ ಸಾಂಗ್ಲಿಯಾನ ಸರಣಿ ಸಿನಿಮಾಗಳೇ ಬಂದವು. ಅಂಥ ಅದ್ಭುತ ವ್ಯಕ್ತಿತ್ವವುಳ್ಳ ಪೊಲೀಸ್ ಅಧಿಕಾರಿ ಹೆಚ್.ಟಿ. ಸಾಂಗ್ಲಿಯಾನ ನಮ್ಮ ಸಂಪಾದಕರಾದ ಮಲ್ಲಿಕಾರ್ಜುನಯ್ಯನವರಿಗೆ ಕ್ಲೋಸ್ ಫ್ರೆಂಡ್ ಆಗಿದ್ದರು.

ಪೊಲೀಸರ ಸೇವೆಗಳನ್ನು ದಾಖಲಿಸಲೆಂದೆ 'ಪೊಲೀಸ್ ನ್ಯೂಸ್' ಪತ್ರಿಕೆ ತಂದಿದ್ದು ಸಾಂಗ್ಲಿಯಾನ ಮಲ್ಲಿಕಾರ್ಜುನಯ್ಯ ಅವರ 'ಸ್ನೇಹ ಸೇತು' ಕಾರಣ... ನಮ್ಮ ಸಂಪಾದಕರು ಕೇವಲ ಪತ್ರಿಕೆ ಪ್ರಿಂಟ್ ಮಾಡಿ ಪ್ರಸರಣ ಮಾಡಿ ಸುಮ್ಮನಾಗುತ್ತಿರಲಿಲ್ಲ. ತಿಂಗಳಿಗೊಮ್ಮೆ ಏನಾದರೊಂದು ಕಾರ್ಯಾಗಾರ ಏರ್ಪಡಿಸುತ್ತಿದ್ದರು. ಶಾಲಾ ಕಾಲೇಜುಗಳಲ್ಲಿ ಕ್ಯಾಂಪ್ ಹಾಕಿ ಅಪರಾಧ ಚಟುವಟಿಕೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುತ್ತಿದ್ದರು. ಇದಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಸಾಥ್ ಕೊಡುತ್ತಿದ್ದರು. ಈ ವಿಚಾರದಲ್ಲಿ ಸಾಂಗ್ಲಿಯಾನ ಕೊಂಚ ಮುಂದು. ಯಾವುದೇ ಕಾರ್ಯಕ್ರಮ ಇರಲಿ, ಕರೆದ ತಕ್ಷಣ ಮುಖ್ಯ ಅತಿಥಿಯಾಗಿ ಆಗಮಿಸಿ ಕಾರ್ಯಕ್ರಮಕ್ಕೆ ಮೆರುಗು ತರುತ್ತಿದ್ದರು. ಅಂಥದ್ದೇ ಒಂದು ಸಂದರ್ಭದಲ್ಲಿ, ನಮ್ಮ ಸಂಪಾದಕರು ಮೈಸೂರಿನಲ್ಲಿ ವಿದ್ಯಾರ್ಥಿಗಳ ಸಮಾವೇಶ ಏರ್ಪಡಿಸಿದ್ದಾಗ... ಆ ವಿದ್ಯಾರ್ಥಿಗಳಿಗೆ ಪೊಲೀಸ್ ಠಾಣೆ ಕಾರ್ಯವೈಖರಿ ಪರಿಚಯ, ಜೈಲು ವ್ಯವಸ್ಥೆ ಪರಿಚಯ ಮಾಡಿಸಿದ್ದರು.

ಅವತ್ತು ನಮ್ಮ ಸಂಪಾದಕರು ಮತ್ತು ಪೊಲೀಸ್ ನ್ಯೂಸ್ ಬಳಗದೊಂದಿಗೆ ಸಾಂಗ್ಲಿಯಾನ ಸಾಹೇಬರು ಉಪಸ್ಥಿತರಿದ್ದು, ಮೈಸೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ಸಾವಿರಾರು

☞ 3



ಸಂಪಾದಕ
**ಎಂ. ರಾಹುಲ್**

**ನನ್ನ ಟೀಂ**

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಜಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್ (ಜ್ಯೋತಿಷಿ)
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
**ಈ. ರಾಜೇಶ್**
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ಚೊಚ್ಚಲ ವಿಶ್ವಕಪ್ ಗೆದ್ದ ವೀರ ವನಿತೆಯರು....






ನವಿ ಮುಂಬೈನ ಡಿ.ವೈ ಪಾಟೀಲ್ ಸ್ಟೇಡಿಯಂನಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ 52 ರನ್‌ಗಳ ಅಂತರದ ಜಯ ದಾಖಲಿಸಿ ತನ್ನ ಚೊಚ್ಚಲ ವಿಶ್ವಕಪ್ ಜಯಿಸಿದೆ. ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿದ ಟೀಮ್ ಇಂಡಿಯಾ ಚಾಂಪಿಯನ್ ಪಟ್ಟ ಅಲಂಕರಿಸಿದ್ದು, ಈ ಪಂದ್ಯದ ದಿಕ್ಕನ್ನೇ ಬದಲಿಸಿದ ಆ ಒಂದು ಅಲ್ಟಿಮೇಟ್ 'ಕ್ಯಾಚ್'ಗೆ ಇದೀಗ ಜಗತ್ತಿನೆಲ್ಲೆಡೆ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ....

ಹೌದು ಕಣ್ರೀ, ನವಿ ಮುಂಬೈನ ಡಿ.ವೈ. ಪಾಟೀಲ್ ಸ್ಟೇಡಿಯಂನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ 52 ರನ್‌ಗಳ ಅಂತರದ ಜಯ ದಾಖಲಿಸಿ ವಿಶ್ವಕಪ್ ಗೆದ್ದುಕೊಂಡಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಸೌತ್ ಆಫ್ರಿಕಾ ಕ್ಯಾಪ್ಟನ್ ಫೀಲ್ಡಿಂಗ್ ಆಯ್ದುಕೊಂಡರು. ಸೋ, ಇಂಡಿಯಾ ಬ್ಯಾಟಿಂಗ್‌ಗೆ ನಿಂತಿತು. ಅದರಂತೆ ಮೊದಲು ಬ್ಯಾಟ್ ಮಾಡಿದ ಭಾರತ ತಂಡವು 50 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 298 ರನ್ ಕಲೆಹಾಕಿತು.

ಈ ಬೃಹತ್ ಮೊತ್ತವನ್ನು ಬೆನ್ನಟ್ಟಿದ ಸೌತ್ ಆಫ್ರಿಕಾ ತಂಡ 45.3 ಓವರ್‌ನಲ್ಲಿ 246 ರನ್‌ಗಳಿಗೇ ತನ್ನೆಲ್ಲಾ ವಿಕೆಟ್ ಕಳೆದುಕೊಂಡ ಪರಿಣಾಮ ಭಾರತ 52 ರನ್‌ಗಳ ಅಂತರದಲ್ಲಿ ಭರ್ಜರಿ ಜಯ ದಾಖಲಿಸಿತು. ಚೊಚ್ಚಲ ಮಹಿಳಾ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ ಆಗಿ ಭಾರತ ಹೊಮ್ಮಿದೆ.

ಇಸವಿ 2008ರಲ್ಲಿ ಭಾರತ ಮೊದಲ ಬಾರಿ ಫೈನಲ್ ಪ್ರವೇಶಿಸಿದಾಗ ಆಸೀಸ್ ವಿರುದ್ಧ 98 ರನ್‌ಗಳಿಂದ ಸೋತಿತ್ತು. 2017ರಲ್ಲಿ ಇಂಗ್ಲೆಂಡ್ ವಿರುದ್ಧ 9 ರನ್‌ಗಳ ವಿರೋಚಿತ ಸೋಲು ಕಂಡಿದ್ದ ಭಾರತ 3ನೇ ಬಾರಿಗೆ ಫೈನಲ್‌ನಲ್ಲಿ ಟ್ರೋಫಿ ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿದೆ.




**ಪಂದ್ಯದ ದಿಕ್ಕು ಬದಲಿಸಿದ ಆ ಒಂದು ಕ್ಯಾಚ್!**

ಒಂದು ಹಂತದಲ್ಲಿ ಶತಕ ಬಾರಿಸಿದ್ದ ದಕ್ಷಿಣ ಆಫ್ರಿಕಾ ಮಹಿಳಾ ತಂಡದ ನಾಯಕಿ ಲಾರಾ ವೊಲ್ವಾರ್ಡ್ ಬಿರುಸಿನ ಆಟಕ್ಕೆ ಮುಂದಾಗುತ್ತಿದ್ದರು. ಓವರ್ ಕೊನೆಯಲ್ಲಿ ಸ್ಟ್ರೈಕ್ ಉಳಿಸಿಕೊಳ್ಳುತ್ತಾ ಪಂದ್ಯವನ್ನ ಗೆಲುವಿನತ್ತ ಕೊಂಡೊಯ್ಯುತ್ತಿದ್ದರು. ಕೊನೆಯವರೆಗೂ ಲಾರಾ ಕ್ರೀಸ್‌ನಲ್ಲಿ ನಿಂತರೇ ದಕ್ಷಿಣ ಆಫ್ರಿಕಾ ಗೆಲುವು ಖಚಿತ ಎಂದೇ ಭಾವಿಸಲಾಗಿತ್ತು. ಆದ್ರೆ 42ನೇ ಓವರ್‌ನಲ್ಲಿ ದೀಪ್ತಿ ಶರ್ಮಾ ಕೊಟ್ಟ ಟ್ವಿಸ್ಟ್ ಪಂದ್ಯ ಗತಿಯನ್ನೇ ತಲೆಕೆಳಗೆ ಮಾಡಿತು.

42ನೇ ಓವರ್‌ನಲ್ಲಿ ಬೌಲಿಂಗ್‌ಗೆ ಬಂದ ದೀಪ್ತಿ ಶರ್ಮಾ ಮೊದಲ ಎಸೆತದಲ್ಲೇ ಕ್ಯಾಪ್ಟನ್‌ಗೆ ಪೆವಿಲಿಯನ್ ದಾರಿ ತೋರಿದರು. ದೀಪ್ತಿ ಬೌಲಿಂಗ್‌ಗೆ ಲಾರಾ ಸಿಕ್ಸರ್ ಬಾರಿಸಲು ಯತ್ನಿಸಿದರು. ಈ ವೇಳೆ ಬೌಂಡರಿ ಬಳಿ ಅಮನ್‌ಜೋತ್ ಕೌರ್ ಸೆನ್ಸೇಷನ್ ಕ್ಯಾಚ್ ಹಿಡಿದು ದಿಗ್ಭ್ರಮೆಗೊಳಿಸಿದರು. ಮತ್ತೆ 4ನೇ ಎಸೆತದಲ್ಲಿ ಕ್ಲೋಯ್ ಟ್ರಯಾನ್ ಅವರನ್ನ ಎಲ್‌ಬಿಡಬ್ಲ್ಯೂ ಔಟ್ ಮಾಡಿದರು. ಇದು ಪಂದ್ಯದ ಫಲಿತಾಂಶದ ಮೇಲೆ ಪರಿಣಾಮ ಬೀರಿತು.

**46ನೇ ಓವರ್‌ನಲ್ಲಿ ಟ್ವಿಸ್ಟ್ ಮೇಲೆ ಟ್ವಿಸ್ಟ್**

46ನೇ ಓವರ್‌ನಲ್ಲಿ ಕ್ರೀಸ್‌ಗೆ ಬಂದ ಶ್ರೀ ಚಾರಿಣಿ 5 ಎಸೆತಗಳಲ್ಲೇ 14 ರನ್ ಬಿಟ್ಟುಕೊಟ್ಟರು. ಇದರಿಂದ ಮತ್ತೆ ಗೆಲುವು ದಕ್ಷಿಣ ಆಫ್ರಿಕಾ ವಿರುದ್ಧ ವಾಲಿತ್ತು. ಆದ್ರೆ ಕ್ರೀಸ್‌ನಲ್ಲಿದ್ದ ನಾಡಿನ್ ಡಿ ಕ್ಲರ್ಕ್ ಓವರ್‌ನ ಕೊನೇ ಎಸೆತದಲ್ಲಿ ಸಿಂಗಲ್ ತೆಗೆದುಕೊಳ್ಳಲು ಹೋಗಿ ನಾನ್‌ಸ್ಟ್ರೈಕ್‌ನಲ್ಲಿದ್ದ ಅಯಬೊಂಗಾ ಖಾಕಾ ಅವರನ್ನ ರನೌಟ್ ಮಾಡಿಸಿದ್ರು. ಇದಕ್ಕೂ ಮುನ್ನ 42ನೇ ಓವರ್‌ನಲ್ಲಿ ಬೌಲಿಂಗ್‌ಗೆ ಬಂದ ದೀಪ್ತಿ ಶರ್ಮಾ ಮೊದಲ ಎಸೆತದಲ್ಲೇ ಕ್ಯಾಪ್ಟನ್‌ಗೆ ಪೆವಿಲಿಯನ್ ದಾರಿ ತೋರಿದರು. ದೀಪ್ತಿ ಬೌಲಿಂಗ್‌ಗೆ ಲಾರಾ ಸಿಕ್ಸರ್ ಬಾರಿಸಲು ಯತ್ನಿಸಿದರು. ಈ ವೇಳೆ ಬೌಂಡರಿ ಬಳಿ ಅಮನ್‌ಜೋತ್ ಕೌರ್ ಸೆನ್ಸೇಷನ್ ಕ್ಯಾಚ್ ಹಿಡಿದು ದಿಗ್ಭ್ರಮೆಗೊಳಿಸಿದರು! ಮತ್ತೆ 4ನೇ ಎಸೆತದಲ್ಲಿ ಕ್ಲೋಯ್ ಟ್ರಯಾನ್ ಅವರನ್ನ ಎಲ್‌ಬಿಡಬ್ಲ್ಯೂ ಔಟ್ ಮಾಡಿದರು. ಇದು ಪಂದ್ಯದ ಫಲಿತಾಂಶದ ಮೇಲೆ ಪರಿಣಾಮ ಬೀರಿತು. ಮತ್ತೆ 47ನೇ ಓವರ್‌ನಲ್ಲಿ ದೀಪ್ತಿ ಶರ್ಮಾ ಬೌಲಿಂಗ್‌ಗೆ ಬಂದರು. ಇತ್ತ ಕ್ರೀಸ್‌ನಲ್ಲಿದ್ದ ನಾಡಿನ್ ಡಿ ಕ್ಲರ್ಕ್ ಮೊದಲ ಎರಡು ಎಸೆತಗಳನ್ನ ಡಾಟ್ ಮಾಡಿಕೊಂಡರು. 3ನೇ ಎಸೆತದಲ್ಲಿ ಬೌಂಡರಿಗಟ್ಟುವ ಪ್ರಯತ್ನ ಮಾಡಿದರು. ಆದ್ರೆ ಕೌರ್ ಡ್ರೈವ್‌ನಲ್ಲಿ ಫೀಲ್ಡಿಂಗ್‌ನಲ್ಲಿದ್ದ ನಾಯಕಿ ಹರ್ಮನ್ ಪ್ರೀತ್ ಕೌರ್ ಅದ್ಭುತ ಕ್ಯಾಚ್ ಹಿಡಿಯುವ ಮೂಲಕ ಹರಿಣಿಯರನ್ನು ಆಲೌಟ್ ಮಾಡಿದರು. ಇದರೊಂದಿಗೆ ಭಾರತದ ವೀರ ವನಿತೆಯರ ತಂಡ 'ಚಾಂಪಿಯನ್ಸ್' ಪಟ್ಟ ಅಲಂಕರಿಸಿತು!

ಈ ಮೂಲಕ ಅಪರೂಪದ ವಿದ್ಯಾಮಾನಕ್ಕೆ ಸಾಕ್ಷಿಯಾದ ನವಿ ಮುಂಬೈ ನ ಡಿ.ವೈ ಪಾಟೀಲ್ ಸ್ಟೇಡಿಯಂ ಗೆ ಹಾಗೂ ಆ ಒಂದು ಅಲ್ಟಿಮೇಟ್ ಕ್ಯಾಚ್ ಹಿಡಿದು ಈ ಐತಿಹಾಸಿಕ ಗೆಲುವಿಗೆ ಕಾರಣಳಾದ ಅಮನ್ ಜೋತ್ ಕೌರ್‌ಳಿಗೆ ಈ ಹ್ಯಾಟ್ಸಾಫ್...... -ಸಂ.




2 ☞ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ವಾರಪತ್ರಿಕೆಯೊಂದರಿಂದ ಅರ್ಥಪೂರ್ಣವಾದ ಒಂದು ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು.

ಇಂಥಹದ್ದೊಂದು ಸವಿ ನೆನಪನ್ನು ಹಂಚಿಕೊಳ್ಳುವ ಸಂದರ್ಭ ಇಂದು ಬಂತು ನೋಡಿ... ಏಷ್ಟೇ ಆಗಲಿ, ನೆನಪುಗಳಿಗೆ ಸಾವಿಲ್ಲ... ಅವು ಸದಾ ಕಾಡುತ್ತವೆ. ಸಾಂಗ್ಲಿಯಾನ ಬರೀ ಮೈಸೂರಲ್ಲ, ದಾವಣಗೆರೆ, ಹುಬ್ಬಳ್ಳಿ ಬಳ್ಳಾರಿ ಕಡೆಗೆಲ್ಲ ಕರೆದೊಯ್ದು ಅಲ್ಲಿಯೂ ಕೆಲವು ಕಾರ್ಯಾಗಾರ ನಡೆಸಿಕೊಟ್ಟರು. ಅಲ್ಲಿನ ಜೈಲುಗಳ ಕಿರು ಪರಿಚಯ, ಖೈದಿಗಳ ನೋವು ನಲಿವು ಎಲ್ಲಾವನ್ನು ಪತ್ರಿಕೆ ಮೂಲಕ ನಾಡಿನ ಜನತೆಗೆ ತಲುಪಿಸಿದ್ದೇವೆ. ಇದನ್ನೆಲ್ಲ ನೆನಪು ಮಾಡಿಕೊಳ್ಳಲು ನಮಗೂ ಹೆಮ್ಮೆಯಿದೆ.

ನೆನಪಿರಲಿ, ಕನ್ನಡದ ಮೊಟ್ಟ ಮೊದಲ ವಾರ ಪತ್ರಿಕೆ 'ಪೊಲೀಸ್ ನ್ಯೂಸ್'. ಆಮೇಲೆ ನೂರು ಪತ್ರಿಕೆ ಬಂದವು-ಹೋದವು. ಇಂದಿಗೂ ನಿರಂತರ ಪ್ರಕಟಣೆ ಕಾಣುತ್ತ ಜನ ಸಂಪರ್ಕ ಸಾಧಿಸುತ್ತಿರುವುದು 'ಪೊಲೀಸ್ ನ್ಯೂಸ್' ಮಾತ್ರ!





ಇದೆಲ್ಲಾ ಭಗವಂತನ ಕೃಪೆ. ಓದುಗ ಪ್ರಭುಗಳ ಆಶೀರ್ವಾದ. ಇಂದಿನ ಸೋಶಿಯಲ್ ಮೀಡಿಯಾ ಹೊಡೆತದಲ್ಲೂ ನಾವು ಸೋತಿಲ್ಲ. ಕಷ್ಟವೋ ಸುಖವೋ.. ಮುನ್ನಡೆಸುತ್ತಿದ್ದೇವೆ. ನಮ್ಮ ಕಾರ್ಯ ಕ್ಷಮತೆಯನ್ನು ಗಮನಿಸಿ ಸರ್ಕಾರ ಜಾಹಿರಾತು ನೀಡಿ ಸಹಕರಿಸುತ್ತಿದೆ. ನೀವೂ ಕೂಡ ಪತ್ರಿಕೆ ಕೊಂಡು ಓದಿ, ಜಾಹಿರಾತು ನೀಡಿ ಸಹಕರಿಸಬೇಕು ಎಂಬ ವಿನಂತಿಯೊಂದಿಗೆ...

# ರೌಡಿ ನೌಫಾಲ್ ಕೊಲೆಯೋ? ಆಕಸ್ಮಿಕವೋ?

ದಕ್ಷಿಣ ಕನ್ನಡ

ಮೋಹನ್ ಬೋಳಂಗಡಿ

ಕಡಲತಡಿಯ ಕ್ರಿಮಿಯೊಂದು ರೈಲ್ವೆ ಹಳಿಯ ಪಕ್ಕ ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮಂಜೇಶ್ವರ ಪೊಲೀಸರು ಮೃತದೇಹದ ತನಿಖೆ ಕೈಗೊಂಡ ಸಂದರ್ಭದಲ್ಲಿ ಹಲವು ಸಂಶಯಗಳು ಮೂಡಿತ್ತು. ಮೃತದೇಹದ ಮರಣೋತ್ತರ ಪರೀಕ್ಷೆ ಕಾಸರಗೋಡಿನ ಜನರಲ್ ಆಸ್ಪತ್ರೆಯಲ್ಲಿ ನಡೆದು ಪ್ರಾಥಮಿಕ ವರದಿಗಳು ಬಂದಾಗ ಪೊಲೀಸರು ನಿಟ್ಟುಸಿರು ಬಿಟ್ಟಿದ್ದಾರೆ. ಯಾಕೆಂದರೆ ಆತನ ಸಾವಿಗೆ ಕಾರಣವಾದ ಅಂಶ ಎಂದರೆ ರೈಲು ಡಿಕ್ಕಿ ಹೊಡೆದದ್ದು. ಸಹಜವಾಗಿಯೇ ಈ ಪ್ರಕರಣದ ಮುಂದಿನ ತನಿಖೆ ರೈಲ್ವೆ ಪೊಲೀಸರಿಗೆ ಹಸ್ತಾಂತರವಾಗಲಿದೆ. ಅಂದ ಹಾಗೆ ಈ ರೀತಿಯಾಗಿ ಮೃತಪಟ್ಟವನು ಸುಮಾರು 38ರ ಹರೆಯದ ರೌಡಿ ಶೀಟರ್ ನೌಫಾಲ್.

## ಯಾರೀತ?

ರೌಡಿ ಶೀಟರ್ ನೌಫಾಲ್ ಮಂಗಳೂರಿನ ಪಡೀಲ್ ಸಮೀಪದ ಬಜಾಲ್ ಫೈಜಲ್ ನಗರದ ನಿವಾಸಿ. ಈತನ



ಮೇಲೆ ಕಂಕನಾಡಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕಳೆದ 15 ವರ್ಷಗಳಿಂದ ರೌಡಿ ಶೀಟ್ ಇತ್ತು. ಕಂಕನಾಡಿ ನಗರ ಠಾಣೆಯಲ್ಲೂ ರೌಡಿ ಶೀಟ್ ತೆರೆಯಲಾಗಿದೆ. ಈತನ ಮೇಲೆ ಒಟ್ಟು 23 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದೆ. ಅದರಲ್ಲಿ ಪ್ರಮುಖವಾದದ್ದು ಎಂದರೆ 2010ರಲ್ಲಿ ಅಡ್ಯಾರ್ ಕಣ್ಣೂರು ಚೆಕ್‌ಪೋಸ್ಟ್ ಬಳಿ ನಡೆದಿದ್ದ ಸಣ್ಣಮುತ್ತ ಎಂಬಾತನ ಹತ್ಯೆ. ಮತ್ತು ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಫರಂಗಿಪೇಟೆಯಲ್ಲಿ 2017ರಲ್ಲಿ ನಡೆದಿದ್ದ ಕಣ್ಣೂರಿನ ಜಿಯಾ ಮತ್ತು ಫಯಾರ್ ಹತ್ಯಾ ಪ್ರಕರಣ. 2024ರಲ್ಲಿ ಮಂಗಳೂರಿನ ಸಬ್‌ಜೈಲಿನಲ್ಲಿ ವಿಚಾರಣಾಧೀನ ಖೈದಿಯಾಗಿದ್ದ ಸಮೀರ್ ಎಂಬಾತನ ಕೊಲೆಯತ್ನ ಪ್ರಕರಣ. ಈ ಮೂರು ಪ್ರಕರಣಗಳಲ್ಲದೇ ಈತನ ಮೇಲೆ ಒಟ್ಟು 23 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಕೆಲವು ತಿಂಗಳ ಹಿಂದೆ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಗೊಂಡಂತಹ ನೌಫಾಲ್ ಇದೀಗ ಮಂಜೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯ ಉಪ್ಪಳ ರೈಲ್ವೇ ಗೇಟ್ ಬಳಿ ರೈಲ್ವೆ ಹಳಿಯ ಪಕ್ಕದಲ್ಲಿ ಕೊಲೆಯಾದ ರೀತಿಯಲ್ಲಿ ಪತ್ತೆಯಾಗಿದ್ದಾನೆ. ಒಟ್ಟಾರೆ ಕ್ರಿಮಿನಲ್ ಹಿನ್ನೆಲೆಯ ಕ್ರಿಮಿಯೊಂದರ ಅಂತ್ಯ ಈ ರೀತಿಯಾಗಿದೆ.



## ಸಣ್ಣಮುತ್ತ ಹತ್ಯೆ!

ದಕ್ಷಿಣ ಕನ್ನಡಕ್ಕೆ ಗಾಂಜಾ ವ್ಯವಹಾರವನ್ನು ಹಬ್ಬಿಸಿದಂತಹ ಮೂಲ ಪುರುಷ ಅಂದರೆ ಸಂಶುದ್ದೀನ್ ಎಂಬಾತ. ಕೇರಳ ಮೂಲದ ಈತ 1998ರಲ್ಲಿ ಬಂಟ್ವಾಳ ತಾಲೂಕಿನ ಮಾರಿಪಳ್ಳ ಎಂಬಲ್ಲಿ ಬಾಡಿಗೆ ಮನೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಕೇರಳದಿಂದ ಗಾಂಜಾವನ್ನು ತಂದು ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದ. ಸ್ಥಳೀಯರೇ ಈತನ ಗಿರಾಕಿಗಳಾಗಿದ್ದರು. ಈತನಿಂದ ಗಾಂಜಾ ಖರೀದಿಸಿ ಅಡ್ಯಾರ್ ಕಣ್ಣೂರು ಪರಿಸರದಲ್ಲಿ ಮಾರಾಟ ಮಾಡುತ್ತಿದ್ದ ತಂಡವೊಂದು ಚಾಲ್ತಿಗೆ ಬಂತು. ಕ್ರಮೇಣ ಎರಡೂ ತಂಡಗಳ ಮಧ್ಯೆ ಘರ್ಷಣೆ ಆರಂಭವಾಯಿತು. ಪರಿಣಾಮವಾಗಿ ಸಂಶುದ್ದೀನ್‌ನ ಹತ್ಯೆ ಮಾರಿಪಳ್ಳದಲ್ಲೇ ನಡೆಯಿತು. ಗಾಂಜಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದಂತಹ 10 ಹತ್ಯೆಗಳ ಪೈಕಿ ಮೊದಲನೆಯ ಹತ್ಯೆ ಇದಾಗಿತ್ತು. ಈ ಹತ್ಯೆಯಲ್ಲಿ ಕಣ್ಣೂರಿನ ಕೆಲವರು ಭಾಗಿಗಳಾಗಿದ್ದರು. ಗಾಂಜಾ ವ್ಯವಹಾರ ಲಾಭದಾಯಕವಾಗಿ ಬೆಳೆದಿದ್ದರಿಂದ ಅಲ್ಲಲ್ಲಿ ತಂಡಗಳು ಹುಟ್ಟಿಕೊಂಡು ವ್ಯವಹಾರ ನಡೆಸುತ್ತಿತ್ತು. ಈ ತಂಡಗಳ ಮಧ್ಯೆ ವೈಮನಸ್ಸು ಸೃಷ್ಟಿಯಾಯಿತು. ಇದರ ಪರಿಣಾಮವಾಗಿ 2012 ಮಾರ್ಚ್ 13ರಂದು ಸಂಜೆ ಏಳು ಗಂಟೆಯ ವೇಳೆಗೆ ಕಣ್ಣೂರಿನ ಬೋರುಗುಡ್ಡೆಯ ಅಬ್ದುಲ್ ರಹಿಮಾನ್ ಯಾನೆ ಸಣ್ಣಮುತ್ತ ಎಂಬಾತನನ್ನು ತಂಡವೊಂದು ಅಟಕಾಯಿಸಿ ಹತ್ಯೆಗೈದಿತ್ತು. ಸಂಜೆಯ ವೇಳೆಗೆ ಆಟ ಆಡಿ ಬಂದು ಕಣ್ಣೂರು ಚೆಕ್ ಪೋಸ್ಟ್ ಬಳಿ ನಿಂತುಕೊಂಡಿದ್ದ



ಸಣ್ಣಮುತ್ತನ ಮೇಲೆ ಆರೋಪಿಗಳಾದ ಇಮ್ರಾನ್, ಇಸ್ಮಾಯಿಲ್, ಝೂಕೀರ್, ನೌಫಾಲ್, ತಲ್ಲತ್, ಜುಬ್ಬಿ ಯಾನೆ ಜುಬೈರ್, ಇರ್ಫಾನ್, ಸದ್ದು ಯಾನೆ ಸದ್ದಾಂ ಸೇರಿಕೊಂಡು ಹತ್ಯೆ ಮಾಡಿತ್ತು. ಈ ಎಲ್ಲಾ ಹಂತಕರನ್ನು ಕೇವಲ ಒಂದು ತಿಂಗಳ ಅವಧಿಯಲ್ಲೇ ಅಂದಿನ ಕಂಕನಾಡಿ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ರವೀಶ್ ನಾಯಕ್ ಮತ್ತವರ ಸಿಬ್ಬಂದಿಗಳು ಬಂಧಿಸಿದ್ದರು. ಜೈಲಿಗೆ ಹೋದ ಈ ತಂಡ ಕೆಲವೇ ಸಮಯಗಳ ನಂತರ ಜಾಮೀನಿನ ಮೇರೆಗೆ ಬಿಡುಗಡೆಗೊಂಡಿತ್ತು.

## ಫರಂಗಿಪೇಟೆಯ ಜೋಡಿ ಕೊಲೆ!

ಸಣ್ಣಮುತ್ತನ ಹತ್ಯೆಯ ನಂತರ ಪಡೀಲ್ ಬಜಾಲ್ ಪರಿಸರದಲ್ಲಿ ತಲ್ಲತ್ ಗ್ಯಾಂಗ್ ಪ್ರಬಲವಾಗಿತ್ತು. ಈ ಗ್ಯಾಂಗಿನ ಪ್ರಮುಖ ಪಂಟರ್ ನೌಫಾಲ್. ಈ ಗ್ಯಾಂಗ್ ಮಾರಿಪಳ್ಳದ ಜಬ್ಬಾರ್ ಗ್ಯಾಂಗ್‌ನೊಂದಿಗೆ ಸಖ್ಯದಿಂದ ಇತ್ತು. ಜಬ್ಬಾರ್‌ನನ್ನು ಹತ್ಯೆಗೈಯ್ಯಲು ಕಣ್ಣೂರಿನ ಜಿಯಾ ಗ್ಯಾಂಗ್ ಹೊಂಚು ಹಾಕುತ್ತಿತ್ತು. ಈ ಗ್ಯಾಂಗ್‌ಗೆ ಮಾರಿಪಳ್ಳದ ಕೆಲವರು ಸಹಕಾರ ನೀಡುತ್ತಿದ್ದರು. 2017 ಸಪ್ಟೆಂಬರ್ 26 ರಂದು ರಾತ್ರಿ 11 ಗಂಟೆಯ ವೇಳೆಗೆ ಅಡ್ಯಾರ್‌ನ ಜಿಯಾ, ಫಯಾರ್, ಮತ್ತು ಇತರರಾದ ಅಮೀಜ್, ಮುಸ್ತಾಕ್ ಅವರ ತಂಡ ಜಬ್ಬಾರ್‌ನನ್ನು ಹುಡುಕಿಕೊಂಡು ಮಾರಿಪಳ್ಳಕ್ಕೆ ಹೋಗುತ್ತಿತ್ತು. ಈ ಸಂದರ್ಭದಲ್ಲಿ ಈ ಮಾಹಿತಿ ಜಬ್ಬಾರ್‌ಗೆ ಗೊತ್ತಾಗಿ ಆತ ತನ್ನ ಸ್ನೇಹಿತರಾದ ತಲ್ಲತ್, ನೌಫಾಲ್ ಮತ್ತಿತರರಿಗೆ ಜಿಯಾ ಮತ್ತವನ ತಂಡವನ್ನು ಅಟಕಾಯಿಸುವಂತೆ ಸೂಚನೆ ನೀಡಿದ್ದ. ಅದರಂತೆ ಈ ತಂಡ ಜಿಯಾ ತಂಡ ಹೋಗಿದ್ದ ವಾಹನವನ್ನು ಬೆನ್ನಟ್ಟಿ ಫರಂಗಿಪೇಟೆಯ ಪೊಲೀಸ್ ಔಟ್‌ಪೋಸ್ಟ್‌ನ ಎದುರಲ್ಲೇ ಅಡ್ಡಗಟ್ಟಿ ಮಾರಕಾಯುಧದಿಂದ ಧಾಳಿ ನಡೆಸಿತ್ತು. ಇದರ ಪರಿಣಾಮವಾಗಿ ಜಿಯಾ ಮತ್ತು ಫಯಾರ್ ಸಾವಿಗೀಡಾಗಿದ್ದರು. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಕೇಸು ದಾಖಲಾಗಿ ಆರೋಪಿಗಳೆಲ್ಲರೂ ಬಂಧಿಸಲ್ಪಟ್ಟು ಜೈಲು ಸೇರಿದ್ದರು. ಈ ಪ್ರಕರಣದಲ್ಲಿ ಭಾಗಿಯಾಗಿದ್ದ ನೌಫಾಲ್ ಜೈಲಿನಿಂದ ಬಿಡುಗಡೆಗೊಂಡ ಬಳಿಕ ತನ್ನದೇ ತಂಡ ಕಟ್ಟಿಕೊಂಡು ಮಾದಕ ವಸ್ತುಗಳ ಮಾರಾಟ ಮತ್ತು ಕೆಲವೊಂದು ಫೈನಾನ್ಸ್ ಡೀಲಿಂಗ್ ನಡೆಸುತ್ತಿದ್ದ. ಸ್ವತಃ ಮಾದಕ ವ್ಯಸನಿಯಾಗಿದ್ದ ನೌಫಾಲ್ ದ್ವಿಚಕ್ರ ವಾಹನದಲ್ಲೇ ತನ್ನ ವ್ಯವಹಾರ ನಡೆಸುತ್ತಿದ್ದ. ಕಳೆದ ವರ್ಷ ಬೇರೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಸಬ್ ಜೈಲ್ ಸೇರಿದ್ದ. ಅದೇ ಸಂದರ್ಭದಲ್ಲಿ ಉಳ್ಳಾಲದ ಟಾರ್ಗೆಟ್ ಗ್ಯಾಂಗ್‌ನ ಇಲಿಯಾಸ್ ಎಂಬಾತನ ಹತ್ಯೆ ಮೋರ್ಗನ್ಸ್ ಗೇಟ್ ಬಳಿಯ ಆತನ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿತ್ತು. ಈ ಪ್ರಕರಣದಲ್ಲಿ ಸಮೀರ್ ಎಂಬಾತ ಆರೋಪಿಯಾಗಿದ್ದು, ಪೊಲೀಸರಿಂದ ಬಂಧನಕ್ಕೊಳಗಾಗಿ ಸಬ್‌ಜೈಲಿನಲ್ಲಿದ್ದ. ಆ ಸಂದರ್ಭದಲ್ಲಿ ಆತನನ್ನು ಕೊಲೆಗೈಯ್ಯಲು ನೌಫಾಲ್ ಮಾರಕಾಯುಧದಿಂದ ಧಾಳಿ ನಡೆಸಿದ್ದ. ಈ ಸಂಬಂಧ ಬರ್ಕೆ ಠಾಣೆಯಲ್ಲಿ ಕೊಲೆಯತ್ನ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ನೌಫಾಲ್ ಒಂದು ತಿಂಗಳ ಹಿಂದೆ ಜಾಮೀನಿನ ಮೇಲೆ ಬಿಡುಗಡೆಗೊಂಡು ಫೈರುಝ್ ನಗರದ ತನ್ನ ಮನೆಗೆ ಬಂದಿದ್ದ. ಹಳೆಯ ವ್ಯವಹಾರವನ್ನೇ ಮುಂದುವರಿಸಿದ್ದ. ಇಂತಹ ಹಿನ್ನೆಲೆಯ ನೌಫಾಲ್ ಅಕ್ಟೋಬರ್ 31ರಂದು ಸಂಜೆಯ ನಂತರ ಮನೆಯಿಂದ ಹೋಗಿದ್ದ. ರಾತ್ರಿ 7 ಗಂಟೆಯವರೆಗೆ ಆತನ ಮೊಬೈಲ್ ಆನ್ ಆಗಿತ್ತು. ತದನಂತರ ನಾಟ್ ರೀಚೆಬಲ್ ಇತ್ತು. ನವೆಂಬರ್ 1ರಂದು ಬೆಳಿಗ್ಗೆ 8.30ರ ವೇಳೆಗೆ ನೌಫಾಲ್‌ನ ಮೃತದೇಹ ಉಪ್ಪಳ ರೈಲ್ವೇ ಗೇಟ್ ಬಳಿ ಪತ್ತೆಯಾಗಿತ್ತು. ತಲೆ ಹಾಗೂ ದೇಹದ ಹಲವು ಭಾಗಗಳಲ್ಲಿ ಗಾಯಗಳಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ





ಮಂಜೇಶ್ವರ ಪೊಲೀಸರು ರೈಲು ಢಿಕ್ಕಿ ಹೊಡೆದು ಮೃತಪಟ್ಟಿರಬೇಕೆಂದು ಭಾವಿಸಿ ಮಹಜರು ಕ್ರಿಯೆಗಳನ್ನು ನಡೆಸಿ ಮಂಜೇಶ್ವರ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ಮೃತದೇಹವನ್ನು ಸಾಗಿಸಿದರು ಮತ್ತು ಮೃತದೇಹದ ಗುರುತು ಪತ್ತೆಗೆ ಮುಂದಾದಾಗ ಆತ ಕಂಕನಾಡಿ ನಗರ ಠಾಣೆಯ ರೌಡಿ ಶೀಟರ್ ನೌಫಾಲ್ ಎಂದು ಪತ್ತೆಯಾಯಿತು. ಅಲ್ಲಿಗೆ ಇಡೀ ಪ್ರಕರಣ ಕಗ್ಗಂಟಾಯಿತು. ನೌಫಾಲ್‌ನನ್ನು ಫೈರುಝ್



ನಗರದಿಂದ ಕರೆದುಕೊಂಡು ಹೋಗಿ ಹತ್ಯೆ ಮಾಡಿರಬೇಕು ಎಂದು ಸಂಶಯ ಬಲವಾಗಿತ್ತು. ಪೊಲೀಸರು ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ಫಾರೆನ್ಸಿಕ್ ತಜ್ಞರಿಂದ ನಡೆಸಬೇಕು ಎನ್ನುವ ಕಾರಣಕ್ಕಾಗಿ ಮೃತದೇಹವನ್ನು ಕಾಸರಗೋಡು ಜನರಲ್ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆದು ರಾತ್ರಿ ವೇಳೆಗೆ ಮೃತದೇಹವನ್ನು ಸಂಬಂಧಿಕರಿಗೆ ಬಿಟ್ಟುಕೊಡಲಾಯಿತು. ಅಡ್ಯಾರ್ ಕಣ್ಣೂರಿನ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಅಂತಿಮ ಸಂಸ್ಕಾರ ನಡೆಸಲಾಯಿತು.

ನೌಫಾಲ್‌ನನ್ನು ವಿರೋಧಿ ತಂಡ ಮಾದಕ ದ್ರವ್ಯ ಮಾರಾಟ ವಿವಾದಕ್ಕೆ ಸಂಬಂಧಿಸಿದಂತೆ ಉಪಾಯದಲ್ಲಿ ಕರೆಸಿಕೊಂಡು ಹತ್ಯೆ ಮಾಡಿರಬೇಕು ಎಂಬ ಅಂಶವೇ ಬಲವಾಗಿತ್ತು. ಆದರೆ ಮರಣೋತ್ತರ ಪರೀಕ್ಷೆಯಲ್ಲಿ ರೈಲು ಢಿಕ್ಕಿ ಹೊಡೆದು ಸಾವು ಸಂಭವಿಸಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿರುವುದರಿಂದ ಮುಂದಿನ ತನಿಖೆಯನ್ನು ಮಂಜೇಶ್ವರ ಪೊಲೀಸರು ಕಾಸರಗೋಡು ರೈಲ್ವೇ ಪೊಲೀಸರಿಗೆ ಹಸ್ತಾಂತರಿಸಲಿದ್ದಾರೆ. ಅಲ್ಲಿಗೇ ನೌಫಾಲ್ ಕಥೆ ಮುಗಿದಂತೆ.

ಬದಲಾದ ಕಾಲಘಟ್ಟದಲ್ಲಿ ದಾಂಪತ್ಯಗಳು ಚಿಕ್ಕಪುಟ್ಟ ವಿಚಾರಕ್ಕೆ ಮುರಿದು ಬೀಳುತ್ತಿವೆ. ಅಷ್ಟೇ ಆಗಿದ್ದರೆ ಪರ್ವಾಗಿರಲಿಲ್ಲ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡನೇ ಮುಹೂರ್ತ ಫಿಕ್ಸ್ ಮಾಡುವ ಕಲಿಕಾಲ ಶುರುವಾಗಿದೆ. ಇನ್ನೊಬ್ಬರನ್ನು ಕೊಂದು ತಾವು ಸುಖವಾಗಿರುತ್ತೇವೆ ಎಂಬ ಭ್ರಮೆಯಲ್ಲಿ ಬಹುಜನ ಕೊಲೆಯನ್ನು ಮಾಡುತ್ತಿದ್ದಾರೆ. ಆದರೆ ಕಾನೂನು ಮತ್ತು ಕರ್ಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಜೈಲ್ ಸೇರುತ್ತಿದ್ದಾರೆ. ಇಂತಹ ಘಟನೆಗಳು ಸಾವಿರಾರು ನಮ್ಮ ಮುಂದೆ ನಡೆಯುತ್ತಿದ್ದರೂ ಅದನ್ನು ನೋಡಿ ತಿದ್ದಿಕೊಳ್ಳದೆ ಚಿಕ್ಕಪುಟ್ಟ ವಿಚಾರಕ್ಕೆ ಕಿರಿಕ್ ಮಾಡಿಕೊಂಡ ಹೆಂಡತಿ ಗಂಡನನ್ನು ಮುಗಿಸುವ ಪ್ಲಾನ್ ಮಾಡಿ ಅಂದರ್ ಆಗಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

# ಗಂಡನ ಕೊಲೆಗೆ ಸ್ಕೆಚ್ ಹಾಕಿ ಸಿಕ್ಕಿಬಿದ್ದ ಮಿಟುಕಲಾಡಿ ಪತ್ನಿ!

**ಮೈಸೂರು**

✍ ಬಿ.ಎಂ. ಲವಕುಮಾರ್


ರಾಜೇಂದ್ರ



ನಮಗೆ ಇಷ್ಟವಾಗಿಲ್ಲ ಅಥವಾ ಹೊಂದಾಣಿಕೆ ಆಗುತ್ತಿಲ್ಲ ಎಂಬ ಕಾರಣಕ್ಕೆ ಕೊಲೆ ಮಾಡುವುದಾದರೆ ಈ ಸಮಾಜದಲ್ಲಿ ಜನರೇ ಇರುತ್ತಿರಲಿಲ್ಲವೇನೋ? ಬಹಳಷ್ಟು ಗಂಡ ಹೆಂಡಿರು ಹೊಂದಾಣಿಕೆ ಮಾಡಿಕೊಂಡು ಹೋಗುತ್ತಿರುವುದರಿಂದಲೇ ಇಂದಿಗೂ ಕುಟುಂಬ ವ್ಯವಸ್ಥೆ ಉಳಿದಿದೆ. ಆದರೆ ಇವತ್ತಿನ ಗಂಡ ಹೆಂಡತಿಯರು ಇಗೋ ಬೆಳೆಸಿಕೊಳ್ಳುತ್ತಿರುವ ಕಾರಣದಿಂದಾಗಿ ಹಠಕ್ಕೆ ಬಿದ್ದು ಸಂಸಾರವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಇಷ್ಟೇ ಆಗಿದ್ದರೆ ಹೋಗಲಿ ಎಂದು ಸುಮ್ಮನೆ ಆಗಿ ಬಿಡಬಹುದಿತ್ತು. ಆದರೆ ಅದು ಆಗುತ್ತಿಲ್ಲ. ಬಹುತೇಕ ಸಂಸಾರಗಳ ಮನಸ್ತಾಪಗಳು ಸಮಾಧಾನದಿಂದ ಬಗೆಹರಿಯದೆ ಕೊಲೆಯಲ್ಲಿ ಅಂತ್ಯ ಕಾಣುವುದು ದುರ್ದೈವದ ಸಂಗತಿಯಾಗಿದೆ.

ಗಂಡನನ್ನು ಸಹಿಸಿಕೊಂಡು ಸಂಸಾರವನ್ನು ನಡೆಸಿಕೊಂಡು ಹೋಗುತ್ತಿರುವ ಬಹುತೇಕ ಹೆಣ್ಣು ಮಕ್ಕಳು ತಮ್ಮ ನೋವುಗಳನ್ನು ಹೊರಗೆ ತೋರಿಸಿಕೊಳ್ಳದೆ ಬದುಕುತ್ತಿದ್ದಾರೆ. ಆದರೆ ಇತ್ತೀಚೆಗಿನ ಯುವ ಜನತೆ ಚಿಕ್ಕ, ಚಿಕ್ಕ ವಿಚಾರಕ್ಕೂ ಜಗಳ ಮಾಡಿಕೊಳ್ಳುತ್ತಿದ್ದು, ಸೋಲನ್ನು ಒಪ್ಪಿಕೊಳ್ಳದೆ


ರಾಜೇಂದ್ರನೊಂದಿಗೆ ಸಂಗೀತಾ

ಹಠಕ್ಕೆ ಬೀಳುತ್ತಿದ್ದಾರೆ. ಹೀಗಾಗಿ ತಾವೇ ಹೊಂದಾಣಿಕೆ ಮಾಡಿಕೊಂಡು ಸಂಸಾರವನ್ನು ಸರಿಪಡಿಸಿಕೊಂಡು ಮುನ್ನಡೆಯ ಬಹುದಾದ ಜಾಗದಲ್ಲಿ ಕಂದಕವನ್ನು ನಿರ್ಮಿಸಿಕೊಂಡು ಸಂಬಂಧವನ್ನು ಶಾಶ್ವತವಾಗಿ ಕಡಿದುಕೊಳ್ಳುವ ಮಟ್ಟಕ್ಕೆ ಹೋಗುತ್ತಿದ್ದಾರೆ.


ಒಂದು ವೇಳೆ ಗಂಡ-ಹೆಂಡಿರು ಜಗಳ ಮಾಡಿಕೊಂಡು ಇನ್ಮುಂದೆ ಸಂಸಾರ ನಡೆಸಲು ಸಾಧ್ಯವಿಲ್ಲ ಎನ್ನುವುದಾದರೆ ಅವರವರ ಪಾಡಿಗೆ ಇದ್ದು ಬಿಡಬಹುದು. ಆದರೆ ಅಷ್ಟಕ್ಕೆ ಅವರ ಅಸಮಾಧಾನಗಳು ನಿಲ್ಲುವುದಿಲ್ಲ. ಕೆಲವೊಮ್ಮೆ ಕೊಲೆ ಮಾಡುವ ಮಟ್ಟಕ್ಕೆ ಹೋಗಿ ಬಿಡುತ್ತವೆ. ಇಂತಹ ನಿರ್ಧಾರ ಮಾಡುವ ಮುನ್ನ ಯೋಚಿಸಿದರೆ ಪೊಲೀಸ್, ಜೈಲ್, ಕೋರ್ಟ್ ನ ರಗಳೆಯಿಲ್ಲದೆ ನೆಮ್ಮದಿಯಾಗಿ ಬದುಕ ಬಹುದು. ಆದರೆ ಆ ಸಂದರ್ಭದಲ್ಲಿ ಆದ್ಯಾವುದರ ಆಲೋಚನೆ ಬರುವುದಿಲ್ಲ. ಕೊಲೆ ಮಾಡಿ ದಕ್ಕಿಸಿಕೊಳ್ಳಬಹುದು ಎಂದು ಕೊಳ್ಳುತ್ತಾರೆ. ಆದರೆ ಕರ್ಮ ನಮ್ಮನ್ನು ಬಿಡಲ್ಲ ಅದಕ್ಕೆ ಕಂದಾಯ ಕಟ್ಟಲೇ ಬೇಕಾಗುತ್ತದೆ.


ಮೈಸೂರು ಜಿಲ್ಲೆಯ ನಂಜನಗೂಡು ಪಟ್ಟಣದಲ್ಲಿ ಹೆಂಡತಿಯಿಂದಲೇ ಗಂಡನ ಹತ್ಯೆಗೆ ಸಂಚು ರೂಪಿಸಿದ ಘಟನೆ ಇದೀಗ ಬಯಲಾಗಿದ್ದು, ಈ ಘಟನೆಯಿಂದ ಜನ ಬೆಚ್ಚಿ ಬಿದ್ದಿದ್ದಾರೆ. ಇಷ್ಟು ಚಿಕ್ಕ ವಿಚಾರಕ್ಕೆ ಕೊಲೆ ಮಾಡಲು ಆಕೆ ಮುಂದಾದಳಾ? ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ. ಗಂಡನ ಜತೆಗೆ ತುಂಬಾ ಚೆನ್ನಾಗಿ ಇರುವಂತೆ ನಾಟಕವಾಡುತ್ತಲೇ ಆತನ ಬೆನ್ನಿಗೆ ಚೂರಿ ಇರಿಯುವ ಮಟ್ಟಕ್ಕೆ ಹೋಗಿರುವ ಆಕೆಯ ದುರ್ಬುದ್ದಿಗೆ ಜನ ಹಿಡಿಶಾಪ ಹಾಕುತ್ತಿದ್ದಾರೆ. ಆತ ಅದೃಷ್ಟವಶಾತ್ ಬದುಕಿ ಉಳಿದಿದ್ದಾನೆ. ಇವತ್ತಲ್ಲ ನಾಳೆ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳಬಹುದು. ಆದರೆ ಜೈಲ್ ಸೇರಿರುವ ಆಕೆ ಯಾವಾತ್ತಾದರೂ ಜೈಲಿನಿಂದ ಮರಳಿದರೂ ನೆಮ್ಮದಿಯಾಗಿ ಬದುಕೋಕೆ ಸಾಧ್ಯನಾ?

ಇಷ್ಟಕ್ಕೂ ಗಂಡನ ಕೊಲೆಗೆ ಸ್ಕೆಚ್ ಹಾಕಿದ ತಾಟಕಿ ಯಾರು? ಕೃತ್ಯದ ಪ್ಲಾನ್ ಮಾಡಿದ್ದಾದರೂ ಏಕೆ? ಎಂಬುದನ್ನು ನೋಡುತ್ತಾ ಹೋದರೆ ಮೇಲ್ನೋಟಕ್ಕೆ ಕೊಲೆಗೆ ಹೇಳಿಕೊಳ್ಳುವ ಗಂಭೀರ ಕಾರಣಗಳು ಕಾಣುತ್ತಿಲ್ಲ. ಹಾಗಾದರೆ ಚಿಕ್ಕಪುಟ್ಟ ಕಾರಣಕ್ಕೆ ಕೊಲೆ ಮಾಡಲು ಮುಂದಾಗಿ ಬಿಟ್ಟಳಾ ಎಂಬ ಪ್ರಶ್ನೆಗಳು ಕಾಡಲಾರಂಭಿಸಿವೆ. ಈ ಪ್ರಕರಣದ ಪ್ರಮುಖ ಆರೋಪಿ ನಂಜನಗೂಡು ನಿವಾಸಿ ಸಂಗೀತಾ... ಈಕೆ ಕಂಪ್ಯೂಟರ್ ಆಪರೇಟರ್ ಆಗಿದ್ದು ರಾಜೇಂದ್ರ ಎಂಬಾತನನ್ನು ಮದುವೆಯಾಗಿ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಳು.

ಗಂಡ ರಾಜೇಂದ್ರ ಫೈಬರ್ ಡೋರ್‌ಗಳನ್ನು ಫಿಟ್ ಮಾಡುವ ಕೆಲಸ ಜತೆಗೆ ಕಾರ್ಪೆಂಟರ್ ಕೆಲಸ ಮಾಡಿಕೊಂಡಿದ್ದನು. ಇವರ ಸಂಸಾರ ಚೆನ್ನಾಗಿ ನಡೆದುಕೊಂಡು ಹೋಗುತ್ತಿತ್ತು. ಮೊದಲಿಗೆ ಎಲ್ಲವೂ ಚೆನ್ನಾಗಿಯೇ ಇತ್ತು ಎಂಬುದಕ್ಕೆ ಅವರು ತೆಗೆಸಿಕೊಂಡಿರುವ ಫೋಟೋಗಳೇ ಸಾಕ್ಷಿಯಾಗಿವೆ.


ಎಸ್ಪಿ ವಿಷ್ಣುವರ್ಧನ್


ಡಿವೈಎಸ್ಪಿ ರಘು


ಸಿಪಿಐ ಸಿ.ಎಂ. ರಾಜೇಂದ್ರ

ಸಂಗೀತಾ ಮತ್ತು ರಾಜೇಂದ್ರ ನಡುವೆ ಇತ್ತೀಚೆಗಿನ ದಿನಗಳಲ್ಲಿ ಭಿನ್ನಾಭಿಪ್ರಾಯ ಶುರುವಾಗಿತ್ತು ಎನ್ನಲಾಗಿದೆ. ಈ ನಡುವೆ ಸಂಗೀತ ತನ್ನ ಸಹೋದರ ಸಂಜಯ್‌ಗೆ ಕಾರು ತೆಗೆದುಕೊಡಲು ಸಹಾಯ ಮಾಡಿದ್ದಳು ಎನ್ನಲಾಗುತ್ತಿದ್ದು, ಈ ವಿಚಾರದಲ್ಲಿ ಗಂಡ ರಾಜೇಂದ್ರ ಗರಂ ಆಗಿದ್ದನು. ಇದು ಸಂಸಾರದಲ್ಲಿ ಇನ್ನಷ್ಟು ಬಿರುಕು ಮೂಡಲು ಕಾರಣವಾಯಿತು ಎನ್ನಲಾಗುತ್ತಿದೆ. ಗಂಡ ಹೆಂಡಿರು ಜಗಳವನ್ನು ತಾವೇ ಸರಿಪಡಿಸಿಕೊಳ್ಳದೆ ರಾಡಿ ಮಾಡಿಕೊಂಡಿದ್ದರು. ಇದೆಲ್ಲದರ ನಡುವೆ ಸಂಗೀತಾಳಿಗೆ ಗಂಡ ರಾಜೇಂದ್ರನನ್ನು ಮುಗಿಸುವ ಮಟ್ಟಿಗೆ ಕೋಪ ಬಂದು ಬಿಟ್ಟಿತು.

ಭಿನ್ನಾಭಿಪ್ರಾಯಗಳು ತಾರಕಕ್ಕೇರಿ ಒಳಗೊಳಗೆ ದ್ವೇಷ ಹೊಗೆಯಾಡುತ್ತಿತ್ತು. ರಾಜೇಂದ್ರ ಜಗಳವಾಡುತ್ತಿದ್ದನಾದರೂ ಹೆಂಡತಿಯನ್ನು ಕೊಲೆ ಮಾಡುವ ಆಲೋಚನೆ ಆತ ಕನಸು ಮನಸಲ್ಲೂ ಯೋಚಿಸಿರಲಿಲ್ಲ. ಎಲ್ಲವೂ ಸರಿ ಹೋಗಿ ತಮ್ಮ ಬದುಕು ಸುಖಮಯವಾಗುತ್ತದೆ ಎಂದು ನಂಬಿದ್ದನು. ಆದರೆ ಸಂಗೀತ ತನ್ನ ಗಂಡ ರಾಜೇಂದ್ರನ ಬಗ್ಗೆ ಸಹೋದರ ಸಂಜಯ್ ಗೆ ಹೇಳಿದ್ದು, ಆತ ಅಕ್ಕನ ಸಂಸಾರವನ್ನು ನೆಟ್ಟಗೆ ಮಾಡುವ ಬದಲು ಬಾವನನ್ನೇ ಮುಗಿಸಲು ಅಕ್ಕನಿಗೆ ಬೆಂಗಾವಲಾಗಿ ನಿಂತು ಬಿಟ್ಟನು.

ತಮ್ಮನೇ ತನ್ನ ಸಹಾಯಕ್ಕೆ ನಿಂತ ಮೇಲೆ ಇನ್ನೇನಾಗಬೇಕು? ಅಕ್ಕ ಸಂಗೀತ ತನ್ನ ಗಂಡನ ಮುಗಿಸಲು ತಮ್ಮ ಸಂಜಯ್‌ಗೆ ಗ್ರೀನ್ ಸಿಗ್ನಲ್ ನೀಡಿದ್ದಳು. ಆದರೆ ಕೊಲೆಯನ್ನು ಯಾರಿಗೂ ಗೊತ್ತಾಗದಂತೆ ಮತ್ತು ಅನುಮಾನ ಬಾರದಂತೆ ಮಾಡಲು ತಮ್ಮನೊಂದಿಗೆ ಪ್ಲಾನ್ ಮಾಡಿದ್ದಳು. ಈ ಕೊಲೆಯನ್ನು ಒಬ್ಬರಿಂದ ಮಾಡಲು ಸಾಧ್ಯವಿಲ್ಲದ ಕಾರಣದಿಂದ ಸಂಜಯ್ ಗೆಳೆಯನಾದ ವಿಘ್ನೇಶ್ ಹಾಗೂ ಮತ್ತೊಬ್ಬ ಅಪ್ರಾಪ್ತನನ್ನು ಸೇರಿಸಿಕೊಂಡಿದ್ದನು. ಹೀಗೆ ಮೂವರು ಹಾಗೂ ಸಂಗೀತ ಸೇರಿ ಕೊಲೆಗೆ ಸಂಚು ಮಾಡಿದ್ದರು.

ಅತ್ತ ಗಂಡನ ಕೊಲೆಗೆ ತಮ್ಮನಿಗೆ ಸಾಥ್ ನೀಡಿದ ಸಂಗೀತ ಇತ್ತ ಗಂಡನೊಂದಿಗೆ ಇದ್ದುಕೊಂಡೇ ಆತನ ಚಲನವಲನದ ಬಗ್ಗೆ ತಮ್ಮನಿಗೆ ಮಾಹಿತಿ ನೀಡಲಾರಂಭಿಸಿದ್ದಳು. ಅಷ್ಟೇ ಅಲ್ಲದೆ ಗಂಡನಿಗಾಗಲೀ ಪೊಲೀಸ



ಆರೋಪಿಗಳಾದ ವಿಘ್ನೇಶ್ ಹಾಗೂ ಸಂಜಯ್

☞ 13

# ಮಳವಳ್ಳಿ ಬಾಚನಹಳ್ಳಿಯಲ್ಲಿ ಸಂಭವಿಸಿದ ಭೀಕರ ಬಸ್ ಅಪಘಾತಕ್ಕೆ ಕಾರಣವೇನು?


ನಜ್ಜುಗುಜ್ಜಾಗಿರುವ ಬಿಎಂಟಿಸಿ ಬಸ್

**ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಬಾಚನಹಳ್ಳಿ ಬಳಿಯಲ್ಲಿ ಕಳೆದ ಅಕ್ಟೋಬರ್ 20ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೊಳ್ಳೇಗಾಲ ಡಿಪೋ ಒಂದು ಬಸ್ ಹಾಗೂ ಬೆಂಗಳೂರು ಕೆಂಗೇರಿ ಡಿಪೋ ಎರಡು ಬಿಎಂಟಿಸಿ ಬಸ್‌ಗಳ ನಡುವೆ ಭೀಕರ ಅಪಘಾತ ಸಂಭವಿಸಿ ನಾಲ್ವರು ಪ್ರಯಾಣಿಕರು ಸತ್ತು, 30ಕ್ಕೂ ಹೆಚ್ಚು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡು ಮಳವಳ್ಳಿ ಕೊಳ್ಳೇಗಾಲ ಮಂಡ್ಯ ಹಾಗೂ ಮೈಸೂರಿನ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆಯು ಸ್ಥಳೀಯರಲ್ಲಿ ಆತಂಕವನ್ನುಂಟು ಮಾಡಿದ್ದಲ್ಲದೆ ರಾಜ್ಯದ ರಸ್ತೆ ಸುರಕ್ಷತೆಯ ಬಗ್ಗೆ ಚರ್ಚೆಗೆ ಗ್ರಾಸವಾಗಿದೆ.**

**ಮಂಡ್ಯ**


✍ಮಹದೇವ್ ಕೆಂಪಯ್ಯ

ಈ ಭೀಕರ ಅಪಘಾತವು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಬಾಚನಹಳ್ಳಿ ಗ್ರಾಮದ ಸಮೀಪ ರಾಜ್ಯ ಹೆದ್ದಾರಿಯಲ್ಲಿ ಸಂಭವಿಸಿದೆ. ಮೂರು ಕೆಎಸ್‌ಆರ್ ಟಿಸಿ ಬಸ್‌ಗಳು ಈ ಘಟನೆಯಲ್ಲಿ ನಜ್ಜು ಗುಜ್ಜಾಗಿವೆ. ಕೊಳ್ಳೇಗಾಲದಿಂದ ಬೆಂಗಳೂರಿಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ರೂಟ್ ನಂ. 79, ಕೆಎ-10 ಎಫ್-0458) ಹಾಗೂ ಬೆಂಗಳೂರು ಸಿಟಿಯಿಂದ ಕೊಳ್ಳೇಗಾಲದ ಕಡೆ ಬರುತ್ತಿದ್ದ ಬಿಎಂಟಿಸಿ ಬಸ್ (ಕೆಎ-57 ಎಫ್4775) ಮೊದಲಿಗೆ ಒಂದಕ್ಕೊಂದು ಡಿಕ್ಕಿ ಹೊಡೆದಿವೆ. ಅನಂತರ ಬೆಂಗಳೂರು ಕಡೆಯಿಂದ ಬಂದಂತ ಇನ್ನೊಂದು ಬಸ್ (ಕೆಎ-37 ಎಫ್ 5064) ಕಂಟ್ರೋಲ್ ತಪ್ಪಿ ಅದಾಗಲೇ ಅಪಘಾತಕ್ಕಿಡಾಗಿ ನಿಂತಿದ್ದ ಬಿಎಂಟಿಸಿ ಬಸ್ ನ ಹಿಂಬದಿಗೆ ಡಿಕ್ಕಿ ಹೊಡೆದಿದೆ!



ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ

ಮೊದಲೇ ಎರಡು ಬಸ್‌ಗಳು ಮುಖಾಮುಖಿ ಡಿಕ್ಕಿಯಾಗಿದ್ದು, ಈ ಡಿಕ್ಕಿಯಿಂದಾಗಿ ಎರಡೂ ಬಸ್‌ಗಳು ರಸ್ತೆಯ ಮಧ್ಯದಲ್ಲಿ ನಿಂತಿದ್ದು ಈ ಸಂದರ್ಭದಲ್ಲಿ, ಹಿಂದಿನಿಂದ ಬಂದ ಮತ್ತೊಂದು ಬಸ್ ಈಗಾಗಲೇ ಡಿಕ್ಕಿಯಾದ ಬಸ್‌ಗೆ ಗುದ್ದಿದ್ದರಿಂದ ದುರಂತದ ತೀವ್ರತೆಯು ಇನ್ನಷ್ಟು ಹೆಚ್ಚಾಗಿದೆ. ಸ್ಥಳದಲ್ಲೇ ಮೂವರು ಸತ್ತಿದ್ದು ಇನ್ನೊಬ್ಬರು ಆಸ್ಪತ್ರೆಯಲ್ಲಿ ಸತ್ತಿದ್ದಾರೆಂದು ತಿಳಿದು ಬಂದಿದೆ.

ಈ ಭೀಕರ ಅಪಘಾತದಲ್ಲಿ ಗಾಯಗೊಂಡ ಸುಮಾರು 40ಕ್ಕೂ ಹೆಚ್ಚು ಪ್ರಯಾಣಿಕರನ್ನು ತಕ್ಷಣವೇ ಕೊಳ್ಳೇಗಾಲ ಮಳವಳ್ಳಿ ಮತ್ತು ಮಂಡ್ಯ ಮೈಸೂರು ಜಿಲ್ಲಾಸ್ಪತ್ರೆಗಳಿಗೆ ಕೊಂಡೊಯ್ಯಲಾಗಿದೆ. ಕೆಲವರಿಗೆ ಸಣ್ಣಪುಟ್ಟ ಗಾಯಗಳಾದರೆ, ಕೆಲವರಿಗೆ ಗಂಭೀರ ಗಾಯಗಳಾಗಿವೆ ಎಂದು ವೈದ್ಯಕೀಯ ವರದಿಗಳು ತಿಳಿಸಿವೆ.


ಮಳವಳ್ಳಿ ರೂರಲ್ ಸಿಪಿಐ ಮಹೇಶ್


ಹಲಗೂರು ಸಿಪಿಐ ಶ್ರೀಧರ್


ಭೀಕರ ಅಪಘಾತದ ದೃಶ್ಯ

ಅಲ್ಲಿನ ವೈದ್ಯರು ಗಾಯಾಳುಗಳಿಗೆ ತುರ್ತು ಚಿಕಿತ್ಸೆಯನ್ನು ಒದಗಿಸುತ್ತಿದ್ದಾರೆ, ಮತ್ತು ಕೆಲವು ಗಂಭೀರವಾಗಿ ಗಾಯಗೊಂಡವರಿಗೆ ಶಸ್ತ್ರಚಿಕಿತ್ಸೆ ನಡೆದಿದೆ. ಕೆಲವರಿಗೆ ಮೂಗೇಟು ಬಿದ್ದಿದ್ದು ಅವರ ನೋವು ಯಾತನೆ ವೈದ್ಯರಿಗೂ ಅರ್ಥವಾಗದೆ ಪೈನ್ ಕಿಲ್ಲರ್ ಇಂಜೆಕ್ಷನ್ ಮಾತ್ರೆ ಕೊಟ್ಟು ಸಮಾಧಾನ ಪಡಿಸುತ್ತಿದ್ದಾರೆ.ಇನ್ನು ಅಪಘಾತ ಸಂಭವಿಸಿದ ಸ್ಥಳಕ್ಕೆ ಮಳವಳ್ಳಿ ಗ್ರಾಮಾಂತರ ಠಾಣೆಯ ಪೊಲೀಸರು ಭೇಟಿ ನೀಡಿ, ಘಟನೆಯ ಸಂಪೂರ್ಣ ಪರಿಶೀಲನೆ ನಡೆಸಿದ್ದಾರೆ.


ಗಾಯಗೊಂಡ ಮಗುವನ್ನು ರಕ್ಷಿಸಿದ ಸಿಪಿಐ ಶ್ರೀಧರ್

ಅಂದು ಮಳವಳ್ಳಿ ಗ್ರಾಮಾಂತರ ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಅವರು ರಜೆಯ ಮೇಲಿದ್ದು, ಹಲಗೂರು ಸಿಪಿಐ ಶ್ರೀಧರ್ ಇನ್ ಚಾರ್ಜ್ ಇದ್ದು, ಅವರಂತೂ ಘಟನಾ ಸ್ಥಳದಲ್ಲಿ ಚಿಗರೆಯಂತೆ ಓಡಾಡುತ್ತ ಗಾಯಳುಗಳನ್ನು ರಕ್ಷಣೆ ಮಾಡಿದ್ದಾರೆ. ಸಣ್ಣ ಪುಟ್ಟ ಮಕ್ಕಳನ್ನು ಬಾಚಿ ತಬ್ಬಿಕೊಂಡು ಪೊಲೀಸ್ ಆಂಬುಲೆನ್ಸ್ ಪೊಲೀಸ್ ಜೀಪ್ ಸೇರಿದಂತೆ ವಿವಿಧ ವಾಹನಗಳಲ್ಲಿ ಆಸ್ಪತ್ರೆಗಳಿಗೆ ಸಾಗಿಸಿ ಹತ್ತಾರು ಜೀವ ಉಳಿಸಿದ್ದಾರೆ.

ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಅಪಘಾತದ ಕಾರಣವನ್ನು ಕಂಡುಹಿಡಿಯಲು ತನಿಖೆಯನ್ನು ಆರಂಭಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ, ಚಾಲಕರ ಅಗತ್ಯ ಎಚ್ಚರಿಕೆಯ ಕೊರತೆ, ರಸ್ತೆಯ ಸ್ಥಿತಿಗತಿ, ಮತ್ತು ವೇಗದ ಸಮಸ್ಯೆಗಳು ಅಪಘಾತಕ್ಕೆ ಕಾರಣವಿರಬಹುದು ಎಂದು ಶಂಕಿಸಲಾಗಿದೆ. ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾಗಳಿಲ್ಲದ ಕಾರಣ, ಸಾಕ್ಷಿಗಳ ಹೇಳಿಕೆಗಳು ಮತ್ತು ಚಾಲಕರ ಹೇಳಿಕೆ ಆಧರಿಸಿ ತನಿಖೆ ನಡೆಯುತ್ತಿದೆ. ಕೊಳ್ಳೇಗಾಲ ಡಿಪೋ ಚಾಲಕರ ಹೇಳಿಕೆ ಪ್ರಕಾರ, ಡಿಪೋ ಮ್ಯಾನೇಜರ್ ಹಾಗೂ ಚಾಮರಾಜನಗರ ಜಿಲ್ಲಾ ವಿಭಾಗೀಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಬಸ್‌ಗಳಿಗೆ ಸರಿಯಾಗಿ ಟೈರ್ ಕೊಡದೆ ಸತಾಯಿಸುತ್ತಿದ್ದೂ, ಅಂದು ಹಳೆಯ ಟೈರ್ ಸಿಡಿದು ಈ ಭೀಕರ ಅಪಘಾತ ಸಂಭವಿಸಿದೆಯಂತೆ!


ಗಾಯಗೊಂಡ ಚಾಲಕರು

ಮಳವಳ್ಳಿ ಪೊಲೀಸ್ ಅಧಿಕಾರಿಗಳು ಈ ನಿಟ್ಟಿನಲ್ಲೂ ತನಿಖೆ ನಡೆಸುತ್ತಿದ್ದಾರೆ. ಈ ನಡುವೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿ ಕಾರಿಗಳು ಈ ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಗಾಯಾಳುಗಳಿಗೆ ತಕ್ಷಣದ ಚಿಕಿತ್ಸೆ ಮತ್ತು ಸೂಕ್ತ ಪರಿಹಾರವನ್ನು ಒದಗಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದಾರೆ. ಜೊತೆಗೆ, ಈ ರೀತಿಯ ಘಟನೆಗಳು ಮರುಕಳಿಸದಂತೆ ತಡೆಯಲು ಚಾಲಕರಿಗೆ ಹೆಚ್ಚಿನ ತರಬೇತಿ ಮತ್ತು ರಸ್ತೆ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಭರವಸೆಯನ್ನು ಕೆಎಸ್‌ಆರ್‌ಟಿಸಿ ನೀಡಿದ್ದಾರೆ. ಇವರು ಬಸ್ ಗಳಿಗೆ ಟೈರ್ ಟ್ಯೂಬ್ ಕೊಡದೆ ಹಳೇ ಟೈರ್ ಕೊಡದೆ ಸತಾಯಿಸುವಾಗ, ಪಾಪದ ಚಾಲಕರು ಹಳೇ ಟೈರ್ ಅನ್ನೇ ಅಡ್ಜೆಸ್ಟ್ ಮಾಡಿಕೊಂಡು ಓಡಿಸುವಾಗ... ಅಪಘಾತ ವಾಗದೆ ಇನ್ನೇನಾದೀತು?? ಈಗ ಜನ ಸತ್ತು ಕೈಕಾಲು ಮುರಕೊಂಡು ಆಸ್ಪತ್ರೆ ಸೇರಿದ ಬಳಿಕ ಓಡಿ ಬಂದು ವೇದಾಂತ ಮಾತಾಡುತ್ತಿದ್ದಾರೆ ಎಂದು ಜನ ಆಡಿಕೊಂಡು ಶಪಿಸುತ್ತಿದ್ದಾರೆ!

ಒಟ್ಟಾರೆ, ಈ ಘಟನೆಯು ಕರ್ನಾಟಕದ ರಾಜ್ಯ ಹೆದ್ದಾರಿಗಳಲ್ಲಿ ರಸ್ತೆ ಸುರಕ್ಷತೆಯ ಕೊರತೆಯನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ. ಚಾಲಕರಿಗೆ ಸೂಕ್ತ ತರಬೇತಿ, ರಸ್ತೆಯ ಗುಣಮಟ್ಟ ಸುಧಾರಣೆ, ಮತ್ತು ವಾಹನಗಳ ನಿಯಮಿತ ತಪಾಸಣೆಯ ಅಗತ್ಯವನ್ನು ಈ ದುರಂತವು ಒತ್ತಿ ಹೇಳುತ್ತದೆ. ಸ್ಥಳೀಯರು ಈ ರೀತಿಯ ಘಟನೆಗಳನ್ನು ತಡೆಗಟ್ಟಲು ಸರ್ಕಾರ ಮತ್ತು ಸಾರಿಗೆ ಸಂಸ್ಥೆಗಳು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.


ಕಾಲುಗಳನ್ನು ಕಳೆದುಕೊಂಡ ಚಾಲಕ

ಕೊಳ್ಳೇಗಾಲ ಡಿಪೋ ಚಾಲಕರ ಆರೋಪವೇ ನಿಜವಾಗಿದ್ದರೆ, ಮೊದಲು ಇದಕ್ಕೆ ಡಿಪೋ ಮ್ಯಾನೇಜರ್, ವಿಭಾಗೀಯ ನಿಯಂತ್ರಣ ಅಧಿ ಕಾರಿ ವಿರುದ್ಧ ಮೊಕದ್ದಮೆ ದಾಖಲಿಸಿ ತನಿಖೆ ನಡೆಸಿ ಇವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಿದೆ!!

ಇನ್ನೊಂದು ಬಹು ಮುಖ್ಯ ವಿಚಾರವೇನು ಅಂದ್ರೆ, ಮೃತರ ಕುಟುಂಬಕ್ಕೆ ಸರ್ಕಾರದಿಂದ ಇಂತಿಷ್ಟು ಅಂತ ಪರಿಹಾರ ಸಿಕ್ಕೇ ಸಿಗುತ್ತದೆ. ಆದರೆ, ಈಗ ಕೈಕಾಲು


ಮೃತ ಮಹಿಳೆ

☞14

# ದನ ಸಾಗಾಟಗಾರರಿಗೆ ಬಿತ್ತು ಪೊಲೀಸ್ ಗುಂಡು!

**ದಕ್ಷಿಣ ಕನ್ನಡ**

**ಮೋಹನ್ ಬೋಳಂಗಡಿ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಸಾಮರಸ್ಯ ಕದಡಲು ಮೂಲ ಕಾರಣವಾಗಿರುವುದು ಅಕ್ರಮ ಗೋ ಕಳ್ಳಸಾಗಾಣಿಕೆ. ರಾಜ್ಯದ ಮಲೆನಾಡು ಭಾಗದಿಂದ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ ಗೋವುಗಳನ್ನು ಕಳವುಗೈದು ಮಂಗಳೂರಿನ ವಿವಿಧೆಡೆ ಕಾರ್ಯಾಚರಿಸುತ್ತಿರುವಂತಹ ಅಕ್ರಮ ಗೋವಧಾ ಕೇಂದ್ರಗಳಿಗೆ ಮತ್ತು ಕಾಸರಗೋಡಿನ ಕಸಾಯಿಖಾನೆಗೆ ಸಾಗಿಸುವಂತಹ ವ್ಯವಸ್ಥಿತ ಜಾಲ ಇದೆ. ಇದನ್ನು ತಡೆಗಟ್ಟಲು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಅವಿರತವಾಗಿ ಶ್ರಮಿಸುತ್ತಿದ್ದಾರೆ.



ಪರಿಣಾಮವಾಗಿ ಆ ಕಾರ್ಯಕರ್ತರ ಮೇಲೆ ಲೆಕ್ಕವಿಲ್ಲದಷ್ಟು ಕೇಸುಗಳು ದಾಖಲಾಗಿವೆ. ಇದೇ ಪರಿಸ್ಥಿತಿ ಮುಂದುವರಿಯುತ್ತಿದೆ ಎನ್ನುವುದಕ್ಕೆ ಕೆಲವು ದಿನಗಳ ಹಿಂದೆ ಪುತ್ತೂರು ಗ್ರಾಮಾಂತರ ಪ್ರದೇಶದಲ್ಲಿ ನಡೆದಂತಹ ಪೊಲೀಸ್ ಶೂಟೌಟ್ ಉದಾಹರಣೆಯಾಗಿದೆ.

**ಸ್ವರ್ಗದ ದಾರಿ !**

ಸ್ವರ್ಗ ಎನ್ನುವುದು ಪರಲೋಕದಲ್ಲಿ ಸಿಗುವಂತಹ ಒಂದು ವ್ಯವಸ್ಥೆ ಎನ್ನುವ ಕಲ್ಪನೆ ಇದೆ. ಭೂಲೋಕದಲ್ಲಿ ಉತ್ತಮ ಕಾರ್ಯ ಮಾಡಿದವರಿಗೆ ಪರಲೋಕದಲ್ಲಿ ಸ್ವರ್ಗ ಸಿಗುತ್ತದೆ ಮತ್ತು ಇಹಲೋಕದಲ್ಲಿ ಅನ್ಯಾಯ ಅಕ್ರಮ







ಮಾಡಿದರೆ ನರಕದ ದಾರಿ ಕಾಣುತ್ತದೆ ಎಂಬ ನಂಬಿಕೆ ಇದೆ. ಸ್ವರ್ಗ ನರಕಗಳ ಕಲ್ಪನೆಯಲ್ಲಿಯೇ ಮಾನವ ಜೀವನ ನಿರ್ವಹಣೆ ಮಾಡುತ್ತಿರುತ್ತಾನೆ. ಆದರೆ ಭೂಲೋಕದಲ್ಲೂ ಒಂದು ಸ್ವರ್ಗ ಇದೆ. ಅದಕ್ಕೊಂದು ದಾರಿ ಇದೆ ಎಂದು ತಿಳಿಯಬೇಕಾದರೆ ಪುತ್ತೂರು ತಾಲೂಕಿನ ಗ್ರಾಮಾಂತರ ಪ್ರದೇಶಕ್ಕೆ ಬರಬೇಕು. ಇಲ್ಲಿನ ಒಂದು ಪ್ರದೇಶದ ಹೆಸರೇ ಸ್ವರ್ಗ. ಇಲ್ಲಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ನೇರವಾಗಿ ಕೇರಳವನ್ನು ಅದರಲ್ಲೂ ಕಾಸರಗೋಡು ಜಿಲ್ಲೆಯನ್ನು ಸಂಪರ್ಕಿಸುತ್ತದೆ. ಕರ್ನಾಟಕದಿಂದ ಯಾವುದಾದರೂ ಅಕ್ರಮ ಸಾಗಾಟದ ವ್ಯವಸ್ಥೆ ಇದ್ದರೆ ಅದಕ್ಕೆ ಹೇಳಿ ಮಾಡಿಸಿದಂತಹ ರಸ್ತೆ ಅಂದರೆ ಅದು ಸ್ವರ್ಗದ ದಾರಿ. ಈ ದಾರಿಯಲ್ಲಿ ಯಾವುದೇ ಚೆಕ್‌ಪೋಸ್ಟ್‌ಗಳು ಸಿಗುವುದಿಲ್ಲ, ಪೊಲೀಸರ ಗಸ್ತು ಇರುವುದಿಲ್ಲ. ಅಬಕಾರಿ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿಗಳು ಈ ದಾರಿಯತ್ತ ಕಣ್ಣೆತ್ತಿಯೂ ನೋಡುವುದಿಲ್ಲ. ಆದ್ದರಿಂದ ಬಹುತೇಕ ಕಳ್ಳಸಾಗಾಣಿಕೆಗಳು ಈ ದಾರಿಯಾಗಿಯೇ ನಡೆಯುತ್ತದೆ. ಕೆಲವು ದಶಕಗಳ ಹಿಂದೆ ಅಕ್ಕಿ ಕಳ್ಳಸಾಗಾಣಿಕೆ ಈ ದಾರಿಯ ಮೂಲಕ ನಡೆಯುತ್ತಿತ್ತು. ತದನಂತರ ಶ್ರೀಗಂಧದ ಕಳ್ಳಸಾಗಾಣಿಕೆ ನಡೆಯುತ್ತಿತ್ತು. ಕಾಸರಗೋಡಿನ ಶ್ರೀಗಂಧದ ಕಾರ್ಖಾನೆ ಮುಚ್ಚಲ್ಪಟ್ಟನಂತರ ಈ ದಾರಿಯು ಅಕ್ರಮ ಸಾರಾಯಿ ಸಾಗಾಟಕ್ಕೆ ಬಳಕೆಯಾಗುತ್ತಿತ್ತು. ಅದು ನಿಂತು ಹೋದ ಬಳಿಕ ಇದೀಗ ಅಕ್ರಮ ಗೋ ಸಾಗಾಣಿಕೆಗೆ ಬಳಕೆಯಾಗುತ್ತಿದೆ. ಈ ದಾರಿಯು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಿಂದ ಮೊದಲ್ಗೊಂಡು ಬೆಳ್ಳಾರೆ ಠಾಣಾ ವ್ಯಾಪ್ತಿಯನ್ನು ದಾಟಿ ಕಾಸರಗೋಡು ಜಿಲ್ಲೆಯ ಬದಿಯಡ್ಕ ಪೊಲೀಸ್ ಠಾಣಾ ವ್ಯಾಪ್ತಿಯ ಮೂಲಕ ಸಾಗುತ್ತದೆ. ಇಂತಹ ದಾರಿಯಲ್ಲಿ ಅಕ್ಟೋಬರ್ 22ರಂದು ಮುಂಜಾನೆಯ ವೇಳೆಗೆ ಪೊಲೀಸ್ ಕಾರ್ಯಾಚರಣೆಯೊಂದು ನಡೆದು ಅಕ್ರಮವಾಗಿ ಗೋ ಸಾಗಾಟ ಮಾಡುತ್ತಿದ್ದ ಕಾಸರಗೋಡು ಮೂಲದ ಅಬ್ದುಲ್ಲ ಎಂಬಾತನ ಕಾಲಿಗೆ ಗುಂಡು ಹೊಡೆಯಲಾಗಿದೆ. ಲಾರಿಯಲ್ಲಿದ್ದ 12 ಜಾನುವಾರುಗಳನ್ನು ರಕ್ಷಿಸಲಾಗಿದೆ.

ಇದು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ನಡೆದಂತಹ ಪ್ರಥಮ ಘಟನೆ. ಇದಕ್ಕೆ ಸಂಬಂಧಿಸಿದಂತೆ ಪರ ವಿರೋಧ ಚರ್ಚೆಗಳು ನಡೆದಿದೆ.

**ನಡೆದದ್ದೇನು?**

ಅಕ್ಟೋಬರ್ 22ರಂದು ಮುಂಜಾನೆ 4 ಗಂಟೆಯ ವೇಳೆಗೆ ಮಲಗಿದ್ದಂತಹ ಪುತ್ತೂರು ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜಂಬೂರಾಜ್ ಅವರಿಗೆ ಮಾಹಿತಿಯೊಂದು ಬಂದಿತ್ತು. ಪುತ್ತೂರು ಕಡೆಯಿಂದ ಈಚರ್ ಲಾರಿಯೊಂದರಲ್ಲಿ ಅಕ್ರಮವಾಗಿ ಕಾಸರಗೋಡು ಕಡೆಗೆ ಜಾನುವಾರುಗಳನ್ನು ಸಾಗಾಟ ಮಾಡಲಾಗುತ್ತಿದೆ ಎಂಬುದೇ ಆ ಮಾಹಿತಿಯಾಗಿತ್ತು. ಇದನ್ನು ಅನುಸರಿಸಿ ಕಾರ್ಯಪ್ರವೃತ್ತರಾದ ಎಸ್‌ಐ ಜಂಬೂರಾಜ್ ಅವರು ಠಾಣೆಗೆ ಬಂದು ಸಿಬ್ಬಂದಿಯವರನ್ನು ಜೋಡಿಸಿಕೊಂಡ ಸಂದರ್ಭದಲ್ಲಿ ಜಾನುವಾರುಗಳನ್ನು ಕೊಂಡೊಯ್ಯುತ್ತಿದ್ದ ಈಚರ್ ಲಾರಿ ಠಾಣೆಯ ಎದುರಿನಿಂದಲೇ ಮುಂದಕ್ಕೆ ಸಾಗಿತ್ತು. ಇದನ್ನು ಕಂಡ ಎಸ್‌ಐಯವರು ತನ್ನ ಇಲಾಖಾ




ಜೀಪಿನಲ್ಲಿ ಬೆನ್ನಟ್ಟಿದರು. ಈಚರ್ ಲಾರಿ ಠಾಣೆಯಿಂದ ಸುಮಾರು 3ಕಿ.ಮೀ. ದೂರದಲ್ಲಿ ಕೇರಳ ಕಡೆಗೆ ಹೋಗುವ ರಾಜ್ಯ ಹೆದ್ದಾರಿಗೆ ಹೊರಳಿಕೊಂಡಿತ್ತು. ಸುಮಾರು 10 ಕಿ.ಮೀ. ದೂರದವರೆಗೂ ಈಚರ್ ಲಾರಿಯನ್ನು ಬೆನ್ನಟ್ಟಲಾಯಿತು. ಆ ದಾರಿಯಲ್ಲಿ ಬರುವ ಈಶ್ವರ ಮಂಗಿಲ ಸಮೀಪದ ಬೆಳ್ಳಿಚಡವು ಎಂಬಲ್ಲಿ ಲಾರಿಯನ್ನು ಹಿಂದಿಕ್ಕುವಲ್ಲಿ ಪೊಲೀಸ್ ವಾಹನ ಯಶಸ್ವಿಯಾಯಿತು. ಯಾವಾಗ ಪೊಲೀಸ್ ವಾಹನ ಲಾರಿಗೆ ಅಡ್ಡವಾಗಿ ಬಂತೋ ಲಾರಿ ಚಾಲಕ ಅಬ್ದುಲ್ಲ ಜೀಪಿನ ಹಿಂಬದಿಗೆ ಡಿಕ್ಕಿ ಹೊಡೆದ. ಸಬ್‌ಇನ್ಸ್‌ಪೆಕ್ಟರ್ ಜಂಬೂರಾಜ್ ಮತ್ತು ಸಿಬ್ಬಂದಿಗಳು ಜೀಪಿನಿಂದ ಇಳಿದು ಮುಂದಕ್ಕೆ ಧಾವಿಸುತ್ತಿದ್ದಂತೆಯೇ ಚಾಲಕ ಹಲ್ಲೆಗೆ ಮುಂದಾಗಿದ್ದಾನೆ. ಅಷ್ಟರಲ್ಲಿ ಅಪಾಯದ ಅರಿವಾದ



ಎಸ್‌ಐ ಜಂಬೂರಾಜ್ ತನ್ನ ಪಿಸ್ತೂಲ್‌ಗೆ ಕೆಲಸ ಕೊಟ್ಟಿದ್ದರು. ಆತನ ಕಾಲಿಗೆ ಗುಂಡಿಕ್ಕಿದರು. ಆತ ಅಲ್ಲೇ ಕುಸಿದು ಬಿದ್ದ. ಜೊತೆಗಿದ್ದ ಮತ್ತೊಬ್ಬ ಕತ್ತಲಿನ ಅವಕಾಶ ಪಡೆದು ಪರಾರಿಯಾದ. ಗಾಯಗೊಂಡ ಅಬ್ದುಲ್ಲನನ್ನು ಆರಂಭದಲ್ಲಿ ಪುತ್ತೂರಿನ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ತದನಂತರ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿದೆ.


**ನಡೆಯಿತು ಹೈ ಡ್ರಾಮಾ!**

ಘಟನೆ ನಡೆದ ಸ್ಥಳ ಈಶ್ವರ ಮಂಗಲ ಗ್ರಾಮದ ಬೆಳ್ಳಿಚಡವು. ಇದು ಬೆಳ್ಳಾರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ. ಕಾರ್ಯಾಚರಣೆ ನಡೆಸಿದ್ದು ಪುತ್ತೂರು ಗ್ರಾಮಾಂತರ ಠಾಣೆಯ ಎಸ್‌ಐ ಜಂಬೂರಾಜ್ ಮತ್ತವರ ಸಿಬ್ಬಂದಿಗಳು. ಆದ್ದರಿಂದ ಕೇಸು ದಾಖಲಾಗಬೇಕಾಗಿದ್ದು ಬೆಳ್ಳಾರೆ ಠಾಣೆಯಲ್ಲಿ. ಈಚರ್ ಲಾರಿಯಲ್ಲಿ 12 ಜಾನುವಾರುಗಳಿದ್ದವು. ಅದರಲ್ಲಿ 1 ದನ, ಹೋರಿ ಮತ್ತು ಕೋಣಗಳಿದ್ದವು. ಈಚರ್ ಲಾರಿಯಲ್ಲಿ ಗೋಹತ್ಯಾ ಪ್ರತಿಬಂಧಕ ಕಾಯ್ದೆಯನ್ವಯ ಕೇವಲ ಎರಡು ಜಾನುವಾರುಗಳನ್ನು ಸಾಗಿಸಲು ಅನುಮತಿ ಇರುತ್ತದೆ. ಆದರೆ 12 ಜಾನುವಾರುಗಳನ್ನು ಹಿಂಸಾತ್ಮಕವಾಗಿ ಸಾಗಿಸಲಾಗುತ್ತಿತ್ತು. ಇದು ಅಪರಾಧವಾಗಿರುವುದರಿಂದ ಮತ್ತು ಪೊಲೀಸ್ ಸಿಬ್ಬಂದಿಯ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಮಾಡಲು ಯತ್ನಿಸಿದ್ದರಿಂದ ಪ್ರಕರಣ ದಾಖಲಾಗಲೇಬೇಕಿತ್ತು. ಆರೋಪಿ ಅಬ್ದುಲ್ಲನಿಗೆ ಗುಂಡೇಟು ತಗಲಿದ್ದರಿಂದ ಆತನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುವ ಜವಾಬ್ದಾರಿಯೂ ಪೊಲೀಸ್ ಅಧಿಕಾರಿಯ ಮೇಲಿದ್ದರಿಂದ ಅವರು ಅಬ್ದುಲ್ಲನನ್ನು ಆಸ್ಪತ್ರೆಗೆ ಕರೆದೊಯ್ದಿದ್ದರೆ ಇತರ ಸಿಬ್ಬಂದಿ ದೂರು ನೀಡಲು ಬೆಳ್ಳಾರೆ ಠಾಣೆಗೆ ಹೋಗಿದ್ದರು. ಸ್ಥಳದಲ್ಲಿ ಇಬ್ಬರು ಪೊಲೀಸರು ಸ್ಥಳದಲ್ಲಿದ್ದರು. ಇಂತಹ ಸಂದರ್ಭದಲ್ಲಿ ಮಾಹಿತಿ ತಿಳಿದು ಸ್ಥಳಕ್ಕೆ ಬಂದವರು ಸ್ಥಳೀಯರು ಮತ್ತು ಪುತ್ತಿಲ ಪರಿವಾರದ ಪ್ರಮುಖ ಅರುಣ್ ಕುಮಾರ್ ಪುತ್ತಿಲ.

ಆಗಾಗಲೇ ಈಚರ್ ಲಾರಿಯಲ್ಲಿದ್ದ 12 ಜಾನುವಾರುಗಳ ಪೈಕಿ ಒಂದು ಜಾನುವಾರು ಉಸಿರುಗಟ್ಟಿ ಮೃತಪಟ್ಟಿತ್ತು. ಮತ್ತೊಂದು ಜಾನುವಾರಿನ ಮೇಲೆ ಕೋಣವೊಂದು ನಿಂತುಕೊಂಡಿತ್ತು. ಎರಡು ಜಾನುವಾರುಗಳು ಏದುಸಿರು ಬಿಡುತ್ತಿದ್ದವು. ಜಾನುವಾರುಗಳನ್ನು ಈಚರ್ ಲಾರಿಯಿಂದ ಇಳಿಸದೇ ಇದ್ದಲ್ಲಿ 2-3 ಜಾನುವಾರುಗಳು ಮೃತಪಡುವ ಸಾಧ್ಯತೆಗಳಿತ್ತು. ಸ್ಥಳದಲ್ಲಿದ್ದ ಪೊಲೀಸ್ ಸಿಬ್ಬಂದಿಗಳಿಗೆ ಜಾನುವಾರುಗಳನ್ನು ಲಾರಿಯಿಂದ ಇಳಿಸಲು ಮೇಲಧಿಕಾರಿಗಳಿಂದ ಸೂಚನೆ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಅರುಣ್ ಕುಮಾರ್ ಪುತ್ತಿಲ ಅವರು ಪುತ್ತೂರು ಗ್ರಾಮಾಂತರ ಠಾಣಾ ಇನ್ಸ್‌ಪೆಕ್ಟರ್ ರವಿ ಅವರಿಗೆ ಪೊಲೀಸ್ ಕಾನ್ಸ್‌ಟೇಬಲ್ ಅವರ ಮೊಬೈಲ್‌ನಿಂದಲೇ ಕರೆ ಮಾಡಿ ವಸ್ತುಸ್ಥಿತಿಯನ್ನು ವಿವರಿಸಿ ಜಾನುವಾರುಗಳನ್ನು ಇಳಿಸಲು ಅನುಮತಿ ಕೋರಿದರು. ಅವರು ಅನುಮತಿ ನೀಡಿದ ಬಳಿಕ ಸ್ಥಳೀಯ ಮುಸ್ಲಿಂ ಮನೆಯೊಂದರಿಂದ ಕತ್ತಿಯನ್ನು ತರಿಸಿ ಹಗ್ಗವನ್ನು ತುಂಡರಿಸಿ ಜಾನುವಾರುಗಳನ್ನು ರಕ್ಷಿಸಲಾಯಿತು. ಈ ಘಟನೆಯನ್ನು ಸ್ಥಳೀಯ ನ್ಯೂಸ್ ಚಾನೆಲ್ ವರದಿಗಾರರು ಚಿತ್ರೀಕರಿಸಿದ್ದರು ಅಲ್ಲದೇ ಕೆಲವರು ಮೊಬೈಲ್‌ಗಳಲ್ಲಿ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಟ್ಟಿದ್ದರು. ಇದು ವಿವಾದಕ್ಕೆ ಕಾರಣವಾಯಿತು. ಕೊನೆಗೆ ಎಸ್ಪಿ ಕೆ. ಅರುಣ್ ಅವರೇ ಸ್ಪಷ್ಟನೆ ನೀಡಿ ವದಂತಿಗಳಿಗೆ ತೆರೆ ಎಳೆದರು.

**ಎಲ್ಲಿಂದ ಬಂತು ಜಾನುವಾರುಗಳು!**

ಅಕ್ರಮವಾಗಿ ಸಾಗಿಸಲ್ಪಡುತ್ತಿದ್ದ ಜಾನುವಾರುಗಳು ಹಾಸನಜಿಲ್ಲೆಯ ಚೆನ್ನರಾಯಪಟ್ಟದಿಂದ ತರಲಾಗುತ್ತಿತ್ತು. ಆ ಜಾನುವಾರು ಸಾಗಾಟಕ್ಕೆ ಚೆನ್ನರಾಯಪಟ್ಣ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 35 ರೂ.ಗಳನ್ನು ಪಾವತಿಸಿ ರಶೀದಿ ಮಾಡಲಾಗಿತ್ತು. ಚೆನ್ನರಾಯಪಟ್ಟಣದ ಹಲಿಗೆ ಗೌಡ ಎಂಬ ಕೃಷಿಕ ಈಶ್ವರ ಮಂಗಲದ ಜಲಾಲುದ್ದೀನ್ ಎಂಬವರಿಗೆ 2 ಲಕ್ಷ ರೂ.ಗಳಿಗೆ ಜಾನುವಾರುಗಳನ್ನು ಮಾರಾಟ ಮಾಡಿದ್ದು, ಇದಕ್ಕೆ ಸಂಬಂಧಿಸಿದ 7 ಜಾನುವಾರುಗಳನ್ನು


№ 27653
35

ಕೆಎ21ಸಿ9888 ನಂಬ್ರದ ಈಚರ್ ಲಾರಿಯಲ್ಲಿ ಸಾಗಾಟ ಮಾಡಲಾಗುತ್ತಿದೆ ಎಂದು ರಶೀದಿಯನ್ನು ನೀಡಲಾಗಿದೆ. ಆದರೆ ಈಚರ್ ಲಾರಿಯಲ್ಲಿ 12 ಜಾನುವಾರುಗಳಿದ್ದವು. ಅಲ್ಲದೇ ಆ ಲಾರಿಯಲ್ಲಿ ಕಾನೂನಿನ ಅನ್ವಯ ಕೇವಲ 2 ಜಾನುವಾರುಗಳನ್ನು ಸಾಗಿಸಲು ಅನುಮತಿ ಇತ್ತು. ಆದ್ದರಿಂದ ಅನುಮತಿಯನ್ನು ಪಡೆದಿದ್ದರೂ ಸಹ ಅದು ಅಕ್ರಮ ವ್ಯವಹಾರವೇ ಆಗಿರುವುದರಿಂದ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ.

# ಡಾ.ಕೃತಿಕಾ ರೆಡ್ಡಿ ಕೊಲೆ ಕೇಸ್...

# ಕೊಲೆಗಾರ ಡಾ. ಮಹೇಂದ್ರರೆಡ್ಡಿ ಕಳ್ಳಾಟಗಳು ಒಂದೊಂದಾಗಿ ಬಯಲಾಗುತ್ತಿವೆ!

ಬೆಂಗಳೂರು
✍ ಹೆಚ್.ಕೆ. ಮಹದೇವ್






ಬೆಂಗಳೂರು ಮಹಾನಗರದಲ್ಲಿ ಇತ್ತೀಚಿಗೆ ನಡೆದ ಕೊಲೆಗಳಲ್ಲೇ ಅತ್ಯಂತ ಅಮಾನುಷವಾದ ಮರ್ಡರ್ ಕೇಸ್ ಅಂದ್ರೆ... ಅದು ನಿಸ್ಸಂಶಯವಾಗಿ ಡಾ. ಕೃತಿಕಾ ರೆಡ್ಡಿ ಕೊಲೆ ಕೇಸ್! ಈ ಕೊಲೆ ಪ್ರಕರಣದ ವಿಚಾರವಾಗಿ ಪ್ರತಿನಿತ್ಯ ಒಂದಲ್ಲಾ ಒಂದು ಸ್ಫೋಟಕ ರಹಸ್ಯಗಳು ಬಯಲಾಗುತ್ತಲೇ ಇವೆ! ಡಾ. ಕೃತಿಕಾ ರೆಡ್ಡಿ ಮರ್ಡರ್ ಕೇಸ್ ಹಿನ್ನಲೆಯಲ್ಲಿ ಅವರ ಪತಿ ಡಾ. ಮಹೇಂದ್ರ ರೆಡ್ಡಿಯನ್ನು ಈಗಾಗಲೇ ಬಂಧಿಸಿ ಜೈಲಿನಲ್ಲಿ ಇರಿಸಲಾಗಿದೆ. ತನಿಖೆಯ ಭಾಗವಾಗಿ ಇದೀಗ ಡಾ. ಮಹೇಂದ್ರ ರೆಡ್ಡಿಯ ಮೊಬೈಲ್ ಫೋನ್ ಅನ್ನು ರಿಟ್ರೀವ್ ಮಾಡಲಾಗಿದ್ದು, ಈ ಪಾಪಿ ವೈದ್ಯ ತನ್ನ ಸ್ನೇಹಿತೆಯೊಂದಿಗೆ ಚಾಟ್ ಮಾಡಿದ್ದ ವಿಷಯ ದಿಗ್ಭ್ರಮೆ ಹುಟ್ಟಿಸಿದೆ. "I killed my wife.. because of u" ಎಂದು ತನ್ನ ಸಖಿಗೆ ಸಂದೇಶ ಪೋಸ್ಟ್ ಮಾಡಿದ್ದಾನೆ! ಅದು ಮಾಮೂಲಿ ವಾಟ್ಸಪ್ ಮೂಲಕವಲ್ಲ, PhonePe ಮೂಲಕ ಸಂದೇಶ ಕಳುಹಿಸಿದ್ದಾನೆ! ಸದ್ಯ, ಪೊಲೀಸರು ಈತನ ಮೊಬೈಲ್ ಚಾಟ್, ಎಫ್‌ಎಸ್‌ಎಲ್ ವರದಿ ಆಧರಿಸಿ ತನಿಖೆ ಮುಂದುವರಿಸಿದ್ದಾರೆ. ಒಟ್ಟಾರೆ, ಆರೋಪಿ ಡಾ. ಮಹೇಂದ್ರರೆಡ್ಡಿಯ ಒಂದೊಂದೇ ಕಳ್ಳಾಟಗಳು ಬಯಲಾಗುತ್ತಿವೆ.

ಮಹೇಂದ್ರರೆಡ್ಡಿ ಮೊಬೈಲ್, ಲ್ಯಾಪ್‌ಟಾಪ್‌ಗಳನ್ನ ಪೊಲೀಸರು ಪರಿಶೀಲಿಸಿ ಎಫ್‌ಎಸ್‌ಎಲ್‌ಗೆ ರವಾನಿಸಿದ್ದಾರೆ. ಇಷ್ಟಕ್ಕೂ ಮಹೇಂದ್ರರೆಡ್ಡಿ ತನ್ನ ಗೆಳತಿಗೆ ಫೋನ್ ಪೇ ಮೂಲಕ ಸಂದೇಶ ಕಳುಹಿಸಿದ್ದು ಏಕೆಂದರೆ, ಈತ ಓವರ್ ಆಗಿ ಚಾಟಿಂಗ್ ನಡೆಸುತ್ತಿದ್ದರಿಂದ ಬೇಸರಗೊಂಡಿದ್ದ ಆ ಗೆಳತಿ, ಕೊಲೆ ಘಟನೆ ನಡೆದ ಬಳಿಕ ಈತನನ್ನು ಬ್ಲಾಕ್ ಮಾಡಿದ್ದಳು! ಹೀಗಾಗಿ ಮಹೇಂದ್ರ ರೆಡ್ಡಿ ತಲೆ ಉಪಯೋಗಿಸಿ ಫೋನ್ ಪೇನಲ್ಲಿ ಚಾಟ್ ಮಾಡಿದ್ದ! ಫೋನ್ ಪೇ ಮೂಲಕವೇ I killed my wife... because of u ಎಂದು ಸ್ನೇಹಿತೆಗೆ ಮೆಸೇಜ್ ಕಳುಹಿಸಿದ್ದ. ಆ ಬಳಿಕ ಆ ಮೆಸೇಜ್ ಅನ್ನು ಡಿಲೀಟ್ ಮಾಡಲು ತುಂಬಾ ಪ್ರಯತ್ನಿಸಿದ್ದ. ಆದರೆ ಅದು ಸಾಧ್ಯವಾಗದೆ ಹೇಗೋ ಕಾಲಹರಣ ಮಾಡಿ ಇದೀಗ ಪೊಲೀಸರಿಗೆ ಲಾಕ್ ಆಗಿದ್ದಾನೆ. ಕಿಲ್ಲರ್ ಡಾಕ್ಟರ್ ಮಹೇಂದ್ರ ರೆಡ್ಡಿ ತನ್ನ ಸ್ನೇಹಿತೆ ಜೊತೆಗೆ ನಡೆಸಿದ್ದ ಎನ್ನಲಾದ ಸಂಪೂರ್ಣ ಚಾಟಿಂಗ್ ಹಿಸ್ಟರಿಯನ್ನ ಪೊಲೀಸರು ರಿಟ್ರೀವ್ ಮಾಡಿಕೊಂಡಿದ್ದಾರೆ. ಇವರು ತಮ್ಮಗಳ ವೈಯಕ್ತಿಕ ವಿಚಾರಗಳ ಬಗ್ಗೆ ಚಾಟಿಂಗ್ ಮಾಡಿರೋದು ಗೊತ್ತಾಗಿದೆ. ಪ್ರಕರಣ ಸಂಬಂಧ ಆ ವೈದ್ಯ ಗೆಳತಿಯನ್ನು ಕರೆಸಿ ಈಗಾಗಲೇ ವಿಚಾರಣೆಯನ್ನೂ ಮಾಡಲಾಗಿದೆಯಂತೆ.

ಅಂದಹಾಗೆ, ಡಾ.ಮಹೇಂದ್ರ ರೆಡ್ಡಿ ಹಾಗೂ ಡಾ. ಕೃತಿಕಾ ರೆಡ್ಡಿ ಇಬ್ಬರೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದವರು. ಆಕೆ ಚರ್ಮ ರೋಗ ತಜ್ಞೆ. ಈತ ಅನಸ್ತೇಶಿಯ ನಿಪುಣ. ಮಾರತ್‌ಹಳ್ಳಿ ಸಮೀಪದ ಮುನ್ನೆಕೊಳಾಲದ ಕೋಟ್ಯಾಧಿಪತಿ ಮನಿರೆಡ್ಡಿರವರ ಕಿರಿಮಗಳು ಕೃತಿಕಾ ರೆಡ್ಡಿ. ಎರಡೂ ಕುಟುಂಬಗಳು ಒಪ್ಪಿ ಮದುವೆ ಆಗಿದ್ದವರು. ಡಾ. ಕೃತಿಕಾ ರೆಡ್ಡಿಗಿದ್ದ ಆರೋಗ್ಯ ಸಮಸ್ಯೆಯಿಂದ ಪತಿ ಡಾ. ಮಹೇಂದ್ರರೆಡ್ಡಿ ಬೇಸತ್ತಿದ್ದ. ರೋಗ ಮುಚ್ಚಿಟ್ಟು ತನ್ನನ್ನು ಮದುವೆ ಆದಳು ಎಂಬ ಕೋಪವೂ ಮಹೇಂದ್ರನಿಗಿತ್ತು. ಅವಳ ರೋಗದಿಂದ ತನಗೆ ವೈಯಕ್ತಿಕ ಜೀವನ ಸಂತಸದಾಯಕವಾಗಿಲ್ಲ ಎಂದು ಕೋಪಕೊಂಡಿದ್ದ. ಹಾಗಂತ ವಿಚ್ಛೇದನ ನೀಡಿದರೆ ಕುಬೇರನ ಮಗಳ ಆಸ್ತಿಯೆಲ್ಲಾ ಹೋಗಿಬಿಡುತ್ತೆ, ತನಗೆ ಏನೂ ಸಿಗಲ್ಲ ಎಂಬುದು ರೆಡ್ಡಿಗೆ ಚೆನ್ನಾಗಿ ಗೊತ್ತಿತ್ತು.


ಡಿಸಿಪಿ ಕೆ. ಪರಶುರಾಮ್

ಹಾಗಾಗಿ ಹೆಂಡತಿಯ ಆರೋಗ್ಯ ಸಮಸ್ಯೆಯನ್ನೇ ಬಂಡವಾಳವಾಗಿ ಮಾಡಿಕೊಂಡು, ಅವಳನ್ನು ಮರಾಮೋಸದಿಂದ ಕೊಲೆ ಮಾಡಿ, ಅದನ್ನು ಸಹಜ ಸಾವು ಎಂದು ಬಿಂಬಿಸಲು ಯೋಜನೆ ಸಿದ್ಧಪಡಿಸಿದ್ದ.... ಚಿಕಿತ್ಸೆಯ ವೇಳೆ ಡಾ. ಕೃತಿಕಾಗೆ ಓವರ್ ಡೋಸ್ ಅನಸ್ತೇಶಿಯಾ ಕೊಟ್ಟಿದ್ದ. ಆಕೆಯ ದೇಹದ ತೂಕಕ್ಕೆ ಕೇವಲ ಏಳರಿಂದ ಎಂಟು ಎಂ.ಎಲ್. ಅನಸ್ತೇಶಿಯಾ ನೀಡಬಹುದಾಗಿತ್ತು. ಇದು ಗೊತ್ತಿದ್ದರೂ ಸಹ ರೆಡ್ಡಿ ಆವತ್ತು ಹದಿನೈದು ಎಂ.ಎಲ್. ಅನಸ್ತೇಶಿಯಾ ನೀಡಿದ್ದ ಎಂಬುದು ತನಿಖೆ ವೇಳೆ ಬಯಲಾಗಿತ್ತು.

ಹೀಗಾಗಿ, ಮಹೇಂದ್ರ ರೆಡ್ಡಿಯನ್ನ ಪೊಲೀಸರು ಬಂಧಿಸಿದ್ದರು. ಬಳಿಕ ಐನಾತಿ ರೆಡ್ಡಿಗೆ ಒಬ್ಬ ಸ್ನೇಹಿತೆಯೂ ಇರುವುದು ಬೆಳಕಿಗೆ ಬಂದಿತ್ತು. ಇದೀಗ ಇವರ ಮೊಬೈಲ್ ಚಾಟಿಂಗ್ಸ್ ರಿಟ್ರೀವ್ ಆಗಿದೆ... ಅಂದಹಾಗೆ, ಡಾ. ಕೃತಿಕಾ ರೆಡ್ಡಿ ಗಂಡ ಮಹೇಂದ್ರನನ್ನು ತುಂಬಾ ತುಂಬಾ ಪ್ರೀತಿಸುತ್ತಿದ್ದಳು... ಮತ್ತು ನಂಬಿದ್ದಳು ಎಂಬ ಮಾಹಿತಿ ವೈರಲ್ ಆಗಿದೆ. ಆದರೇ, ಆಕೆಯ ನಿಷ್ಕಲ್ಮಶ ಪ್ರೀತಿಗೆ ಮಹೇಂದ್ರ ರೆಡ್ಡಿ ಮೋಸ ಮಾಡಿಬಿಟ್ಟ ನೋಡ್ರಿ.

ಇಂಥ ನಯವಂಚಕ ಪತಿ ಹೇಳಿದ್ದನ್ನು ಪ್ರಶ್ನಿಸದೆಯೇ ನಂಬುತ್ತಿದ್ದರಂತೆ ಕೃತಿಕಾ. ಇದನ್ನೇ ಬಂಡವಾಳ ಮಾಡ್ಕೊಂಡ ರೆಡ್ಡಿ ಕೃತಿಕಾ ಅವರ ಎಮೋಷನ್ಸ್ ಜೊತೆ ಆಟವಾಡಿದ್ದಾನೆ. ಮಹೇಂದ್ರ ರೆಡ್ಡಿ ಕೃತಿಕಾಳನ್ನು ಮಾತ್ರ ಕೊಲ್ಲಲಿಲ್ಲ. ಆಕೆಯ ಪ್ರೀತಿಯನ್ನೂ ಕೊಲೆ ಮಾಡಿಬಿಟ್ಟಿದ್ದಾನೆ. ಪತ್ನಿ ಕೃತಿಕಾ ರೆಡ್ಡಿ ದೇಹದಲ್ಲಿ ಶುಗರ್ ಲೆವೆಲ್ ಡೌನ್ ಆಗಲು ಮಹೇಂದ್ರ ರೆಡ್ಡಿ ಆಗಾಗ ಮೆಡಿಸಿನ್ ಕೊಡುತ್ತಿದ್ದ. ಬಳಿಕ ಪತ್ನಿಗೆ ಮೆಸೇಜ್ ಮಾಡಿ ಆರೋಗ್ಯದ ವಿಚಾರಿಸುತ್ತಿದ್ದ. ತಾನು ಕೊಟ್ಟ ಮೆಡಿಸಿನ್ ವರ್ಕೌಟ್ ಆಗುತ್ತಿದೆಯೇ... ಇಲ್ಲವೇ.... ಅನ್ನೋದನ್ನ ಕನ್ಫರ್ಮ್ ಮಾಡ್ಕೊಳ್ತಿದ್ದ. ಸುಸ್ತಾಗ್ತಿದೆಯಾ..? ಏನಾಗ್ತಿದೆ? ಇವಾಗ ಹೇಗಿದ್ದೀಯಾ? ಅಂತೆಲ್ಲ ಮೆಸೇಜ್ ಮಾಡುತ್ತಿದ್ದ.

ಕೃತಿಕಾಅವರು ಸುಸ್ತಾಗ್ತಿದೆ ಅಂದಾಕ್ಷಣ ಆರೋಪಿ ಮಹೇಂದ್ರ ರೆಡ್ಡಿ ಸಮಾಧಾನ ಮಾಡಿಕೊಳ್ಳುತ್ತಿದ್ದ. ತಾನು ಕೊಟ್ಟಿರೋ ಮೆಡಿಸಿನ್ ವರ್ಕ್ ಆಗ್ತಿದೆ ಅಂಥ ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತಿದ್ದ. ಕೃತಿಕಾಗೆ ಮೆಡಿಸಿನ್ ಕೊಡಲು ಶುರು ಮಾಡಿದ ದಿನದಿಂದ ಎಲ್ಲವನ್ನು ಆರೋಪಿ ಮಹೇಂದ್ರ ರೆಡ್ಡಿ ಆಬ್ಸರ್ವ್ ಮಾಡುತ್ತಿದ್ದ್. ಕೃತಿಕಾ ಗಂಡನ ಮೇಲಿಟ್ಟಿದ್ದ ಅತಿಯಾದ ನಂಬಿಕೆ, ಪ್ರೀತಿಯೇ ಕೊನೆಗೆ ಆಕೆಯ ಸಾವಿಗೆ ಕಾರಣವಾಯಿತು!


ಪೊಲೀಸ್ ಕಸ್ಟಡಿಯಲ್ಲಿ ನಯವಂಚಕ ಡಾ. ಮಹೇಂದ್ರ ರೆಡ್ಡಿ

**ಮೆಡಿಸಿನ್ ತಂದು ಇಂಜೆಕ್ಟ್ ಮಾಡಿದ್ದ ಡಾ.ಮಹೇಂದ್ರ ರೆಡ್ಡಿ!**

ಚರ್ಮರೋಗ ತಜ್ಞೆ ಡಾ.ಕೃತಿಕಾ ರೆಡ್ಡಿ ಹತ್ಯೆ ಪ್ರಕರಣದಲ್ಲಿ, ಆಕೆಯ ಪತಿ ಡಾ. ಮಹೇಂದ್ರ ರೆಡ್ಡಿ ಅರಿವಳಿಕೆ ಮದ್ದನ್ನು ಅತಿಯಾಗಿ ನೀಡಿ ಕೊಲೆ ಮಾಡಿರುವುದು ತನಿಖೆಯಿಂದ ದೃಢಪಟ್ಟಿದೆ. ಹೊಸ ಗೆಳತಿಯನ್ನು ಪಟಾಯಿಸಲು ಹಾಗೂ ಮಾವನ ಆಸ್ತಿಯನ್ನು ಲಪಟಾಯಿಸಲು ಈ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯ ಚರ್ಮರೋಗ ತಜ್ಞೆ ಡಾ.ಕೃತಿಕಾ ರೆಡ್ಡಿ ಹತ್ಯೆಗೆ ಬಳಸಲಾದ ಔಷಧವನ್ನು ಮೃತಳ ಪತಿ/ ಆರೋಪಿ ಡಾ.ಮಹೇಂದ್ರ ರೆಡ್ಡಿ ವಿಕ್ಟೋರಿಯಾ ಆಸ್ಪತ್ರೆಯಿಂದಲೇ ತಂದು ನಿಯಮ ಬಾಹಿರವಾಗಿ ಬಳಸಿದ್ದಾನೆ ಎಂದು ಮಾರತ್ತಹಳ್ಳಿ ಪೊಲೀಸರ ಮೊದಲ ಸುತ್ತಿನ ತನಿಖೆಯಲ್ಲಿ ಪತ್ತೆಯಾಗಿತ್ತು. ಆದರೆ ಇದೀಗ Not For Sale ಔಷಧಿಗಳನ್ನ ಸರ್ಕಾರಿ ಆಸ್ಪತ್ರೆಯಿಂದ ಕದ್ದು ಮನೆಗೆ ತಂದಿಟ್ಟುಕೊಂಡು ಕೃತಿಕಾ ಅವರಿಗೆ ಇಂಜೆಕ್ಟ್ ಮಾಡಿದ್ದ ಬಗ್ಗೆ ಮಾಹಿತಿ ಲಭ್ಯವಾಗಿದೆ. ಗ್ಯಾಸ್ಟ್ರಿಕ್ ಔಷಧಿ ಸೇರಿ ಗ್ಲೂಕೋಸ್ ಬಾಟಲ್ ಸೇರಿ ರಾಶಿ ರಾಶಿ ಔಷಧಿಗಳು ಕೃತಿಕಾ ರೆಡ್ಡಿ ಇದ್ದ ರೂಮಿನಲ್ಲಿ ಪತ್ತೆಯಾಗಿದೆ. ಕೃತಿಕಾ ರೂಮನ್ನು ಮಹೇಂದ್ರ ರೆಡ್ಡಿ ಕ್ಲಿನಿಕ್ ರೀತಿ ಬದಲಾಯಿಸಿದ್ದ. ಕೃತಿಕಾಳ ಋತುಚಕ್ರದ ಸಮಯದಲ್ಲೂ ಡ್ರಿಪ್ ಹಾಕಿಕೊಳ್ಳಲು ಒತ್ತಾಯಿಸುತ್ತಿದ್ದ. ಮಾತ್ರವಲ್ಲ, ಕ್ಯಾನುವಲ್ ಚುಚ್ಚಿ ಆಕೆಯ ಕೈತುಂಬಾ ಸೂಜಿಯ ಗಾಯ ಮಾಡಿದ್ದಾನೆ. ವಿಕ್ಟೋರಿಯಾ ಆಸ್ಪತ್ರೆ ಸರ್ಕಾರಿ ಆಸ್ಪತ್ರೆಯಾಗಿದ್ದರಿಂದ ಅಲ್ಲಿ ಮುಕ್ತವಾಗಿ ವ್ಯವಹರಿಸಲು ಆತನಿಗೆ ಅವಕಾಶ ಇತ್ತು.


ಪತ್ನಿಯನ್ನು ಏಮಾರಿಸಿ ಕೊಂದ ಡಾ. ಮಹೇಂದ್ರ ರೆಡ್ಡಿ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಹೇಂದ್ರ ರೆಡ್ಡಿ ಜನರಲ್ ಸರ್ಜನ್ ಆಗಿದ್ದ ಕಾರಣದಿಂದ ಆಸ್ಪತ್ರೆಯಲ್ಲಿ ಮುಕ್ತವಾಗಿ ವ್ಯವಹರಿಸಲು ಆತನಿಗೆ ಸಮಸ್ಯೆಗಳು ಯಾವುದೇ ಇರಲಿಲ್ಲ. ಇದನ್ನು ದುರ್ಬಳಕೆ ಮಾಡಿಕೊಂಡು ಶಸ್ತ್ರಚಿಕಿತ್ಸಾ ವಿಭಾಗದಿಂದ ಅರಿವಳಿಕೆ ಚುಚ್ಚು ಮದ್ದನ್ನು ತೆಗೆದುಕೊಂಡಿರಬಹುದು ಎಂಬ ಅನುಮಾನವಿದೆ. ಯಾಕೆಂದರೆ ಪತ್ನಿಯ ಬಲಗಾಲಿಗೆ ಹೆಚ್ಚಿನ ಪ್ರಮಾಣದ ಅರಿವಳಿಕೆ ನೀಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.


ಡಾ. ಕೃತಿಕಾ ತಂದೆ ಮುನಿರೆಡ್ಡಿ

ತನ್ನ ಗಂಡನ ಮೇಲೆ ವಿಪರೀತ ನಂಬಿಕೆ ಇಟ್ಟಿದ್ದ ಕೃತಿಕಾಗೆ ವಚಕ ಪತಿ ಮಹೇಂದ್ರನ ಮೇಲೆ ಕಿಂಚಿತ್ತೂ ಅನುಮಾನ ಬಂದಿಲ್ಲ ನೋಡ್ರಿ. ಅಂದಹಾಗೆ, ಮಹೇಂದ್ರ ರೆಡ್ಡಿ ನಿವಾಸದಲ್ಲಿ ಶೋಧ ಕಾರ್ಯ ನಡೆಸಿದ ಪೊಲೀಸರಿಗೆ ಹಲವು ಸುಳಿವುಗಳು ಸಿಕ್ಕಿದ್ದು, ಆತನ ಬೆಡ್ ರೂಮ್‌ನಲ್ಲಿದ್ದ ಲ್ಯಾಪ್‌ಟಾಪ್, ಹಾರ್ಡ್ ಡಿಸ್ಕ್ ಹಾಗೂ ಕಂಪ್ಯೂಟರ್ ಸೇರಿದಂತೆ ಕೆಲ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಇನ್ನು ವಿಚಾರಣೆ ಸಮಯದಲ್ಲಿ ನಾನೇನು ಮಾಡಿಲ್ಲ. ನಾನು ಪತ್ನಿಯನ್ನು ಕೊಂದಿಲ್ಲ ಎಂದು ಸಬೂಬು ನೀಡಿದ್ದಾನೆ. ವಿವಾಹಕ್ಕೂ ಮುನ್ನವೇ ಮೃತ ಡಾ. ಕೃತಿಕಾ ರೆಡ್ಡಿಗೆ ತೀವ್ರ ಅನಾರೋಗ್ಯ ಇತ್ತು ಎಂದು ಹೇಳಿದ್ದಾನೆ, ಆದರೆ ಪೋಷಕರು ಗ್ಯಾಸ್ಟ್ರಿಕ್ ಸಮಸ್ಯೆ, ಲೋ ಬಿಪಿ ಬಿಟ್ಟರೆ ಯಾವುದೇ ಸಮಸ್ಯೆ ಇರಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮಾತ್ರವಲ್ಲ ತನಿಖೆ ಸಮಯದಲ್ಲಿ ಆತನಿಂದ ಹಲವು ಗೊಂದಲದ ಹೇಳಿಕೆಗಳು ಹೊರ ಬಂದಿದೆ. ಮೃತ ಕೃತಿಕಾರೆಡ್ಡಿ ಅವರ ಇಡೀ ಕುಟುಂಬವೇ ವೈದ್ಯಲೋಕದಲ್ಲಿ ಸೇವೆ ಸಲ್ಲಿಸುತ್ತಿದೆ.

ಕೃತಿಕಾ ಚರ್ಮರೋಗ ತಜ್ಞೆ, ಆಕೆಯ ಸೋದರಿ ಡಾ. ನಿಖಿತಾ ಹಾಗೂ ಚಿಕ್ಕಮ್ಮ ಸಹ ವೈದ್ಯರು. ಈ ಹಿನ್ನೆಲೆಯಲ್ಲಿ ಸರ್ಜನ್ ಆಗಿದ್ದ ಮಹೇಂದ್ರ ರೆಡ್ಡಿಗೆ ಆಕೆಯನ್ನು ಮದುವೆ ಮಾಡಲು ನಿರ್ಧರಿಸಿ, ಕೋಟಿ ಕೋಟಿ ಖರ್ಚು ಮಾಡಿ ಅದ್ದೂರಿಯಾಗಿ ಮದುವೆ ಮಾಡಿ ಕೊಟ್ಟಿದ್ದರು.

2024 ಮೇ 06ರಂದು ಗುಂಜೂರಿನ ಮಂತ್ರ ಕಲ್ಯಾಣ ಮಂಟಪದಲ್ಲಿ ಕೃತಿಕಾ ಹಾಗೂ ಮಹೇಂದ್ರ ವಿವಾಹ ಜರುಗಿತ್ತು. ಕೃತಿಕಾ ನಿಜಕ್ಕೂ ಅಪ್ರತಿಮ ಚೆಲುವೆ ಆಗಿದ್ದಳು. ಆದರೂ ಡಾ. ಮಹೇಂದ್ರ ಮದುವೆಯ ಬಳಿಕ ತನ್ನ ವರಸೆ ಬದಲಿಸಿದ್ದ. ಆಕೆಗೆ ಸುಸ್ತು ಸಂಕಟ ಗ್ಯಾಸ್ಟ್ರಿಕ್ ಮುಂತಾದ ಸಣ್ಣ ಸಮಸ್ಯೆ ಇದ್ದರೂ, ಭಾರಿ ಅನಾರೋಗ್ಯ ಎಂಬಂತೆ ಬಿಂಬಿಸಿ ಓವರ್ ಡೋಸ್ ಅನಸ್ತೇಶಿಯಾ ಕೊಟ್ಟು ಕೊಂದಿದ್ದಾನೆ ಎನ್ನಲಾಗಿದೆ.

ಡಾ. ಮಹೇಂದ್ರ ರೆಡ್ಡಿಗೆ ತನ್ನ ಅಸಿಸ್ಟೆಂಟ್ ಆಗಿದ್ದ ಯುವ ವೈದ್ಯೆಯೊಬ್ಬಳ ಜೊತೆ ಸ್ನೇಹಕ್ಕಿಂತಲೂ ಮಿಗಿಲಾದ ಸಂಬಂಧವಿದೆ ಎಂಬ ವಿಚಾರ ಬಯಲಾಗಿದೆ. ಅವಳನ್ನು ಎರಡನೇ ಮದುವೆಯಾಗಿ ಅನುಭವಿಸಲು ಈ ಕೃತ್ಯವೆಸಗಿದ್ದಾನೆ ಎಂಬ ಅನುಮಾನವಿದೆ. ಕೃತಿಕಾ ಸತ್ತ ಬಳಿಕವೂ ಆಸಾಮಿ ತನ್ನ ಮಾವನ ಜತೆ ಉತ್ತಮ ಬಾಂಧವ್ಯವನ್ನೇ ಹೊಂದಿದ್ದ. ಕಾರಣ, ಲೆಕ್ಕವಿಲ್ಲದಷ್ಟು ಆಸ್ತಿ ಇತ್ತು. ಆರು ತಿಂಗಳ ಹಿಂದೆಯೇ ಕೃತಿಕಾಳನ್ನು ಮುಗಿಸಿದ್ದ ಮಹೇಂದ್ರ ಕೃತಿಕಾ ತಂದೆ ಉತ್ತಮ ಸಂಬಂಧ ಇಟ್ಟುಕೊಂಡು, ಆಗಾಗ ಅವಳನ್ನು ನೆನಪಿಸಿಕೊಂಡು ಅಳುತ್ತಿದ್ದನಂತೆ. ಆಗ ಮಾವನೇ ಸಮಾಧಾನ ಮಾಡುತ್ತಿದ್ದರಂತೆ. ಇಂದಲ್ಲ ನಾಳೆ ಕೃತಿಕಾ ಪಾಲಿನ ಆಸ್ತಿ ತನಗೆ ಸಿಗುತ್ತೆ ಎಂಬ ಆಸೆಯಲ್ಲಿದ್ದ ಮಹೇಂದ್ರನಿಗೆ, ಕರ್ಮ ಬೆನ್ನಟ್ಟಿದ್ದು ಗೊತ್ತೇ ಆಗಲಿಲ್ಲ ನೋಡ್ರಿ.

ಅಂದಹಾಗೆ, ಈ ಪಾಪಿಯನ್ನು ವಿವಾಹವಾಗಿ ಕೇವಲ ಒಂದೇ ವರ್ಷದಲ್ಲಿ, ಏಪ್ರಿಲ್ 24, 2025 ರಂದು ಕೃತಿಕಾ ಮೃತಪಟ್ಟಿದ್ದರು. ಮರಣೋತ್ತರ ಪರೀಕ್ಷೆಯಲ್ಲಿ ಅತಿಯಾದ ಅನಸ್ತೇಷಿಯಾದಿಂದಲೇ ಕೃತಿಕಾ ಸಾವನ್ನಪ್ಪಿರುವುದು ಬಹಿರಂಗವಾಗಿತ್ತು.

ಹೀಗಾಗಿ ಪೊಲೀಸರು ಕೃತಿಕಾ ಪೋಷಕರನ್ನು ವಿಚಾರಿಸಿದಾಗ, ಕೃತಿಕಾ ಸಾವನ್ನಪ್ಪಿದ್ದ ಹಿಂದಿನ ದಿವಸ ಅಳಿಯ ಡಾ.ಮಹೇಂದ್ರನೇ ಪತ್ನಿಗೆ ಇಂಜೆಕ್ಷನ್ ನೀಡಿದ್ದರ ಬಗ್ಗೆ ಪೊಲೀಸರ ಬಳಿ ತಿಳಿಸಿದ್ದರು. ಅಂದೇ ಪೊಲೀಸರು ಅಲರ್ಟ್ ಆಗಿ ಐವಿ, ಸಿರಂಜ್‌ನ ಸ್ಯಾಂಪಲ್ ಪಡೆದು ಪರಿಶೀಲನೆ ಮಾಡಿದಾಗ ಅನಸ್ತೇಶಿಯಾ ಕೊಟ್ಟಿರುವುದು ದೃಢಪಟ್ಟಿತ್ತು. ಸೀರಂಜ್‌ನಲ್ಲಿರೋ ಔಷಧ ಮತ್ತು ಮರಣೋತ್ತರ ಪರೀಕ್ಷೆಯಲ್ಲಿದ್ದ ಔಷಧ ಒಂದೇ ಎಂಬುದು ಪೊಲೀಸರಿಗೆ ತಿಳಿದಿತ್ತು. ಎಲರೂ ಕೈಗೆ ಐವಿ ಹಾಕಿದ್ರೆ, ಈತ ಮಾತ್ರ ಕಾಲಿಗೆ ಐವಿ ಡ್ರಿಪ್ ಹಾಕಿದ್ದ. ಈ ಮೂಲಕ ಅನುಮಾನ ಬಾರದಂತೆ ಪತ್ನಿಯ ಕಥೆ ಮುಗಿಸಿದ್ದ... ಆದ್ರೆ ಇಂಥ ಕಠೋರ ಸತ್ಯ ಬಯಲಿಗೆ ಬರಲು ಆರು ತಿಂಗಳು ಹಿಡಿದದ್ದೇಕೆ...?! ಎಫ್‌ಎಸ್‌ಎಲಸ್ ವರದಿ ಬರೋತನಕ ಈತನೇ ಹಂತಕ ಎಂಬುದು ಪೊಲೀಸರಿಗೆ ತಿಳಿಯಲಿಲ್ಲವೆ?! ☯



# ‘ದಿ ಟಾಸ್ಕ್’ ಯಾವ ರಾಜಕಾರಣಿ ‘ವಿಡಿಯೋ’ ಬ್ಲಾಸ್ಟ್?!



ಎಡಿಜಿಪಿ ಚಂದ್ರಶೇಖರ್

ನಿಮ್ಮ ಹತ್ತಿರ ಮೊಬೈಲ್ ಇದೆಯಾ... ನೀವು ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದೀರಾ.... ಹಾಗಾದ್ರೆ, ಕಳೆದೊಂದು ವಾರದಿಂದ ‘ದಿ ಟಾಸ್ಕ್’ ಎಂಬ ಸಿನಿಮಾ ಪ್ರಚಾರದ ವಿವಿಧ ಝಲಕ್‌ಗಳನ್ನು ಗಮನಿಸಿರುತ್ತೀರಿ. ಗೂಗಲ್, ಎಫ್‌ಬಿ, ಇನ್‌ಸ್ಟಾ, ಥ್ರೆಡ್... ಎತ್ತ ನೋಡಿದರು ‘ದಿ ಟಾಸ್ಕ್’ ಪೋಸ್ಟರ್, ಟೀಶರ್ಟ್, ಆಟೋಗಳ ಬೆನ್ನಲ್ಲಿಯೂ ಅದೇ ಪೋಸ್ಟರ್. ‘ದಿ ಟಾಸ್ಕ್’ ಟ್ರೇಲರ್ ಅಂತೂ ಮೈ ಜುಮ್ಮೆನಿಸುವಂತಿದೆ. ಮಾತ್ರವಲ್ಲ, ಸಖತ್ ಇಂಟರೆಸ್ಟಿಂಗ್ ಆಗಿದೆ! ನೋಡಿದ ತಕ್ಷಣ ಹೇಳಬಹುದು, ಇದೊಂದು ಕ್ರೈಂ ಥ್ರಿಲ್ಲರ್ ಅಂತ.... ನೀವೂ ಟ್ರೇಲರ್ ವೀಕ್ಷಣೆ ಮಾಡಿರಬಹುದು.

ಓರ್ವ ಹೆಣ್ಣು ಮಗಳು... (ಶಾಲಾ ಬಾಲಕಿ) ಕಾಡಿನೊಳಗೆ ಅವಳ ಚೀರಾಟ. ಆಕೆಯನ್ನು ರಕ್ಷಿಸಲು ಇಬ್ಬರು ಹುಡುಗರ ಹೋರಾಟ. ಆಸ್ಪತ್ರೆಯಲ್ಲಿ ಅವಳ ಪೋಷಕರ ಆಕ್ರಂಧನ. ರಾಜಕಾರಣಿಯೊಬ್ಬ, ‘ಏನೇ ಆದ್ರೂ ಆ ವಿಡಿಯೋ ಹೊರಗಡೆ ಬರಬಾರ್ದು...’ ಎಂದು ಚೀರಿಕೊಳ್ಳುವುದು. ಅವನ ಸೆಕ್ರೆಟರಿ 'ನಾನು ಮಾತಾಡ್ತೀನಿ...’ ಅನ್ನುವುದು. ಭೀಕರ ರೋಡ್ ರೇಜ್, ಕೊಲೆ. ಮುಗಿಸಿಬಿಡಿ... ಅನ್ನೋ ರಾಜಕಾರಣಿ... ಇವೇ ಮುಂತಾದ ದೃಶ್ಯ ಸಂಭಾಷಣೆಗಳು ಮಿಂಚಿನಂತೆ ಮೂಡಿ ಮರೆಯಾಗುತ್ತವೆ. ಯಾವುದೊ ಹಾಲಿವುಡ್ ಸಿನಿಮಾವನ್ನ ಕನ್ನಡದಲ್ಲಿ ನೋಡ್ತಿದ್ದೀವ ಎಂಬ ಅನುಮಾನ ನಮ್ಮೊಳಗೇ ಮೂಡಿಬಿಡುತ್ತದೆ.

ಇದು ‘ದಿ ಟಾಸ್ಕ್’ ಚಿತ್ರದ ಟ್ರೇಲರ್! ಈ ಹಿಂದೆ ‘ಚೂರಿ ಕಟ್ಟೆ’ ಎಂಬಸಸ್ಪೆನ್ಸ್ ಸಿನಿಮಾ ಕೊಟ್ಟಿದ್ದ ರಾಘು ಶಿವಮೊಗ್ಗ ನಿರ್ದೇಶನ ಮಾಡಿರೋ ಹೊಸ ಸಿನಿಮಾ ಇದು.ನೀವು ‘ಭೀಮ’ನೋಡಿದ್ರೆ, ಅದರಲ್ಲಿ ಬರೋ ಭ್ರಷ್ಟ ಪೊಲೀಸ್ ಪಾತ್ರದಾರಿಯೇ ಈ ರಾಘು ಶಿವಮೊಗ್ಗ. ರಾಘು ಬರೀ ನಟರಲ್ಲ, ಅವರೊಬ್ಬ ಅದ್ಭುತ ಬರಹಗಾರರು. ಸೃಜನಶೀಲ ನಿರ್ದೇಶಕರು. ಇವರು ಇದೀಗ ‘ದಿ ಟಾಸ್ಕ್’ ಚಿತ್ರದ ಮೂಲಕ ಭಯಂಕರವಾದ ಸತ್ಯವೊಂದನ್ನು ಜಗಜ್ಜಾಹಿರು ಮಾಡಲು ಹೊರಟಿದ್ದಾರೆ ಅನ್ನಿಸುತ್ತೆ!

‘ದಿ ಟಾಸ್ಕ್’ ಚಿತ್ರದ ಟ್ರೇಲರ್‌ನಲ್ಲೇ ಅದು ಎದ್ದು ಕಾಣಿಸುತ್ತೆ! ಹಾಗಾದ್ರೆ, ಯಾವುದು ಆ ವಿಡಿಯೋ? ಯಾರು ಆ ರಾಜಕಾರಣಿ?? ಆತನಿಗೆ ಬಲಿಯಾದ ಆ ಮುಗ್ದ ಬಾಲಕಿ ಯಾರು??? ಇವೇ ಮುಂತಾದ ಭಯಂಕರ ಪ್ರಶ್ನೆಗಳು ಕಣ್ಣ ಮುಂದೆ ನರ್ತಿಸುತ್ತವೆ!! ಈ ಬಗ್ಗೆ ರಾಘು ಅವರನ್ನ ಕೇಳಿದ್ರೆ ನಸು ನಗುತ್ತಾರೆಯೇ ವಿನಃ ಉತ್ತರವಿಲ್ಲ. ಸಿನಿಮಾ ನೋಡಿ... ಗೊತ್ತಾಗುತ್ತೆ ಅನ್ನೋದು ಅವರ ಗತ್ತು!




ಏನಾದ್ರೂ ಕ್ಲೂ ಸಿಗುತ್ತಾ... ಸಿನಿಮಾ ನೋಡುವ ಮುನ್ನ ನಾವೇ ಏನಾದ್ರೂ ಕಂಡು ಹಿಡಿಯಬಹುದಾ...ಅಂದುಕೊಂಡು ಹತ್ತಾರು ಸಲ ನೋಡಿದ್ದೇವೆ.... ಗೊತ್ತಾಗ್ತಾನೇ ಇಲ್ಲ! ಹಾಗಾದ್ರೆ ಯಾವುದ್ರಿ, ಆ ವಿಡಿಯೋ?! ಯಾರದ್ದಿರಬಹುದು?!




ನವೆಂಬರ್ 21 ‘ದಿ ಟಾಸ್ಕ್’ ಬಿಡುಗಡೆ. ಅಲ್ಲಿ ತನಕ ಕಾಯದೆ ವಿಧಿಯಿಲ್ಲ ಎಂಬತಾಗಿದೆ ನಮ್ಮ ಸ್ಥಿತಿ. ಅಂದಹಾಗೆ, ಕಳೆದ ಅಕ್ಟೋಬರ್ 26ರಂದು ಮಾಗಡಿ ರೋಡ್‌ನ ಜಿ.ಟಿ. ವರ್ಲ್ಡ್ ಮಾಲ್‌ನ ಪಿವಿಆರ್ ಆಡಿಟೋರಿಯಂನಲ್ಲಿ ‘ದಿ ಟಾಸ್ಕ್’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು. ಲೋಕಾಯುಕ್ತ ಎಡಿಜಿಪಿ ಚಂದ್ರಶೇಖರ್ ಸರ್ ಮುಖ್ಯ ಅತಿಥಿಯಾಗಿ ಆಗಮಿಸಿ ಟ್ರೇಲರ್ ಬಿಡುಗಡೆಗೊಳಿಸಿದ್ದಾರೆ. ಗೂಗ್ಲಿ ಪವನ್, ಭರ್ಜರಿ ಚೇತನ್, ಸಿಂಪಲ್ ಸುನಿ ಹಾಜರಿದ್ದರು.

ಈ ಸಿನಿಮಾ ಟ್ರೇಲರ್ ಬಿಡುಗಡೆಗೆ ಅವರು ಬಂದಿದ್ದೇಕೆ ಅಂದರೆ, ಲೋಕಾಯುಕ್ತದಲ್ಲೇ ಡಿವೈಎಸ್ಪಿ ಆಗಿರೋ ಎಲ್.ವೈ. ರಾಜೇಶ್ ಅವರೇ ಕಾರಣ... ಅರ್ಥ ಅಗಲಿಲ್ವೆ, ‘ದಿ ಟಾಸ್ಕ್’ ಚಿತ್ರದ ಹೀರೋ ಅವರ ಸುಪುತ್ರ ಜಯಸೂರ್ಯ ಅಜಾದ್! ಇನ್ನೊಬ್ಬ ಹೀರೋ ಚೂರಿ ಕಟ್ಟೆ ಫೇಮ್ ಸಾಗರ್ ರಾಮ್. ಜೈ ಸೂರ್ಯ ಈ ಮೊದಲು ದುನಿಯಾ ವಿಜಿ ಅವರ ಸಲಗ, ಭೀಮ ಚಿತ್ರಗಳಲ್ಲಿ ವಿಲ್ಲನ್ ಪಾತ್ರದಲ್ಲಿ ಮಿಂಚಿದ್ದಾರೆ. ಎಲ್ ಎಲ್‌ಬಿ ಸ್ಟೂಡೆಂಟ್ ಆಗಿರೋ ಜೈ ಸ್ಫುರದ್ರೂಪಿ ಮಾತ್ರವಲ್ಲ,ಕಂಚಿನ ಕಂಠದೊಡೆಯ! ಅವರ ವಾಯ್ಸ್ ಅಷ್ಟು ಅದ್ಭುತವಾಗಿದೆ.

ಬಹುಷಃ ಸಲಗ,ಭೀಮ ಚಿತ್ರಗಳಲ್ಲಿ ಅವರ ಪರ್ಫಾರ್ಮೆನ್ಸ್ ನೋಡಿಯೇ ಇದೀಗ 'ದಿ ಟಾಸ್ಕ್’ ಕೊಟ್ಟಿರುತ್ತಾರೆ, ರಾಘು ಶಿವಮೊಗ್ಗ.... ಇದರಲ್ಲಿ ಆ ವಿಡಿಯೋ ಕಂಡು ಹಿಡಿಯುವ, ಆ ರಾಜಕಾರಣಿಯ ಕಪಿ ಮುಷ್ಠಿಯಿಂದ ಆ ಯುವತಿಯನ್ನ ರಕ್ಷಿಸುವ ಪಾತ್ರ ಇರಬಹುದೇನೋ.... ನಿರ್ದೇಶಕರು ಜೈ ಸೂರ್ಯ ಮತ್ತು ಸಾಗರ್‌ಗೆ ಅದೇ ‘ಟಾಸ್ಕ್’ ಕೊಟ್ಟಿರುತ್ತಾರೆ ಅನ್ನೋದು ನಮ್ಮ ಅನುಮಾನ! ಒಟ್ಟಾರೆ, ಟ್ರೇಲರ್ ನಲ್ಲೇ ತೀವ್ರ ಕುತೂಹಲ ಕೆರಳಿಸಿರೋ ‘ದಿಟಾಸ್ಕ್’ ನಾಳೆ ರಿಲೀಸ್ ಆದ ಮೇಲೆ ಅದ್ಯಾವ ರಾಜಕೀಯ ಮುಖಂಡನ ಮುಖವಾಡ ಕಳಚಲಿದೆಯೋ...?! ☯




# ಈ ಉಸಿರಿರುವವರೆಗೂ ಕಾಯುವೆ ನಿನ್ನ ಪ್ರೀತಿಗಾಗಿ

**(ಕಳೆದ ಸಂಚಿಕೆಯಿಂದ)**

ಆಯುಷಿ ಇನ್ನೂ ಮೂರು ತಿಂಗಳಲ್ಲಿ ನಮ್ಮ ನಡುವಿನ ಕಾಂಟ್ರಾಕ್ಟ್ ಮುಗಿಯುತ್ತೆ ನಾನು ಇಲ್ಲಿಂದ ಹೊರಡಬೇಕು ಎಂದು ಹೇಳಿದ್ದನ್ನು ಕೇಳಿ ಅವಳನ್ನ ಬಿಟ್ಟು ಬೆಡ್ ಮೇಲಿಂದ ಎದ್ದು ಅವಳ ಕಡೆಗೆ ತಿರುಗಿ ತಣ್ಣನೆ ನಗುವ ಆರವ್ 'ಅದಕ್ಕೆಲ್ಲ ಇನ್ನೂ ತುಂಬಾ ಟೈಮ್ ಇದೆ ಮೈ ಸ್ವೀಟ್ ಹಾರ್ಟ್ ಅಷ್ಟಕ್ಕೂ ನಾನು ನಿನ್ನ ಹೋಗೋಕೆ ಬಿಟ್ರೆ ತಾನೇ ನೀನು ಹೋಗುವುದು ನೀನು ನಾನ್ ಹೇಳೋವರ್ಗು ಎಲ್ಲೂ ಹೋಗೋ ಹಾಗಿಲ್ಲ ನೀನು ನನ್ನ ಜೊತೆಯಲ್ಲೇ ಇರಬೇಕು' ಎನ್ನುತ್ತಾನೆ....

ಆರವ್ ಮಾತುಗಳನ್ನು ಕೇಳಿ ಗೊಂದಲಕ್ಕೆ ಒಳಗಾಗುವ ಆಯುಷಿ 'ಏನ್ ಹೇಳ್ತಿದ್ದೀಯಾ ಆರವ್ ನೀನು.... ಇನ್ನು ಮೂರು ತಿಂಗಳಲ್ಲಿ ನಮ್ಮ ಮಧ್ಯೆ ಆಗಿರೋ ಕಾಂಟ್ರಾಕ್ಟ್ ಮುಗಿಯುತ್ತೆ ಆಮೇಲೆ ಕೂಡ ನಾನು ನಿನ್ ಜೊತೆಯಲ್ಲಿ ಇರಬೇಕಾ ಯಾಕೆ ಈ ರೀತಿ ಹೇಳ್ತಾ ಇದ್ಯಾ' ಎಂದು ಒಂದು ಸಣ್ಣ ನಿರೀಕ್ಷೆಯೊಂದಿಗೆ ಅವನು ಏನನ್ನಾದರೂ ಹೇಳಲಿ ಎಂದು ಅವನನ್ನ ಪ್ರಶ್ನಿಸುತ್ತಾಳೆ...

ಆದರೆ ಅವಳ ನಂಬಿಕೆಯನ್ನು ಹುಸಿಯಾಗಿಸುವ ಆರವ್ ಅವಳ ಎರಡು ಕೆನ್ನೆಗಳನ್ನ ಒರಟಾಗಿ ಒತ್ತಿ ಹಿಡಿದು ಕೋಪದಿಂದ 'ಈ ಆರವ್ ಗೆ ಪ್ರಶ್ನೆ ಮಾಡೋದು ನಾನ್ ಹೇಳಿದ್ದಕ್ಕೆ ನೋ ಅನ್ನೋದು ಅಂದ್ರೆ, ಇಷ್ಟ ಆಗೋಲ್ಲ ಅನ್ನೋದು ಗೊತ್ತು ಅಲ್ವಾ ಆಯುಷಿ ನಿನಗೆ....ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳ್ಬೇಡ ನಾನು ನಿನ್ನ ಹೋಗು ಅಂತ ಹೇಳುವವರೆಗೂ ನೀನು ಎಲ್ಲೂ ಹೋಗೋ ಹಾಗಿಲ್ಲ ನೀನು ಹೀಗೆ ಬೆಳಿಗ್ಗೆ ನನ್ನ ಸೆಕ್ರೆಟರಿ ಆಗಿ.... ಇನ್ನೂ ರಾತ್ರಿ ನನ್ನ ಸೀಕ್ರೆಟ್ ಹೆಂಡ್ತಿಯಾಗಿ ಇಲ್ಲೇ ಇರಬೇಕು ಅಷ್ಟೇ' ಎಂದು ಗಂಭೀರವಾಗಿ ಹೇಳಿ ಬಾತ್ರೂಮ್‌ಗೆ ಹೋಗುತ್ತಾನೆ...

ಅವನು ಹೋದ ಕಡೆಯೇ ನೋಡುತ್ತಾ ಕೂರುವ ಆಯುಷಿಗೆ ಅವನ ಮಾತಿನ ಅರ್ಥ ಏನು ಎಂಬುದೇ ತಿಳಿಯುವುದಿಲ್ಲ... 'ಈ ಆರವ್ ಯಾಕ್ ಹೀಗೆ...ಯಾಕ್ ಈ ರೀತಿ ಮಾತಾಡಿದ್ರು, ಇವರ ಮಾತಿನ ಅರ್ಥ ಆದ್ರೂ ಏನು... ಅಂದ್ರೆ, ನಮ್ ನಡುವಿನ ಈ ಕಾಂಟ್ರಾಕ್ಟ್ ಮುಗಿದ ಮೇಲೂ ಕೂಡ ನಾನು ಇವರ ಕಾಂಟ್ರಾಕ್ಟ್ ಹೆಂಡತಿಯಾಗಿ ಇಲ್ಲೇ ಉಳಿಯಬೇಕಾ ಯಾಕಾಗಿ? ನನಗೆ ನನ್ನದೇ ಆದ ಅಸ್ತಿತ್ವ ಇಲ್ಲವಾ ಇನ್ನೂ ಎಷ್ಟು ದಿನ ಹೀಗೆ ಇವರ ಜೊತೆಗೆ ಕದ್ದು ಮುಚ್ಚಿ ಸಂಸಾರ ಮಾಡ್ಕೊಂಡು ಇರಬೇಕು ರಾತ್ರಿ ಮಾತ್ರ ಗಂಡ ಹೆಂಡತಿ ಆದ್ರೆ, ಬೆಳಗಿನ ಸಮಯ ಲೋಕದ ಕಣ್ಣಿಗೆ ಬಾಸ್ ಸೆಕ್ರೆಟರಿ ಅಷ್ಟೇ ಅದನ್ನು ಮೀರಿ ನಮ್ಮಿಬ್ಬರ ಮಧ್ಯೆ ಯಾವುದೇ ಸಂಬಂಧ ಇರೋದಿಲ್ಲ ಇದೆಲ್ಲಾ ಇನ್ನೂ ಎಷ್ಟು ದಿನ...ಇಲ್ಲಿ ನನ್ನ ಭಾವನೆಗಳಿಗೆ ಬೆಲೆನೇ ಇಲ್ಲವಾ.'

ಎಷ್ಟು ಸಲ ಕೇಳಿದ್ದೀನಿ ಯಾಕೆ ನನ್ನ ಮದುವೆ ಆಗಿದ್ದು ನೀವು... ಮದುವೆ ಆದ್ರೂ ಸಹ ಅದನ್ನ ಯಾರ ಬಳಿಯೂ ಹೇಳೊಲ್ಲ ಯಾಕೆ ಮುಚ್ಚಿಟ್ಟಿದ್ದೀರಾ ಏನ್ ನಿಮ್ಮ ಉದ್ದೇಶ ಅಂತ... ಆದ್ರೆ ಆ ಮಾತು ಬಂದಾಗಲೆಲ್ಲ ಮಾತು ಮರೆಸ್ತಾರೆ ಇಲ್ಲಾ ಕೋಪ ಮಾಡ್ಕೋತಾರೆ ಏನಿದೆ ಇವರ ಮನಸ್ಸಿನಲ್ಲಿ ಯಾಕ್ ಹೀಗೆ ನನಗೆ ಮಾನಸಿಕವಾಗಿ ಹಿಂಸೆ ಕೊಡ್ತಾ ಇದ್ದಾರೆ...

'ಇವರಿಗೇನು ಗೊತ್ತು ಒಂದು ಹೆಣ್ಣಿಗೆ ಮದುವೆ ಆಗಿದ್ರು, ಅದನ್ನು ಎಲ್ಲೂ ಹೇಳಿ ಕೊಳ್ಳದೆ ಕದ್ದು ಮುಚ್ಚಿ ಸಂಸಾರ ಮಾಡೋದು ಎಷ್ಟು ಕಷ್ಟ ಅಂತ... ಅದು ಅವಳ ಮನಸ್ಸನ್ನು ಎಷ್ಟು ಹಾಳು ಮಾಡುತ್ತೆ ಅಂತ... ಆಫೀಸ್‌ನಲ್ಲಿ ಒಮ್ಮೊಮ್ಮೆ ಯಾರಾದರೂ ನಿನ್ನ ಮತ್ತೆ ಬಾಸ್ ಮಧ್ಯೆ ಏನ್ ನಡೀತಾ ಇದೆ ಅಂತ ಕೇಳಿದಾಗ... ನಡತೆ ಬಗ್ಗೆ ಮಾತಾಡೋವಾಗ ಸತ್ತುಹೋಗೋ ಹಾಗೇ ಆಗುತ್ತೆ ಆದರೆ ಇದೆಲ್ಲಾ ಇವರಿಗೆ ಹೇಗೆ ಗೊತ್ತಾಗುತ್ತೆ.... ಇವರ ಜೊತೆ ಪೂರ್ತಿ ಜೀವನ ಬಾಳೋ ಅವಕಾಶನಾ ನಾನು ಕೇಳಿಕೊಂಡು ಬಂದಿಲ್ಲ ಆದ್ರೆ ಈ ರೀತಿ ಜೀವನ ಕೂಡ ನಂಗೆ ಬೇಡ ಇದನೆಲ್ಲ ಆರವ್‌ಗೆ ಹೇಗೆ ಅರ್ಥ ಮಾಡಿಸಲಿ' ಎಂದು ಯೋಚಿಸುತ್ತ ಕೂತಿರುತ್ತಾಳೆ...

ಸ್ನಾನ ಮುಗಿಸಿ ಬಂದ ಆರವ್ ಆಯುಷಿ ತಾನು ಸ್ನಾನಕ್ಕೆ ಹೋದಾಗಿನಿಂದ ಯೋಚಿಸುತ್ತಲೇ ಕೂತಿರುವುದನ್ನು ನೋಡಿ ಕೋಪಗೊಂಡವನು ಅವಳತ್ತ ಬಂದು ತನ್ನ ಕೈಯಲ್ಲಿದ್ದ ಟವೆಲ್ ಅನ್ನು ಕೋಪದಿಂದ ದೂರಕ್ಕೆ ಎಸೆದು ಅವಳನ್ನ ಹಾಸಿಗೆಯಿಂದ ಎಬ್ಬಿಸಿ ನಿಲ್ಲಿಸಿ 'ಆಯುಷಿ ಏನ್ ಯೋಚ್ನೆ ಮಾಡ್ತಾ ಕೂತಿದಿದ್ದೀಯ ನಿನ್ಗೆ ನಾನು ಹೇಳಿದ್ದು ಅರ್ಥ ಆಗ್ತಾ ಇಲ್ವಾ... ನೀನು ಎಷ್ಟು ಯೋಚನೆ ಮಾಡ್ತಾ ಕೂತರು ಅಷ್ಟೇ ನೀನು ಹೇಗಿರಬೇಕು ಎಲ್ಲಿರಬೇಕು ಯಾರ ಜೊತೆಗೆ ಇರಬೇಕು ಎಲ್ಲವನ್ನು ಡಿಸೈಡ್ ಮಾಡಬೇಕಾಗಿರೋನು ಯಾರು ಹೇಳು ಒನ್ ಅಂಡ್ ಓನ್ಲಿ ಈ ಆರವ್ ಶರ್ಮಾ' ಎಂದವನು

ಅವಳನ್ನು ಜೋರಾಗಿ ಹಾಸಿಗೆಯ ಮೇಲೆ ತಳ್ಳಿ ತನ್ನ ಡ್ರೆಸ್ಸಿಂಗ್ ಟೇಬಲ್ ಬಳಿ ಹೋದವನು ತಯಾರಾಗುತ್ತ 'ಇವತ್ತು ಮಾರ್ನಿಂಗ್ ಎಂಟು ಗಂಟೆಗೆ ಕದಂಬ ಹೋಟೆಲ್ ಅಲ್ಲಿ ಮೀಟಿಂಗ್ ಇರೋದು ಗೊತ್ತು ತಾನೇ ನಿನ್ಗೆ ಇನ್ನೂ ಹತ್ತು ನಿಮಿಷ ಟೈಮ್ ಕೊಡ್ತೀನಿ ಅಷ್ಟರಲ್ಲಿ ರೆಡಿಯಿರಬೇಕು' ಎನ್ನುತ್ತಾನೆ...

ಅವನ ಈ ಬಗೆಯ ವರ್ತನೆಯನ್ನು ನೋಡಿ ನೋಡಿ ಬೇಸತ್ತು ಹೋಗಿದ್ದ ಆಯುಷಿ ಇಂದು ಅಸಹನೆಯಿಂದ 'ಇಲ್ಲ ನಾನೆಲ್ಲಿಗೂ ಬರಲ್ಲ ಇವತ್ತು ನಾನು ಒಬ್ಬಳೇ ಇರಬೇಕು ಅನ್ನಿಸುತ್ತಿದೆ ದಯವಿಟ್ಟು ನನ್ನ ಬಿಟ್ಟುಬಿಡಿ ನಿಮ್ಮ ಪಾಡಿಗೆ ನೀವಿಲ್ಲಿಂದ ಹೋಗಿ' ಎಂದು ಕೈ ಮುಗಿದು ಹೇಳುತ್ತಾಳೆ....

ಆಯುಷಿಯ ಮಾತಿಗೆ ಮತ್ತೆ ಅವಳ ಕಡೆ ಬಂದ ಆರವ್ ಹಾಸಿಗೆ ಮೇಲೆ ಅವಳ ಪಕ್ಕ ಕೂರುತ್ತಾ ಹೆಗಲ ಮೇಲೆ ಕೈ ಹಾಕಿ ಅವಳನ್ನು ತನ್ನತ್ತ ಸೆಳೆದುಕೊಳ್ಳುತ್ತ 'ಏನ್ ಆಯುಷಿ ನೀನು ನನ್ ಜೊತೆ ಬರಲ್ವಾ... ನಂಜೊತೆ ಬರಲ್ಲ ಅನ್ನೋಷ್ಟು ಧೈರ್ಯ ಬಂದಿದೆ ನಿನಗೆ...ಓಕೆ ಆಯ್ತು ಇವತ್ತು ನೀನ್ ಮನೇಲೇ ಇರು ನಾನು ಹೋಗಿ ನನ್ನ ಕೆಲಸಗಳ ಕಡೆಗೆ ಹೋಗೋ ಮೊದಲು ಒಂದು ಹಾಸ್ಪಿಟಲ್ ಹೋಗಿ ಒಬ್ಬರ ತಾಯಿಗೆ ಒನ್ ಹೌರ್ ಟ್ರೀಟ್ಮೆಂಟ್ ನಿಲ್ಲಿಸೋಕೆ ಹೇಳಬೇಕು... ಪಾಪ ಅವರ ಮಗಳಿಗೆ ಅವರ ಬಗ್ಗೆ ಕಾಳಜಿನೆ ಇಲ್ಲಾ ನನ್ನ ಹಿಂದೆ ಆಯುಷಿ ಬಾಸ್ ನಾ ತನ್ನ ಬಲೆಗೆ ಬೀಳಿಸಿ ಕೊಂಡಿದ್ದಾಳೆ ಅದಕ್ಕೆ ಹುಡುಗೀರನ್ನ ಕಂಡರೆ ಆಗದೇ ಇರೋ ಬಾಸ್ ಇವಳನ್ನ ಕೇರ್ ಮಾಡ್ತಾರೆ ಅವಳ ಜೊತೆನೇ ಇರ್ತಾರೆ ಅಂತ ಅವಳ ಮೈಮಾಟದಿಂದ ಬಾಸ್ ನ ತನ್ನ ಕಡೆಗೆ ಸೆಳೆದುಕೊಂಡಿದ್ದಾಳೆ ಅಂತ ನನ್ನ ಸರಿನಾ ಬಾಯ್' ಎಂದವನು ಮೇಲೆದ್ದು ಅಲ್ಲಿಂದ ಹೊರಡಲು ನೋಡುವಾಗ....

ಮೌನವಾಗಿ ಅವನ ಕೈ ಹಿಡಿಯುವ ಆಯುಷಿ ಅವನ ಎದುರು ಮಂಡಿ ಊರುತ್ತಾ ಅವನ ಕೈ ಹಿಡಿದು 'ಆರವ್ ಹೀಗೆ ಯಾವಾಗಲು ನನ್ನ ತಾಯಿನ ಮಧ್ಯೆ ತಂದು ನನ್ನ ಬ್ಲಾಕ್ ಮೇಲ್ ಮಾಡೋದನ್ನ ನಿಲ್ಲಿಸು ಪ್ಲೀಸ್... ಆರವ್ ಹಾಗೆ ಮಾಡಬೇಡ ಈ ಭೂಮಿ ಮೇಲೆ ನನಗೆ ಅಂತ ಇರೋ ಜೀವ ಅದೊಂದೇ ಅದನ್ನು ಕಳ್ಕೊಂಡು ಬಿಟ್ರೆ ನಾನು ಅನಾಥೆ ಆಗಿಹೋಗ್ತೀನಿ....ಪ್ಲೀಸ್ ಯಾಕ್ ಹೀಗೆ ಮಾಡ್ತಾ ಇದ್ಯಾ ನನ್ನನ್ನ ನೀನು ಮಾನಸಿಕವಾಗಿ ಕೊಲ್ತಾ ಇದ್ದೀಯ..... ಯಾಕೆ ನನ್ನ ಮೇಲೆ ಏನ್ ದ್ವೇಷ ನಿನಗೆ ನಾನು ಅಂತ ತಪ್ಪು ಏನ್ ಮಾಡಿದ್ದೀನಿ' ಎಂದು ಅಳುತ್ತಾ ಕೇಳುತ್ತಾಳೆ....

ಆಗ ಅವಳ ಭುಜವನ್ನು ಹಿಡಿದು ಮೇಲಕ್ಕೆಬ್ಬಿಸಿದವನು 'ಮೈ ಡಿಯರ್ ವೈಫಿ ಏನ್ ಮಾತು ಅಂತ ಆಡ್ತೀಯ ನಾನು ನಿನ್ನ ದ್ವೇಷ ಮಾಡ್ತಿನ ನೋ ನೋ ನಿನ್ನ ದ್ವೇಷ ಮಾಡೋ ಹಾಗಿದ್ರೆ ನಿನ್ನ ಮದುವೆ ಆಗಿ ಇಷ್ಟು ಪ್ರೀತಿಯಿಂದ ನೋಡ್ಕೋತಾ ಇದ್ನ ನೀನು ಏನೇನೋ ಯೋಚನೆ ಮಾಡ್ತ್ಯಪ್ಪ ಹೋಗು ಮನೇಲೇ ಇರಬೇಕು ಅಂತ ಇಷ್ಟ ಪಡ್ತಾ ಇದ್ಯಲ್ಲ ಹೋಗು ಮನೇಲೇ ಇದ್ದು ರೆಸ್ಟ್ ಮಾಡು ನನಗೆ ತುಂಬಾ ಕೆಲಸ ಇದೆ ಮೊದಲು ಹಾಸ್ಪಿಟಲ್ ಗೆ ಬೇರೆ ಹೋಗಬೇಕು' ಎಂದು ಅವಳ ಕೆನ್ನೆಯನ್ನು ತಟ್ಟಿ ತೀಕ್ಷ್ಣವಾಗಿ ಹೇಳಿದಾಗ....

ಅವನು ಹೇಳಿದಂತ ಮಾತುಗಳಿಂದ ಮೊದಲೇ ನೊಂದಿದ್ದ ಮನಸ್ಸು ಇನ್ನೂ ತನ್ನ ಕೈಯಲ್ಲಿ ಅವನ ಹರಿತವಾದ ಮಾತುಗಳನ್ನು ಕೇಳಲು ಸಾಧ್ಯವಿಲ್ಲ ಎನಿಸಿ ತನ್ನೆದುರಿಗೆ ನಿಂತಿದ್ದ ಆರವ್ ಎದೆ ಮೇಲೆ ತಲೆಯನ್ನ ಇಡುವ ಆಯುಷಿ... 'ಬರ್ತೀನಿ ಇನ್ನೂ ಹತ್ತು ನಿಮಿಷದಲ್ಲಿ ರೆಡಿಯಾಗಿ ಬರ್ತೀನಿ' ಎಂದು ಹೇಳಿ ಅವನಿಂದ ದೂರ ಸರಿದು ತಯಾರಾಗಲು ಹೋಗುತ್ತಾಳೆ...

ಅವಳು ತನ್ನ ದಾರಿಗೆ ಬಂದಳೆಂದು ಸಂತಸಪಡುವ ಆರವ್ 'ನನ್ನಿಂದ ಬಚಾವ್ ಆಗೋಕೆ ಸಾಧ್ಯ ಇಲ್ಲಾ ಅಂತ ಗೊತ್ತಿದ್ದು ಗೊತ್ತಿದ್ದು ಅನವಶ್ಯಕ ವಾದ ಮಾಡೋಕೆ ಬರ್ತಾಳೆ' ಎಂದುಕೊಳ್ಳುತ್ತಾನೆ.

ಆಯುಷಿ ಹೇಳಿದಂತೆ ಹತ್ತು ನಿಮಿಷದಲ್ಲಿ ತಯಾರಾಗಿ ಬರುತ್ತಾಳೆ ಬಳಿಕ ಇಬ್ಬರು ಮನೆಯಿಂದ ಹೊರಟು.. ಮೀಟಿಂಗ್ ಮುಗಿಸಿ ಅದೇ ಹೋಟೆಲ್ನಲ್ಲಿ ಬ್ರೇಕ್ ಫಾಸ್ಟ್ ಅನ್ನು ಸಹ ಮುಗಿಸಿ ಇಬ್ಬರು ಆಫೀಸಿಗೆ ಹೋಗುತ್ತಾರೆ...

★★★


ಆಫೀಸ್ಗೆ ಬಂದ ನಂತರ ಆಯುಷಿ ಆರವ್ ಗೆ ಅಂದಿನ ಶೆಡ್ಯೂಲ್ ತಿಳಿಸಿ ತನ್ನ ಟೇಬಲ್ ಗೆ ಬಂದು ತನ್ನ ಫೋನ್ ಅನ್ನು ಓಪನ್ ಮಾಡಿದವಳು ಅಲ್ಲಿ ಬರುತ್ತಿದ್ದ ಮೆಸೇಜ್ ಗಳನ್ನು ನೋಡುತ್ತಾ ಶಾಕ್ ಆಗಿ ಬಿಡುತ್ತಾಳೆ... ಅವೆಲ್ಲ ರಾತ್ರಿಯಿಂದಲೇ ಆರವ್ ಬಗ್ಗೆ ಬರುತ್ತಿದ್ದ ನ್ಯೂಸ್ ಬಗ್ಗೆ ಅವಳ ಬಳಿ ಕೇಳಲು ಕಳಿಸಿದಂತ ಮೆಸ್ಸೇಜ್ ಆಗಿರುತ್ತದೆ...

ಆ ಮೆಸೇಜ್ ಗಳನ್ನೆಲ್ಲ ಓದಿದ ಆಯುಷಿ ತಕ್ಷಣ ತನ್ನ ಮೊಬೈಲ್ ನಲ್ಲೇ ನ್ಯೂಸ್ ಚಾನೆಲ್ ಅನ್ನು ಹಾಕಿ ನೋಡುತ್ತಾಳೆ... ಅದರಲ್ಲಿ ಬರುತ್ತಿದ್ದ ವಿಷಯವನ್ನು ನೋಡಿ ಅವಳಿಗೆ ಆಶ್ಚರ್ಯವಾಗುತ್ತದೆ....ಏಕೆಂದರೆ ಅಲ್ಲಿ ಬರುತಿದ್ದದ್ದು ಆರವ್ ಬಗ್ಗೆ ಅದೇನೆಂದರೆ 'ದಿ ಗ್ರೇಟ್ ಬಿಸಿನೆಸ್ ಮ್ಯಾನ್ ವರ್ಮ ಗ್ರೂಪ್ ಆಫ್ ಕಂಪನೀಸ್ ಸಿಇಓ ಆರವ್ ವರ್ಮ ಅವರ ತಂದೆಯ ಆತ್ಮೀಯ ಸ್ನೇಹಿತ ವಿಷ್ಣು ಗುಪ್ತರವರ ಮಗಳು ಅರ್ಚನಳನ್ನು ಮದುವೆಯಾಗಲು ಮುಂದಾಗಿದ್ದು ಶೀಘ್ರದಲ್ಲಿ ಇವರಿಬ್ಬರ ನಿಶ್ಚಿತಾರ್ಥ ನಡೆಯಲಿದೆ ಎಂದು ಬಲ್ಲ ಮೂಲಗಳಿಂದ ಮಾಹಿತಿ ಬಂದಿದೆ...' ಎಂದು ಬರುತ್ತಿದ್ದ ನ್ಯೂಸ್ ಅನ್ನು ನೋಡಿದ ಆಯುಷಿ ಮನಸ್ಸು ಮುದುಡುತ್ತದೆ....

ತಾನು ಪ್ರೀತಿಸುತ್ತಿರುವ ಜೀವ ಮತ್ತೊಬ್ಬರಿಗೆ ಜೊತೆಯಾಗಲು ಹೊರಟಿದೆ....ಇದನ್ನು ಹೇಗೆ ಜೀರ್ಣಿಸಿಕೊಳ್ಳಲಿ ನಾನು... ಕೇವಲ ಪ್ರೀತಿಸಿದ್ದರೆ ಏನೋ ಅವನ ಹೆಸರು ನನ್ನ ಹಣೆಯಲ್ಲಿ ಬರೆದಿಲ್ಲ ಅನ್ಕೊಂಡು ಸಮಾಧಾನ ಮಾಡ್ಕೊಬೋದಿತ್ತು ಆದರೆ ಎಂದುಕೊಂಡವಳು ಬಟ್ಟೆಯೊಳಗೆ ಬಚ್ಚಿಕೊಂಡಿದ್ದ ತಾಳಿಯನ್ನು ಮುಟ್ಟುತ್ತಾ ಇದನ್ನ ಹೇಗೆ ಸಹಿಸಿಕೊಳ್ಳಲಿ.. ನನ್ನ ಗಂಡನನ್ನ ಇನ್ನೊಬ್ಬರ ಜೊತೆ ಹೇಗೆ ನೋಡಲಿ ಇದನ್ನ ಹೇಗೆ ತೆಗೆದುಕೊಳ್ಳಲಿ ನಾನು...ತನ್ನ ಗಂಡ ಇನ್ನೊಬ್ಬರ ಜೊತೆಯಲ್ಲಿ ಇರುವುದನ್ನೇ ಕಲ್ಪಿಸಿಕೊಳ್ಳೋಕೆ ಆಗೋಲ್ಲ ಇನ್ನೂ ಇದು... ಎಂದುಕೊಂಡವಳ ಕಣ್ಣಲ್ಲಿ ದುಃಖಕ್ಕೆ ಕಣ್ಣೀರು ಹರಿಯಲು ಶುರುವಾಗುತ್ತದೆ..

ಯಾಕ್ ನನಗೆ ಯಾವಾಗಲು ಹೀಗೆ ಆಗುತ್ತೆ ನಾನೇನು ತಪ್ಪು ಮಾಡಿದ್ದೀನಿ ನಾನು ಪ್ರೀತಿಸೋ ಜೀವಗಳು ಒಂದಲ್ಲಾ ಒಂದು ರೀತಿ ನನಗೆ ನೋವು ಕೊಡ್ತಾವೆ...ಅಪ್ಪನ್ನ ಕಳ್ಕೊಂಡೆ ಅಪ್ಪ ನನ್ನಿಂದ ದೂರ ಆಗಿ ಶಾಶ್ವತವಾಗಿ ದುಃಖ ಕೊಟ್ಟು ಹೋದರು..ಅಣ್ಣ ಮನೆ ಜವಾಬ್ದಾರಿ ತಗೊಳ್ದೆ ಎಲ್ಲಾನೂ ಮಾರಿ ಬೀದಿಗೆ ತಂದು ನಿಲ್ಲಿಸಿ ಆಗ ತಾನೇ ಪ್ರಪಂಚನ ನೋಡೋಕೆ ಸ್ಟಾರ್ಟ್ ಮಾಡಿದ್ದ ನನಗೆ ಜವಾಬ್ದಾರಿ ಹೊರೆಸಿ ನೋವು ಹತಾಶೆಯ ಕೂಪಕ್ಕೆ ತಳ್ಳಿ ಬಿಟ್ಟ.... ಇನ್ನೂ ನನಗೆ ಅಂತ ಇರೋ ಒಂದೇ ಒಂದು ಜೀವ ನನ್ನಮ್ಮ ಅವರು ನನ್ನ ಜೊತೆಗೆ ಮಾತಾಡಿನೇ ಮೂರು ವರ್ಷ ಆಗ್ತಾ ಬಂತು... ಇನ್ನೂ ಈಗ ನನ್ನ ಗಂಡ ನಾನು ಬದುಕಿರೋವಾಗಲೇ ಮತ್ತೊಂದು ಮದುವೆ ಆಗೋಕೆ ಹೊರಟಿದ್ದಾನೆ ಎಂದು ತನ್ನ ಹಣೆಬರಹವನ್ನು ಶಪಿಸಿಕೊಂಡವಳ ಕಣ್ಣಲ್ಲಿ ಬೇಸರಕ್ಕೆ ನೀರು ಒಂದೇ ಸಮನೇ ಹರಿಯುತ್ತಿರುತ್ತದೆ.

**(ಮುಂದುವರೆಯುವುದು)**





# ಸಾರಾಯಿ ಕುಡಿಯಲು ಹಣ ನೀಡಿಲ್ಲವೆಂದು ಹೆತ್ತ ತಾಯಿಯನ್ನೇ ಕತ್ತು ಸೀಳಿ ಕೊಂದ ಪಾಪಿ ಮಗ!

**ಗಂಡ-ಹೆಂಡತಿ ದಂಪತಿಗಳಿಬ್ಬರದ್ದೂ ಒಂದು ಪುಟ್ಟ ಸಂಸಾರ. ಆರತಿಗೊಂದು ಕಿರ್ತಿಗೊಂದು ಎಂಬಂತೆ ಇಬ್ಬರೂ ಮಕ್ಕಳು. ಹೆಣ್ಣು ಮಗಳು ದೊಡ್ಡವಳಾದ ಮೇಲೆ ಮದುವೆ ಮಾಡಿಕೊಡಲಾಗಿತ್ತು. ಕೂಲಿ-ನಾಲಿ ಮಾಡಿ ಕಷ್ಟಪಟ್ಟು ದುಡಿದು ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ್ದ ದಂಪತಿಗಳು ಸುಮಾರು ವರ್ಷಗಳ ಹಿಂದೆ ಗಂಡ ಅಕಾಲಿಕ ಮರಣಕ್ಕೆ ತುತ್ತಾದ. ಇದರಿಂದ ಹೆಂಡತಿಗೆ ದಿಕ್ಕೇ ತೋಚದಂತಾಗಿತ್ತು ಹೇಗೊ ಕೂಲಿ ಕೆಲಸ ಮಾಡಿ ಹೆಣ್ಣು ಮಗಳನ್ನು ಮದುವೆ ಮಾಡಿಕೊಟ್ಟಿದ್ದರು. ಇನ್ನು ಗಂಡು ಮಗನಾದವನು ಅವನೂ ಸಹ ಬೆಳೆದು ದೊಡ್ಡವನಾಗಿದ್ದ. ಗಂಡ ತೀರಿದ ಬಳಿಕ ಹೆಂಡತಿ ಮಗನೊಟ್ಟಿಗೆ ಸಂಸಾರದ ಜವಾಬ್ದಾರಿ ಹೊತ್ತು ನಡೆಸುತ್ತಿದ್ದಳು. ಆದರೆ ಮಗನಾದವನು ಕುಡಿತದ ದಾಸನಾಗಿಬಿಟ್ಟಿದ್ದ. ತಾಯಿ ಕೂಲಿನಾಲಿ ಮಾಡಿಕೊಂಡು ಬಂದ ಸಂಪಾದನೆಯಲ್ಲಿ ಮನೆ ಬಾಡಿಗೆ ದಿನಸಿ ಅಂತ ಸಂಸಾರದ ಬಗ್ಗೆ ಯೋಚನೆಯಲ್ಲಿದ್ದರೆ ಮಗನಾದವನು ದಿನನಿತ್ಯ ಕುಡಿದು ಬರುವುದು, ತಾಯಿ ಹತ್ತಿರ ಹಣಕ್ಕೆ ಪಿಡಿಸುವುದು ದಿನನಿತ್ಯದ ಆತನ ಕಾಯಕವಾಗಿತ್ತು. ಆದರೆ ಒಂದು ದಿನ ತನ್ನ ತಾಯಿ ಸಾರಾಯಿ ಕುಡಿಯಲು ತನಗೆ ಹಣ ಕೊಡಲಿಲ್ಲವೆಂದು ಹೆತ್ತ ತಾಯಿಯನ್ನೆ ಕತ್ತು ಕೊಯ್ದು ಕೊಲೆ ಮಾಡಿದ ಹೃದಯವಿದ್ರಾವಕ ಘಟನೆ ಬಾಗಲಕೋಟೆ ಜಿಲ್ಲೆಯ ತುಳಸಿಗೇರಿ ಗ್ರಾಮದಲ್ಲಿ ಜರುಗಿದ ಬಗ್ಗೆ ಕಲಾದಗಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**



ಆರೋಪಿ ವೆಂಕಟೇಶ

**ಬಾಗಲಕೋಟೆ**

✍ ಮಂಜುನಾಥ ಕರೋಳಿ

ಬಾಗಲಕೋಟೆ ಜಿಲ್ಲೆಯ ಬಾಗಲಕೋಟ ತಾಲ್ಲೂಕಿನ ತುಳಸಿಗೇರಿ ಗ್ರಾಮ ಜಿಲ್ಲೆಯ ಆಂಜನೇಯ ದೇವಸ್ಥಾನ ಒಂದು ಪುಣ್ಯಕ್ಷೇತ್ರವಾದ ಸ್ಥಳ ತುಳಸಿಗೇರಿ. ಈ ಗ್ರಾಮದ ನಿವಾಸಿಯಾದ ರಂಗಪ್ಪ ಗಿರಿಸಾಗರ ಈತನ ಧರ್ಮಪತ್ನಿ ಶಾವಕ್ಕ (58) ಇಬ್ಬರೂ ದಂಪತಿಗಳು ಕೂಲಿನಾಲಿ ಮಾಡಿ ಬದುಕು ಕಟ್ಟಿಕೊಂಡ ಚಿಕ್ಕ ಕುಟುಂಬ ಇವರಿಗೆ ಎರಡು ಮಕ್ಕಳು ಒಂದು ಗಂಡು ವೆಂಕವೇಶ (26) ಒಂದು ಹೆಣ್ಣು ಮಗಳು. ಮಗಳನ್ನು ಮದುವೆ ಮಾಡಿಕೊಡಲಾಗಿತ್ತು. ಮನೆಯ ಯಜಮಾನ ರಂಗಪ್ಪ ಹಾಗೂ ಪತ್ನಿ ಶಾವಕ್ಕ ಮಗ ವೆಂಕಟೇಶ ಸಂಸಾರವನ್ನು ಮುನ್ನೆಡಿಸಿಕೊಂಡು ಜೀವನ ಸಾಗಿಸಿದ್ದರು. ಆದರೆ ಮನೆಯ ಯಜಮಾನನಾದ ರಂಗಪ್ಪ ಕೆಲವು ವರ್ಷಗಳ ಹಿಂದೆ ಅಕಾಲಿಕ ಮರಣ ಹೊಂದಿದ್ದ. ಆದರೆ ಹೆಂಡತಿಯಾದ ಶಾವಕ್ಕ ಗಂಡ ತೀರಿಕೊಂಡ ಬಳಿಕ ಎದೆಗುಂದದೆ ಒಬ್ಬ ಹೆಣ್ಣು ಮಗಳಾಗಿ ಸಂಸಾರವನ್ನು ನಡಿಸಿದ್ದಳು. ಮಗನಾದರೂ ಮುಂದೆ ದುಡಿದು ತನ್ನನ್ನು ನೋಡಿಕೊಳ್ಳುತ್ತಾನೆ ಎಂಬ ಭರವಸೆಯಲ್ಲಿ ಬದುಕುತ್ತಿದ್ದಳು. ಆದರೆ ಮಗ ಉಂಡಾಡಿ ಗುಂಡನಾಗಿ ಬೆಳೆದು ಬಿಟ್ಟಿದ್ದ. ಮಗ ಬೆಳೆದು ದೊಡ್ಡವನಾದಂತೆ ತುಂಬಾ ದೊಡ್ಡವನಾಗಿ ಬೆಳೆದು ಬಿಟ್ಟಿದ್ದ. ಅದು ಯಾವ ಮಟ್ಟಿಗೆ ಅಂತಿರಾ ಮುಂದೆ ಓದಿ...



ಎಸ್ಪಿ ಸಿದ್ದಾರ್ಥ ಗೋಯಲ್

### ಸಾರಾಯಿ ದಾಸನಾಗಿದ್ದ ಮಗ !

ಮನೆಯಲ್ಲಿ ತಂದೆ ರಂಗಪ್ಪ ತೀರಿಕೊಂಡ ಬಳಿಕ ತಾಯಿಯಾದ ಶಾವಕ್ಕ ಸಂಸಾರ ನಡೆಸಿಕೊಂಡು ನಡೆದಿದ್ದರೆ ಆದರೆ ಮಗ ವೆಂಕಟೇಶ ಸಾರಾಯಿ ಚಟಕ್ಕೆ ಅಂಡಿಕೊಂಡಿದ್ದ. ಈ ಭೂಪ ತಾಯಿ ಬಳಿ ಹಣ ಇಸಿದುಕೊಂಡು ಸಾರಾಯಿ ಕುಡಿದು ಬಂದು ದಿನನಿತ್ಯ ಗಲಾಟೆ ಮಾಡುತಿದ್ದ. ಆದರೆ ಇಳಿವಯಸ್ಸಿನ ತಾಯಿಯನ್ನು ತಾನು ದುಡಿದು ಸಾಕುವುದು ಬಿಟ್ಟು ಆಕೆಯ ಬಳಿಯಲ್ಲಿ ಹಣ ಪಡೆದು ಸಾರಾಯಿ ಕುಡಿದು ಬರುತ್ತಿದ್ದನ್ನು ತಾಯಿಯಾದ ಶಾವಕ್ಕ ಗಿರಿಸಾಗರ ಮಗನಿಗೆ ಯಾಕಪ್ಪ ಈ ಚಟಕ್ಕೆ ಅಂಟಿಕೊಂಡಿದ್ದಿಯಾ ನನಗೂ ವಯಸ್ಸಾಗಿದೆ. ಈ ವಯಸ್ಸಿನಲ್ಲಿ ನನ್ನನ್ನು ನೀನು ನೋಡಿಕೊಳ್ಳಬೇಕು. ಆದರೆ ನಾನೇ ನಿನ್ನನ್ನು ದುಡಿದು ಸಾಕುವಂತ ಪರಿಸ್ಥಿತಿ ಬಂದಿದೆ. ಹೇಗೆ ಆದರೆ ಮುಂದಿನ ಜೀವನದ ಗತಿ ಏನು? ಎಂಬ ಬುದ್ಧಿವಾದ ಹೇಳಿದಳು. ಆದರೆ ಮಗ ತನ್ನ ತಾಯಿಯ ಮಾತನ್ನು ಕೇಳಲು ಪರಿಸ್ಥಿತಿಯಲ್ಲಿ ಇರಲ್ಲಿಲ್ಲ. ತಾಯಿ ಎಷ್ಟೇ ಬುದ್ಧಿವಾದ ಹೇಳಲು ಬಂದರೂ ಗ್ರಾಮದ ಹಿರಿಯರು ಬುದ್ಧಿ ಹೇಳಿದರು. ತಾನು ತನ್ನ ಚಾಳಿಯನ್ನು ಬಿಡದೇ ಉಂಡಾಡಿಗುಂಡನಾಗಿ ದಿನ ನಿತ್ಯ ದುಡಿಯದೇ ತಾಯಿ ಹತ್ತಿರ ಹಣವನ್ನು ಪಡೆದು ಕುಡಿದು ಬಂದು ತಾಯಿಗೆ ಬೈಯುತ್ತಿದ್ದ. ಇದರಿಂದ ಬೇಸತು ತಾಯಿ ಹಣೆ ಬಹರದಲ್ಲಿ ಏನಿದಿಯೋ ಅದೇ ಆಗುತ್ತದೆ ಅಂದು ಕೊಂಡು ಜೀವನ ಸಾಗಿಸಿದ್ದಳು. ಗಂಡನಾದ ರಂಗಪ್ಪ ತೀರಿಕೊಂಡ ಬಳಿಕ ಮಗ ವೆಂಕಟೇಶ ತನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಅಂದುಕೊಂಡು ಜೀವನ ಸಾಗಿಸಿದ್ದರೆ ಆದರೆ ಮಗ ತದ್ವಿರುದ್ಧವಾಗಿ ಬೆಳೆದು ನಿಂತಿದ್ದ. ಆದರೆ ತಾಯಿ ಎಷ್ಟೇ ಆದರೂ ಮಗ ಅಂತಾ ಕೂಲಿ ಮಾಡಿ ಸಾಕಿಸಲಿಹಿದ್ದಳು. ಆದರೆ ಕೂಲಿಯಿಂದ ಬಣದ ಸಂಪಾದನೆಯಲ್ಲಿ ಮನೆ ನಡೆಸಬೇಕು. ಇರುವುದು ಒಂದು ಬಾಡಿಗೆ ಮನೆಯಲ್ಲಿ ಆದರೆ ಹಿರಿ ಹೆಣ್ಣು ಜೀವ ಎಷ್ಟು ಅಂತ ದುಡಿದು ಸಂಸಾರ ನಡೆಸಿ ಮಗನಿಗೂ ಹಣ ನೀಡುವುದು. ಇದನ್ನು ಗ್ರಾಮಸ್ಥರು ಆ ತಾಯಿಯನ್ನು ನೋಡಿ ಮರುಗುತ್ತಿದ್ದರು. ಆದರೆ ಈ ಪಾಪಿ ಮಗನಿಗೆ ಕಿಂಚಿತ್ತು ತನ್ನ ತಾಯಿಯನ್ನು ತಾನು ದುಡಿದು ಸಾಕಬೇಕು ಅನಿಸಲೇ ಇಲ್ಲ. ಅದಕ್ಕೆ ತಾಯಿ ಶಾವಕ್ಕ ದಿನನಿತ್ಯ ತನ್ನ ಕಾಯಕದಲ್ಲಿ ತೊಡಗಿ ಜೀವ ಸವಿಸಿ ದುಡಿದು ಜೀವನ ನಡೆಸಿದ್ದಳು. ಆದರೆ ಮಗ ದಿನಂಪ್ರತಿ ತಾಯಿಗೆ ಹಣಕ್ಕೆ ಪೀಡಿಸುವುದನ್ನು ಬಿಡಲೇ ಇಲ್ಲ. ಇದರಿಂದ ತಾಯಿ ತುಂಬಾ ಬೇಸತ್ತಿದ್ದಳು. ಒಂದು ದಿನ ಮಗನಿಗೆ ಹಣ ಕೊಡಲು ನಿರಾಕರಿಸಿದಳು. ಮಗ ಸಿಟ್ಟಾಗಿ ಏನು ಮಾಡಿದ?



ಅ॥ ಎಸ್ಪಿ ಪ್ರಸನ್ನ ದೇಸಾಯಿ




ಡಿವೈಎಸ್ಪಿ ಗಜಾನಂದ ಸುತಾರ

### ಹೆತ್ತ ತಾಯಿಯನ್ನು ಕತ್ತು ಕೊಯ್ದು ಕೊಂದ ಪಾಪಿ ಮಗ !

ಅಂದು ದಿನಾಂಕ 16/10/2025ರಂದು ಮಧ್ಯಾನ್ಹ ಸುಮಾರು 12 ಗಂಟೆ ಸಮಯ ಆಗಿರಬಹುದು ಎಂದಿನಂತೆ ತಾಯಿ ಬೆಳಿಗ್ಗೆ ಕೂಲಿ ಕೆಲಸ ಮುಗಿಸಿ ಕೊಂದು ಮನೆಗೆ ಬಂದಿದ್ದಳು. ಅದೇ ಸಮಯದಲ್ಲಿ ಮಗ ವೆಂಕಟೇಶ ಕೂಡಾ ಮನೆಯಲ್ಲಿದ್ದನ್ನು ತನ್ನ ತಾಯಿ ಮನೆಗೆ ಬಂದ ನಂತರ ಹಣಕ್ಕಾಗಿ ಎಂದಿನಂತೆ ಪೀಡಿಸಿದ್ದಾನೆ. ಆದರೆ ತಾಯಿ ಶಾವಕ್ಕ ಇದರಿಂದ ತುಂಬಾ ಬೇಸತ್ತಿದ್ದಳು. ದಿನ ಎಷ್ಟು ಅಂತ ನಿನಗೆ ಹಣ ಕೊಡುವುದು ನಾನೇ ನಿನ್ನನ್ನು ದುಡಿದು ಸಾಕುತ್ತಿದ್ದೇನೆ ಅಂತಾ ಬಾಯಿಗೆ ಬಾಯಿ ಬೇಳೆದು ದೊಡ್ಡ ಗಲಾಟೆ ನಡೆಯುತ್ತಿರುವಾಗ ಮಗ ವೆಂಕಟೇಶ ಹಣ ಕೊಡಲು ನಿರಾಕರಿಸಿದ ತಾಯಿ ಶಾವಕ್ಕ ನನ್ನು ಮನೆಯಲ್ಲಿದ್ದ ಒಂದು ಬಟ್ಟೆಯಿಂದ ಬಾಯಿಗೆ ತುರುಕಿ ಕೈಕಾಲು ಕಟ್ಟಿ ಹರಿತವಾದ ಆಯುಧದಿಂದ ಆಕೆಯ ಕತ್ತು ಕೊಯ್ದು ಕೊಲೆ ಮಾಡಿ ಓಡಿ ಹೋಗಿ ಬಾರ್ ಒಂದರಲ್ಲಿ ಕುಳಿತು ಪೆಗ್ ಮೇಲೇ ಪೆಗ್ ಏರಿಸುತ್ತಾ ಕುಳಿತ್ತಿದ್ದಾನೆ. ಆದರೆ ಸಂಜೆಯಾದರೂ ಕೂಡಾ ಶಾವಕ್ಕ ಕಾಣಿಸದೇ ಇದ್ದಾಗ ಅಕ್ಕಪಕ್ಕದ ಜನರು ಮನೆಯ ಬಾಗಿಲು ಸಂಧಿಯಲ್ಲಿ ಇಣುಕಿ ನೋಡಿದಾಗ ಶಾವಕ್ಕ ರಕ್ತದ ಮಡುವಿನಿಲ್ಲಿ ಶವವಾಗಿ ಬಿದ್ದಿದ್ದಳು. ತಕ್ಷಣ ಸ್ಥಳಿಯರು ಕಲಾದಗಿ ಪೊಲೀಸರಿಗೆ ಸುದ್ದಿ ತಿಳಿಸಿದ್ದರೆ ಕರ್ತವ್ಯದಲ್ಲಿದ್ದ ಕಲಾದಗಿ ಪಿಎಸ್ಐ ಪ್ರವೀಣರವರು ಘಟನಾ ಸ್ಥಳಕ್ಕೆ ತಮ್ಮ ಸಿಬ್ಬಂದಿ ಜನರೊಂದಿಗೆ ಬಂದು ಶವ ಹಾಗೂ ಘಟನಾ ಸ್ಥಳ ಪರಿಶೀಲಿಸಿದ ನಂತರ ದೂರು ದಾಖಲಿಸಿಕೊಂಡು ತಮ್ಮ ಹಿರಿಯ ಅಧಿಕಾರಿಗಳಾದ ಬಾಗಲಕೋಟ ಸಿಪಿಐ, ಬಾಗಲಕೋಟ ಡಿವೈಎಸ್ಪಿ ಗಜಾನಂದ ಸುತಾರ ಬಾಗಲಕೋಟ ಅಪರ ಜಿಲ್ಲಾವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ ಬಾಗಲಕೋಟ ಎಸ್ಪಿ ಸಿದ್ದಾರ್ಥ ಗೋಯಲ್ ರವರಿಗೆ ಸುದ್ದಿ ತಿಳಿಸಿದರು. ಸುದ್ದಿ ತಿಳಿದ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದು ಶವ ಜಾಗ ಪಂಚನಾಮೆ ನಡೆಸಿ ಘಟನೆಗೆ ಸಂಬಂಧಿಸಿದ ಆರೋಪಿಯನ್ನು ಕೂಡಲೇ ಬಂಧಿಸುವಂತೆ ಮಾರ್ಗದರ್ಶನ ನೀಡಿದರು ಈ ಪ್ರಕರಣಕ್ಕೆ ಸಂಬಂಧಿಸಿದ ವೆಂಕಟೇಶ ಗಿರಿಸಾಗರ ಗದ್ದನಕೇರಿ ಕ್ರಾಸ್‌ನ ಒಂದು ಬಾರ್‌ನಲ್ಲಿ ಮದ್ಯ ಸೇವಿಸುತ್ತ ಕುಳಿತಿದ್ದ ಖಚಿತ ಮಾಹಿತಿ ಮೇರೆಗೆ ಕಲಾದಗಿ ಪೊಲೀಸರು ವಶಕ್ಕೆ ಪಡೆದು ಠಾಣೆಗೆ ತಂದು ವಿಚಾರಿಸಲಾಗಿ ಹಣ ಕೊಡಲು ನಿರಾಕರಿಸದಕ್ಕೆ ತನ್ನ ತಾಯಿಯನ್ನು ತಾನೇ ಹತ್ಯೆಮಾಡಿರುವುದಾಗಿ ಒಪ್ಪಿಕೊಂಡಿದ್ದು ನಂತರ ಪ್ರಕರಣದ ಸದರಿ ಆರೋಪಿಯಾದ ವೆಂಕಟೇಶ, ಗಿರಿಸಾಗರ (26) ಈತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ☯



ಆರೋಪಿ ಗಿರಿಸಾಗರ



# ಸೌಜನ್ಯ ಫೈಲ್ಸ್



4

ನಿರೂಪಣೆ :

**ಮೋಹನ್ ಬೋಳಂಗಡಿ**

# ಪೊಲೀಸರ ಲಾಠಿ ಏಟಿಗೆ ದಿಕ್ಕುಪಾಲಾದ ಜನರು!

**ಬೆ**ಳ್ತಂಗಡಿ ಪೊಲೀಸ್ ಠಾಣೆಯ ಒಳಗೆ ಶಂಕಿತ ಆರೋಪಿ ಸಂತೋಷ್ ರಾವ್‌ನ ಪ್ರಾಥಮಿಕ ವಿಚಾರಣೆಯನ್ನು ಪೊಲೀಸರು ನಡೆಸುತ್ತಿದ್ದರು. ಧರ್ಮಸ್ಥಳದಲ್ಲಿ ಆತ ಪೊಲೀಸರ ಕೈವಶವಾದಾಗ ಆತನ ಬಳಿ ಚೀಲವೊಂದು ಇತ್ತು. ಅದರಲ್ಲಿ ಒಂದು ಜೊತೆ ಬಟ್ಟೆಬರೆಗಳಿತ್ತು. ಬೇರೆ ಯಾವುದೇ ಶಂಕಾಸ್ಪದ ವಸ್ತುಗಳು ಇರಲಿಲ್ಲ. ಆತ ಪೊಲೀಸ್ ವ್ಯಾನ್ ಕಂಡು ಓಟಕ್ಕಿತ್ತಿದ್ದರಿಂದ ಆತನ ಮೇಲೆ ಸಂಶಯ ಸೃಷ್ಟಿಯಾಗಿತ್ತು. ಆತ ಕಳ್ಳ ಆಗಿರಬಹುದು ಎಂಬ ಶಂಕೆಯಿಂದ ಸ್ಥಳೀಯರು ಹಿಡಿದು ವಿಚಾರಿಸಿದ್ದರು ಮತ್ತು ಪೊಲೀಸರ ವಶಕ್ಕೆ ಒಪ್ಪಿಸಿದ್ದರು. ಪೊಲೀಸರೂ



ಬೆಳ್ತಂಗಡಿ ಪೊಲೀಸ್ ಠಾಣೆ

ಸಹ ಆತನನ್ನು ಅದೇ ಸಂಶಯದಿಂದ ಪ್ರಶ್ನೆ ಮಾಡಿದ್ದರು. ಆತನ ಮೂಲ ವಿಳಾಸ ಪತ್ತೆ ಮಾಡುವುದು ತನಿಖೆಯ ದೃಷ್ಟಿಯಿಂದ ಪೊಲೀಸರ ಪಾಲಿಗೆ ಬಹುಮುಖ್ಯವಾದ ಅಂಶವಾಗಿತ್ತು. ಪೊಲೀಸರು ಆತನನ್ನು ಆ ದಿಕ್ಕಿನಲ್ಲಿ ವಿಚಾರಿಸುತ್ತಿದ್ದಾಗ ಬೆಳ್ತಂಗಡಿ ಪೊಲೀಸ್ ಠಾಣೆಯ ಹೊರಭಾಗದಲ್ಲಿ ಜನಜಂಗುಳಿಯೇ ನೆರೆದಿತ್ತು. ಪೊಲೀಸರು ಠಾಣೆಯ ಆವರಣದ ಗೇಟನ್ನು ಮುಚ್ಚಿದ್ದರು ಮತ್ತು ಸಾರ್ವಜನಿಕರಿಗೆ ಪ್ರವೇಶಕ್ಕೆ ಅವಕಾಶ ನೀಡಲಿಲ್ಲ. ಪರಿಣಾಮವಾಗಿ ಜನರ ಆಕ್ರೋಶ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಪರಿಸ್ಥಿತಿಯನ್ನು ತಹಬಂಧಿಗೆ ತರಲು ಪೊಲೀಸರಿಗೆ ಇದ್ದಂತಹ ಬಲದಲ್ಲಿ ಸಾಧ್ಯವಾಗುತ್ತಿರಲಿಲ್ಲ. ಪೊಲೀಸ್ ಠಾಣೆಯ ಒಳಗೆ ಐಜಿಪಿ ಅಲೋಕ್ ಕುಮಾರ್ ಸಹಿತ ಎಲ್ಲಾ ಹಿರಿಯ ಅಧಿ ಕಾರಿಗಳು ಇದ್ದರು. ಅದಕ್ಕಿಂತಲೂ ಮುಖ್ಯವಾಗಿ ಸೌಜನ್ಯ ಹತ್ಯೆಯ ಶಂಕಿತ ಆರೋಪಿ ಸಂತೋಷ್ ರಾವ್ ಇದ್ದ. ಪೊಲೀಸ್ ಠಾಣೆಯ ಮೇಲೆ ಅಲ್ಲಿ ಸೇರಿದ್ದ ಜನರು ಉದ್ರಿಕ್ತರಾಗಿ ಮುಗಿ ಬೀಳುವ ಸಾಧ್ಯತೆಗಳು ಇತ್ತು. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಪೊಲೀಸ್ ಬಲ ಇಲ್ಲದೇ ಇದ್ದುದರಿಂದ ಸಹಜವಾಗಿಯೇ ಪೊಲೀಸ್ ಅಧಿಕಾರಿಗಳು ಹೆಚ್ಚುವರಿ ಪೊಲೀಸ್ ಬಲವನ್ನು ತರಿಸಿಕೊಂಡರು. ಪೊಲೀಸ್ ಬಲ ಬರುವಷ್ಟರವರೆಗೆ ಠಾಣೆಯನ್ನು ಸುತ್ತುವರೆದಿದ್ದ ಸಾರ್ವಜನಿಕರನ್ನು ನಿಭಾಯಿಸಲು ಪೊಲೀಸ್ ಅಧಿ ಕಾರಿಗಳು ಸಾರ್ವಜನಿಕರ ಮಧ್ಯೆ ಇದ್ದಂತಹ ಕೆಲವು ಪ್ರಮುಖರನ್ನು ಪೊಲೀಸ್ ಠಾಣೆಯ ಒಳಗೆ ಕರೆಯಿಸಿಕೊಂಡು ಮಾತುಕತೆ ನಡೆಸಿದರು.

ಪೊಲೀಸ್ ಠಾಣೆಯ ಒಳಗಿದ್ದ ಸಂತೋಷ್‌ರಾವ್‌ನನ್ನು ಪೊಲೀಸರು ಕೂಲಂಕಷವಾಗಿ ದೈಹಿಕ ಪರಿಶೀಲನೆ ನಡೆಸಿದಾಗ ಆತನ ಮೈಮೇಲೆ ಒಂದಷ್ಟು ಗಾಯಗಳ ಗುರುತು ಇತ್ತು. ಧರ್ಮಸ್ಥಳದಲ್ಲಿ ಆತನನ್ನು ಸ್ಥಳೀಯರು ಹಿಡಿದುಕೊಟ್ಟ ಸಂದರ್ಭದಲ್ಲಿ ಆತನ ಮೇಲೆ ಸಾರ್ವಜನಿಕರು ಹಲ್ಲೆ ನಡೆಸಿದ್ದರು. ಈ ಸಂದರ್ಭದಲ್ಲಿ ಆದ ಗಾಯಗಳು ಇತ್ತು. ಅಲ್ಲದೇ ಹಳೆಯ ಕೆಲವು ಗಾಯಗಳು ಇತ್ತು. ಆತನ ಮೊಣಗಂಟಿನ ಮೇಲೆ ಮತ್ತು ಬೆನ್ನಿನ ಹಿಂಭಾಗದಲ್ಲಿ ತರಚು ಗಾಯಗಳು ಇತ್ತು. ಆ ಗಾಯಗಳು ಅತ್ಯಾಚಾರ ನಡೆದ ಸಂದರ್ಭದಲ್ಲಿ ಆಗಿರಬಹುದು ಎಂಬ ಸಂಶಯ ಪೊಲೀಸರದ್ದಾಗಿತ್ತು. ಆತನ ಮೈಕಟ್ಟನ್ನು ಗಮನಿಸಿದಾಗ ಆತ ದೈಹಿಕವಾಗಿ ಸದೃಢನಾಗಿದ್ದ. ನೀಳಕಾಯನಾಗಿದ್ದ. ಪೊಲೀಸರ ಸಾಮಾನ್ಯ ವಿಚಾರಣೆಗೆ ಬಗ್ಗುವ ಆಸಾಮಿ ಆಗಿರಲಿಲ್ಲ. ಅದಕ್ಕಾಗಿ ಆತನನ್ನು ತೀವ್ರವಾದ ವಿಚಾರಣೆ ನಡೆಸಬೇಕಾದ ಅನಿವಾರ್ಯತೆ ಪೊಲೀಸರಿಗೆ ಉಂಟಾಗಿತ್ತು. ಸಮಸ್ಯೆ ಏನೆಂದರೆ ಆ ಸಂದರ್ಭದಲ್ಲಿ ಆತನನ್ನು ವಿಚಾರಣೆಗೆ ಗುರಿಪಡಿಸುವಂತಿರಲಿಲ್ಲ. ಕಾರಣ ಅಂದರೆ ಠಾಣೆಯ ಹೊರಗೆ ಸಾವಿರಾರು ಜನರು ಜಮಾಯಿಸಿದ್ದರು ಮತ್ತು ಶಂಕಿತ ಆರೋಪಿಯನ್ನು ತಮ್ಮ ವಶಕ್ಕೆ ಕೊಡುವಂತೆ ಆಗ್ರಹಿಸುತ್ತಿದ್ದರು. ಇಂತಹ ಸಂದರ್ಭದಲ್ಲೇ ಪೊಲೀಸರು ಸ್ಥಳೀಯ ಹಿಂದೂಪರ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದ ಭಾಸ್ಕರ್ ಧರ್ಮಸ್ಥಳ ಮತ್ತು ಇತರ ಇಬ್ಬರನ್ನು ಠಾಣೆಯ ಒಳಗೆ ಕರೆಯಿಸಿಕೊಂಡರು. ಅವರಲ್ಲಿ ಪರಿಸ್ಥಿತಿಯನ್ನು ವಿವರಿಸಿದರು. ತಮಗೆ ಇರುವ ಅನುಭವದ ಆಧಾರದಲ್ಲಿ ಸೌಜನ್ಯಳನ್ನು ತಮ್ಮ ವಶದಲ್ಲಿರುವ ಆರೋಪಿಯೇ ಅತ್ಯಾಚಾರಗೈದು ಕೊಲೆಗೈದಿರುವ ಸಂಶಯ ಇದೆ. ಆತನನ್ನು ಅಮೂಲಾಗ್ರ ತನಿಖೆಗೆ ಒಳಪಡಿಸುವ ಅಗತ್ಯ ಇರುವುದರಿಂದ ಠಾಣೆಯ ಹೊರಭಾಗದಲ್ಲಿ ಸೇರಿರುವಂತಹ ಜನರನ್ನು ಚದುರಿಸುವ ಕಾರ್ಯ ಮಾಡಬೇಕು ಮತ್ತು ಉದ್ರಿಕ್ತರಾಗಿರುವಂತಹ ಜನರನ್ನು ಸಮಾಧಾನ ಪಡಿಸಿ ಪೊಲೀಸ್ ತನಿಖೆಗೆ ಸಹಕರಿಸುವಂತೆ ಕೋರಬೇಕು ಎಂಬ ಭಿನ್ನಹವನ್ನು ಅವರ ಮುಂದಿಟ್ಟರು ಅಲ್ಲದೇ ಶಂಕಿತ ಆರೋಪಿ ಸಂತೋಷ್ ರಾವ್‌ನನ್ನು ಅವರಿಗೆ ತೋರಿಸಿದರು.


ಅಭಿಷೇಕ್ ಗೋಯಲ್

ಭಾಸ್ಕರ್ ಧರ್ಮಸ್ಥಳ ಮತ್ತು ಇತರ ಇನ್ನಿಬ್ಬರು ಠಾಣೆಯಿಂದ ಹೊರಬಂದು ಸ್ಥಳದಲ್ಲಿ ಸೇರಿದ್ದಂತಹ ಜನರನ್ನು ಸಮಾಧಾನಪಡಿಸುವ ಕೆಲಸ ಮಾಡಿದರು. ಆದರೂ ಜನರ ಆಕ್ರೋಶ ತಣ್ಣಗಾಗಲಿಲ್ಲ. ತಮಗೆ ಆರೋಪಿಯನ್ನು ತೋರಿಸಬೇಕು ಎಂದು ಅವರು ಪಟ್ಟು ಹಿಡಿದರು. ಆ ಸಂದರ್ಭದಲ್ಲಿ ಠಾಣೆಯ ಒಳಗಿದ್ದ ಹಿರಿಯ ಅಧಿ ಕಾರಿಗಳು ಆರೋಪಿ ಸಂತೋಷ್ ರಾವ್‌ನನ್ನು ಸಾರ್ವಜನಿಕರ ಆಗ್ರಹದ ಮಧ್ಯೆ ಠಾಣೆಯ ಮಹಡಿ ಮೇಲಿನ ಪ್ಯಾಸೇಜ್‌ಗೆ ಕರೆದುಕೊಂಡು ಬಂದು ತೋರಿಸಿಬಿಟ್ಟರು. ಆ ಸಂದರ್ಭದಲ್ಲಿ ಪೊಲೀಸರು ಮಾಡಿದ್ದ ಎಡವಟ್ಟು ಅದಾಗಿತ್ತು. ಆದರೂ ಪೊಲೀಸರು ತನಿಖೆಯ ದೃಷ್ಟಿಯಿಂದ ಸರಿಯಲ್ಲದೇ ಇದ್ದರೂ ಸಹ ಸೇರಿದ್ದ ಸಾವಿರಾರು ಮಂದಿಯನ್ನು ಸಮಾಧಾನಪಡಿಸಲು ಈ ನಿರ್ಧಾರ ಕೈಗೊಳ್ಳಬೇಕಾಯಿತು. ಆರೋಪಿಯನ್ನು ನೋಡಿದ ನಂತರವೂ ಠಾಣೆಯ ಹೊರಭಾಗದಲ್ಲಿ ಸೇರಿದ್ದಂತಹ ಜನರು ಕದಲಲಿಲ್ಲ. ಆ ವೇಳೆಗಾಗಲೇ ಮಂಗಳೂರಿನಿಂದ ಹೆಚ್ಚುವರಿ ಪೊಲೀಸ್ ಬಲ ಬಂದಿತ್ತು. ಉಪ್ಪಿನಂಗಡಿ ಸರ್ಕಲ್ ಇನ್ಸ್ ಪೆಕ್ಟರ್ ಸುದರ್ಶನ್ ಮತ್ತು ಪೊಲೀಸರ ತಂಡ ಜನರನ್ನು ಚದುರಿಸಲು ಲಾಠಿ ಬೀಸತೊಡಗಿತ್ತು. ಜನರು ದಿಕ್ಕಾಪಾಲಾಗಿ ಓಡತೊಡಗಿದ್ದರು. ಈ ಸಂದರ್ಭದಲ್ಲಿ ಧರ್ಮಸ್ಥಳ ಪರಿಸರದವರೇ ಆಗಿದ್ದ ಮಾಜಿ ತಾಲೂಕು ಪಂಚಾಯತ್ ಸದಸ್ಯರೂ ಆಗಿದ್ದ ದಲಿತ ವರ್ಗಕ್ಕೆ ಸೇರಿದ್ದ ಬಾಬು ಎಂಬವರು ಜನರ ತಳ್ಳಾಟ, ನೂಕಾಟದಿಂದ ಕೆಳಗೆ ಬಿದ್ದರು ಮತ್ತು ಅವರ ಕಾಲು ಮುರಿದು ಹೋಯಿತು. ಅವರನ್ನು ಅಲ್ಲಿಂದ ಎತ್ತಿಕೊಂಡು ಸ್ಥಳೀಯ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಅವರಿಗೆ ಮೂಳೆ ಮುರಿತ ಉಂಟಾಗಿತ್ತು. ವೈದ್ಯರ ಅಭಿಪ್ರಾಯದಂತೆ ಶಸ್ತ್ರಚಿಕಿತ್ಸೆ ನಡೆಸಬೇಕಾಗಿತ್ತು. ಈ ಮಾಹಿತಿ ಪೊಲೀಸ್ ಠಾಣೆಯನ್ನು ಮುಟ್ಟಿತು. ದಲಿತ ಸಮುದಾಯ ಜನಪ್ರತಿನಿಧಿಯೊಬ್ಬರು ಪೊಲೀಸ್ ಲಾಠಿಚಾರ್ಜ್‌ನಿಂದ ಗಾಯ ಗೊಂಡು ಕಾಲು ಮುರಿತಕ್ಕೊಳಗಾಗಿದ್ದಾರೆಂಬ ವಿಚಾರ ಬೆಳಕಿಗೆ ಬಂದರೆ ಪೊಲೀಸರಿಗೆ ತೊಂದರೆಯಾದೀತು ಎಂಬ ಭಾವಿಸಿದ ಸ್ಥಳೀಯ ಪೊಲೀಸ್ ಅಧಿಕಾರಿಗಳು ಬಾಬು ಅವರ ನಿಕಟವರ್ತಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರು ಮತ್ತು ಯಾರೂ ಅವರಿಗೆ ಸಮಾಧಾನ ಹೇಳಬಹುದು ಎಂಬ ನಿಟ್ಟಿನಲ್ಲಿ ಹಲವರನ್ನು ವಿಚಾರಿಸಿದರು. ಈ ಸಂದರ್ಭದಲ್ಲಿ ಪೊಲೀಸರ ಗಮನಕ್ಕೆ ಬಂದ ಅಂಶ ಎಂದರೆ ಗಾಯಗೊಂಡು ಆಸ್ಪತೆಗೆ ದಾಖಲಾಗಿರುವ ಮಾಜಿ ತಾ.ಪಂ. ಸದಸ್ಯ ಬಾಬು ಉಜಿರೆಯ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಸ್ಥಾಪಕಾಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಂತಹ ವ್ಯಕ್ತಿ ಎಂಬ ವಿಚಾರ. ತಿಮರೋಡಿಯವರು ಹೇಳಿದರೆ ಬಾಬು ಅವರು ಕೇಳಬಹುದು ಎಂಬ ವಿಶ್ವಾಸದಲ್ಲಿದ್ದ ಪೊಲೀಸರು ತಿಮರೋಡಿಯವರನ್ನು ಸಂಪರ್ಕಿಸಿದರು. ಈ ಸಂದರ್ಭದಲ್ಲಿ ಪೊಲೀಸರ ಕೋರಿಕೆಯನ್ನು ಮನ್ನಿಸಿದ ತಿಮರೋಡಿಯವರು ಸ್ಥಳಕ್ಕೆ ಬಂದರಲ್ಲದೇ ಪೊಲೀಸರೊಂದಿಗೆ ಮಾತನಾಡಿ ಬಾಬು ಅವರನ್ನು ಸರಕಾರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿ ಬೇರೆ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಬೆಳ್ತಂಗಡಿ ಠಾಣೆಯ ಹೊರ ಆವರಣದಲ್ಲಿ ಜಮಾಯಿಸಿದ್ದ ಬಹುತೇಕ ಸಾರ್ವಜನಿಕರು ಆ ಕಾಲಘಟ್ಟದಲ್ಲಿ ಮಹೇಶ್ ಶೆಟ್ಟಿ ತಿಮರೋಡಿಯವರ ಬೆಂಬಲಿಗರೇ ಆಗಿದ್ದರು. ಆ ಸಂದರ್ಭದಲ್ಲಿ ಬೆಳ್ತಂಗಡಿ ಪೊಲೀಸರು ಎರಡು


ಪೊಲೀಸ್ ಕಸ್ಟಡಿಯಲ್ಲಿ ಸಂತೋಷ್ ರಾವ್

ಪ್ರಕರಣಗಳನ್ನು ದಾಖಲಿಸಿಕೊಳ್ಳಲೇಬೇಕಾಯಿತು. ಯಾಕೆಂದರೆ ಪೊಲೀಸರು ಲಾಠಿಚಾರ್ಜ್ ಮಾಡಿದ್ದರು. ಕೆಲವರು ಅಲ್ಪಸ್ವಲ್ಪ ಗಾಯಗೊಂಡಿದ್ದರು. ಈ ಸಂದರ್ಭದಲ್ಲಿ ಎಲ್ಲರನ್ನೂ ನಿಯಂತ್ರಿಸುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿಯನ್ನು ಎಸ್ಪಿ ಅಭಿಷೇಕ್ ಗೋಯಲ್ ಸಹಿತ ಹಿರಿಯ ಅಧಿಕಾರಿಗಳು ಗಮನಿಸಿದ್ದರು ಮತ್ತು ಸ್ಥಳೀಯ ಪೊಲೀಸ್ ಅಧಿಕಾರಿಗಳೊಂದಿಗೆ ವಿಚಾರಿಸಿದ್ದರು. ಈ ಸಂದರ್ಭದಲ್ಲಿ ತಿಮರೋಡಿ ಬೆಳ್ತಂಗಡಿ ಠಾಣೆಯ ರೌಡಿಶೀಟರ್ ಎಂಬ ಅಂಶ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಈ ಎಲ್ಲಾ ಘಟನಾವಳಿಗಳಿಗೆ ಅವರು ಕಾರಣರಾಗಿರಬಹುದು ಎಂಬ ಸಂಶಯದಿಂದ ಅವರನ್ನು ಕರೆದುಕೊಂಡು ಬರುವಂತೆ ಸೂಚನೆ ನೀಡಿದ್ದರು. ಈ ಸಂದರ್ಭದಲ್ಲಿ ಬೆಳ್ತಂಗಡಿ ಠಾಣೆಯ ಅಧಿಕಾರಿಯೊಬ್ಬರು ಹಿರಿಯ ಅಧಿ ಕಾರಿಗಳ ಸೂಚನೆಯನ್ನು ತಿಮರೋಡಿ ಅವರಿಗೆ ದೂರವಾಣಿ ಮೂಲಕ ತಿಳಿಸಿ ಸದ್ಯಕ್ಕೆ ತಲೆ ತಪ್ಪಿಸಿಕೊಳ್ಳುವಂತೆ ಸೂಚನೆ ನೀಡಿದ್ದರು. ಅದರಂತೆ ತಿಮರೋಡಿ ಮನೆಯಿಂದ ಪರಾರಿಯಾಗಿದ್ದರು. ಅವರು ಮತ್ತೇ ಪ್ರತ್ಯಕ್ಷವಾದದ್ದು ಒಂದು ತಿಂಗಳ ನಂತರ. ಅವರಿಗೆ ಬೆಳ್ತಂಗಡಿ ಠಾಣೆಯಲ್ಲಿ ದಾಖಲಾಗಿದ್ದ ಎರಡೂ ಪ್ರಕರಣಗಳಲ್ಲಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ ನಿರೀಕ್ಷಣಾ ಜಾಮೀನು ನೀಡಿತ್ತು.


ಮಹೇಶ್ ತಿಮರೋಡಿ

(ಮುಂದುವರಿಯುವುದು...)

# ಬಾಗಲಕೋಟೆ ಖಾಸಗಿ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿ ಅನುಮಾನಾಸ್ಪದ ಸಾವು!



ಮೃತ ಸೀಮಾ

ಆಕೆ ಇನ್ನೂ ಓದಿ ಉನ್ನತ ಸ್ಥಾನಕ್ಕೆ ಹೋಗಬೇಕೆಂಬ ಹಲವಾರು ಆಸೆಗಳ ಹೊತ್ತುಕೊಂಡು ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿನಿ ತಂದೆ ತಾಯಿಯ ಅಚ್ಚುಮೆಚ್ಚಿನ ಮಗಳು ಪ್ರೌಢ ಶಿಕ್ಷಣವನ್ನು ಗ್ರಾಮದಲ್ಲಿ ಮುಗಿಸಿ ಮುಂದಿನ ಶಿಕ್ಷಣಕ್ಕೆ ಅಂತ ತಂದೆ-ತಾಯಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅಂತ ಸಿಟಿಯಲ್ಲಿ ಉನ್ನತ ಕಾಲೇಜಿನಲ್ಲಿ ಸೇರಿಸಿದ್ದರು. ಆಕೆ ಮುಂದೆ ಓದಿ ಬದುಕಿ ಬಾಳಬೇಕಿದ್ದ ವಿದ್ಯಾರ್ಥಿನಿ ಆದರೆ ಒಂದು ದಿನ ತಮ್ಮ ಗ್ರಾಮದಲ್ಲಿ ಜಾತ್ರೆ ಮುಗಿಸಿಕೊಂಡು ಮರಳಿ ಸಿಟಿಯಲ್ಲಿರುವ ಪಿಜಿ ಒಂದು ತನ್ನ ಕೊಠಡಿಯಲ್ಲಿ ದುರಂತ ಅಂತ್ಯ ಕಂಡಿದ್ದಾಳೆ. ಆದರೆ ಅದೇ ನಾಯಿತೋ ಗೊತ್ತಿಲ್ಲ ನೇತಾಡುತ್ತಿದ್ದ ಶವವಾಗಿ ಕಂಡು ಬಂದಿದ್ದಾಳೆ. ಇನ್ನೂ ಈ ಸಾವಿನ ಬಗ್ಗೆ ಮೃತ ವಿದ್ಯಾರ್ಥಿನಿ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದು ತಮ್ಮ ಮಗಳ ಸಾವಿನಲ್ಲಿ ಅನುಮಾನ ಕಂಡು ಬಂದಿರುತ್ತದೆ. ಆ ನಿಟ್ಟನಲ್ಲಿ ಸೂಕ್ತ ತನಿಖೆಯಾಗಬೇಕು ಎಂದು ಆಗ್ರಹಿಸಿದ್ದಾರೆ ಈ ಘಟನೆ ನಡೆದಿರುವದು ಜಿಲ್ಲೆ ಬಾಗಲಕೋಟ ತಾಲ್ಲೂಕಿನ ಬಾಗಲಕೋಟ ನಗರದ ಪಿ.ಜಿ ಒಂದರಲ್ಲಿ ನಡೆದರ ಬಗ್ಗೆ ಬಾಗಲಕೋಟ ನಗರ ಪೊಲೀಸ್ ಠಾಣೆಯಿಂದ ವರದಿಯಾಗಿದೆ

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಸುನಗ ತಾಂಡಾದ ನಿವಾಸಿ ಸೀಮಾ ರಾಠೋಡ (17) ತಂದೆ-ತಾಯಿ ಅಚ್ಚುಮೆಚ್ಚಿನ ಮಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ತನ್ನ ಗ್ರಾಮದಲ್ಲಿ ಮುಗಿಸಿಕೊಂಡು ಸುನಗ ಗ್ರಾಮದಿಂದ ಸುಮಾರು 20-25 ಕಿಲೋಮೀಟರ್ ಅಂತರದಲ್ಲಿರುವ ಜಿಲ್ಲಾ ಕೇಂದ್ರವಾದ ಬಾಗಲಕೋಟೆಯ ವಾಗ್ದೇವಿ

**ಬಾಗಲಕೋಟೆ**
✍ ಮಂಜುನಾಥ ಕರೋಳಿ

ಸೈನ್ಸ್ ಕಾಲೇಜಿನಲ್ಲಿ ಪ್ರಥಮ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು ತನ್ನ ಗ್ರಾಮದಿಂದ ಸುಮಾರು ಕಿಲೋಮಿಟರ ಅಂತರದಲ್ಲಿದ್ದರೂ ತಾನೂ ದಿನನಿತ್ಯ ಕಾಲೇಜಿಗೆ ಮರಳಿ ಗ್ರಾಮಕ್ಕೆ ಹೋಗಿ ಬರುವುದು ಕಷ್ಟವಾಗಬಹುದು ಅದು ತನ್ನ ವಿದ್ಯಾಭ್ಯಾಸಕ್ಕೂ ತೊಂದರೆ ಯಾಗಬಹುದು ಅಂತ ಆಕೆಯ ತಂದೆ-ತಾಯಿ ಬಾಗಲಕೋಟೆ ನಗರದಲ್ಲಿ ಒಂದು ಖಾಸಗಿ ಪಿ.ಜಿಯಲ್ಲಿ ಸೇರಿಸಿದ್ದರು ಸುಮಾರು ಒಂದು ವರ್ಷದಿಂದ ಉತ್ತಮವಾಗಿ ವಿದ್ಯಾಬ್ಯಾಸ ಮಾಡುತ್ತ ಕಾಲೇಜಿನ ರಜಾ ದಿನಗಳಲ್ಲಿ ಊರಿಗೆ ಬಂದು ಹೋಗುವದು ಮಾಡುತ್ತಿದ್ದಳು ಈಗ ಸುಮಾರು ಒಂದು ವಾರದ ಹಿಂದೆ ತಮ್ಮ ಸುನಗ ಗ್ರಾಮದಲ್ಲಿ ಗ್ರಾಮದೇವರ ಜಾತ್ರೆ ಇದ್ದುದ್ದರಿಂದ ಸೀಮಾ ತನ್ನ ತಂದೆ-ತಾಯಿಗೆ ಕರೆಮಾಡಿ ಜಾತ್ರೆಗೆ ಬರುವುದಾಗಿ ತಿಳಿಸಿ ಗ್ರಾಮಕ್ಕೆ ಬಂದು ಸುಮಾರು ಮೂರು ದಿನಗಳ ಕಾಲ ಗ್ರಾಮದಲ್ಲಿ ಜಾತ್ರೆ ಮುಗಿಸಿಕೊಂಡು ಮರಳಿ ಬಾಗಲಕೋಟೆಗೆ ತೆರಳಿದ್ದಾಳೆ

**ಜಾತ್ರೆ ಮುಗಿಸಿಕೊಂಡು ಬಂದಾಕೆ ಸಾವಿನ ಮನೆಗೆ?**

ಸೀಮಾ ರಾಠೊಡ ಜಾತ್ರೆ ಮುಗಿಸಿಕೊಂಡು ತನ್ನ ಚಿಕ್ಕಪ್ಪನೊಂದಿಗೆ ಹಾಸ್ಟೆಲ್‌ಗೆ ಬಂದಿದ್ದಾಳೆ ಬಿಟ್ಟು ಮರಳಿಗ್ರಾಮಕ್ಕೆ ತೆರಳಿದ್ದಾರೆ. ಬಳಿಕ ಕೆಲ ಕಾಲ ಸೀಮಾ ಮತ್ತು ಹಾಸ್ಟೆಲ್ ವಾರ್ಡನ್ ಜೊತೆ ಸುಮಾರು 4 ಗಂಟೆ ಸುಮಾರಿಗೆ ಮಾತಾಡಿಸಿ ಕುಳಿತ್ತಿದ್ದಾರೆ. ಆದರೆ ನಂತರ ಹಾಸ್ಟೆಲ್ ವಾರ್ಡನ್ ತನ್ನ ಮಗು ಎತ್ತಿಕೊಂಡು ಹೋದ ಮೇಲೆ ಸೀಮಾ ಸಹ ತನ್ನ ಪಿಜಿ ರೂಮ್‌ಗೆ ಹೊದವಳು ನಂತರ ಇತರೆ ವಿದ್ಯಾರ್ಥಿನಿಯರು ಹಾಸ್ಟೆಲ್ ರೂಮ್‌ಗೆ ಹೋದಾಗ ಸೀಮಾ ನೇಣು ಬಿಗಿದು ಕೊಂಡಿರುವ ಕಂಡುಬಂದಿದೆ. ಇದರಿಂದ ಭಯಬಿದ್ದ ವಿದ್ಯಾರ್ಥಿಗಳು ಹೊರ ಬಂದು ಹಾಸ್ಟೆಲ್ ಸಿಬ್ಬಂದಿಗಳಿಗೆ ವಿಷಯ ತಿಳಿಸಿದ್ದಾರೆ. ಸಿಬ್ಬಂದಿಗಳು ತಕ್ಷಣ ರೂಮ್‌ಗೆ ಬಂದು ನೋಡಲಾಗಿ ಸೀಮಾಳನ್ನು ತಕ್ಷಣ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲು ಮುಂದಾದರೂ ಪ್ರಯೋಜನವಾಗಿಲ್ಲ ಸೀಮಾಳ ಪ್ರಾಣ ಪಕ್ಷಿಅಷ್ಟರಲ್ಲಿ ಹಾರಿಹೋಗಿತ್ತು. ನಂತರ ಸೀಮಾಳ ಕುಟುಂಬಸ್ಥರು ಆಸ್ಪತ್ರೆಗೆ ಬಂದು ನೋಡಲಾಗಿ ತಮ್ಮ ಮಗಳ ಶವ ಕಂಡು ಆಕ್ರಂದನ ಮುಗಿಲು ಮುಟ್ಟಿತ್ತು. ನಂತರದಲ್ಲಿ ನಮಗೆ ನಮ್ಮ ಮಗಳ ಸಾವಿನಲ್ಲಿ ಸಂಶಯವಿದ್ದು ಇದರ ಬಗ್ಗೆ ಸಂಪೂರ್ಣ ತನಿಖೆಯಾಗಬೇಕೆಂದು ಆಗ್ರಹ ಮಾಡಿದ್ದಾರೆ. ಈ ಪ್ರಕಾರವಾಗಿ ಸೀಮಾ ತಾಯಿ ಬಾಗಲಕೋಟೆ ನವನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಪ್ರಕರಣ ಕುರಿತು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು,



ಎಸ್ಪಿ ಸಿದ್ಧಾರ್ಥ ಗೋಯಲ್

ಪ್ರಕರಣ ಕುರಿತು ಪ್ರಥಮಿಕ ಹಂತದ ತನಿಖೆ ನಡೆಯುತ್ತಿದ್ದು, ವಿದ್ಯಾರ್ಥಿನಿ ನೇಣು ಹಾಕಿಕೊಂಡಿದ್ದಾಳೆಯೇ? ಅಥವಾ ಸೀಮಾಗೆ ಯಾರಾದಾದರೂ ಒತ್ತಡವಿತ್ತಾ? ಹಾಗೂ ಬೇರೆ ಯಾವುದಾದರೂ ಕಾರಣವೇನಾದ್ರೂ ಇತ್ತಾ? ಎನ್ನುವದನನ್ನು ಪತ್ತೆ ಮಾಡುವದಾಗಿ ಪೊಲೀಸರು ತಿಳಿಸಿದ್ದಾರೆ ಬಾಗಲಕೋಟ ಜಿಲ್ಲಾ ಶಿಕ್ಷಣಾದಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೇ ಅಧಕಾರಿಗಳು ಸಹ ಸೀಮಾ ವ್ಯಾಸಂಗ ಮಾಡುತ್ತಿದ ಕಾಲೇಜೀಗೆ ಹಾಗೂ ಹಾಸ್ಟೆಲ್ಗೆ ಭೇಟಿ ನೀಡಿ ವಿಚಾರಣೆ ನಡಿಸಿದ್ದಾರೆ

**ಸೀಮಾ ಸಾವಿನ ಬಗ್ಗೆ ಅನುಮಾನವೇಕೆ ?**

ಸೀಮಾ ಅಂದು ಜಾತ್ರೆ ಮುಗಿಸಿಕೊಂಡು ಹಾಸ್ಟೆಲ್‌ಗೆ ಮರಳಿ ಸ್ವಲ್ಪಕಾಲ ಮಹಿಳಾ ವಾರ್ಡನ್‌ನೊಂದಿಗೆ ಮಾತನಾಡಿದ್ದು ನಂತರ ರೂಮಗೆ ತೆರಳಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಕಂಡು ಬಂದಿದ್ದಾಳೆ ಹಾಸ್ಟೆಲ್‌ನಲ್ಲಿ ಸೀಮಂಳ ಆತ್ಮಹತ್ಯೆ ಮಾಡಿಕೊಂಡಾಗ ಹಾಸ್ಟೆಲ್ ಸಿಬ್ಬಂದಿ ಸೀಮಾ ತಾಯಿಗೆ ದೂರವಾಣಿ ಕರೆಮಾಡಿ ನಿಮ್ಮ ಮಗಳಿಗೆ ಫಿಡ್ಸ್ ಬಂದಿದೆ ಎಂದು ತಿಳಿಸಿದ್ದಾರಂತೆ ಆದರೆ ಸೀಮಾನನೇಣು ಹಾಕಿದ ಸ್ಥಿತಿಯಲ್ಲಿ ಕಂಡು ಬಂದಿದೆ ಇದು ಸೀಮಾ ಕುಟುಂಬಸ್ಥರಿಗೆ ಅನುಮಾನ ಹುಟ್ಟಲು ಕಾರಣವಾಗಿದೆ ಸದ್ಯ ಈ ಪ್ರಕರಣ ಬಾಗಲಕೋಟ ನವನಗರ ಠಾಣೆಯಲ್ಲಿ ದಾಖಲಾಗಿದ್ದು ಪೊಲೀಸರು ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ ಸಂಪೂರ್ಣ ತನಿಖೆಯ ನಂತರ ಸತ್ಯಾನುಸತ್ಯತೆ ತಿಳಿದು ಬರಲಿದೆ. ☯

---

5 ☞ ರಿಗೆ ಅನುಮಾನ ಬಾರದಂತೆ ಕೊಲೆ ಮಾಡಲು ನಾಲ್ಕು ಮಂದಿ ಸಂಚು ರೂಪಿಸಿದ್ದರು. ಅದು ಏನೆಂದರೆ ಎಂದಿನಂತೆ ಸಂಗೀತಳನ್ನು ಬೈಕ್‌ನಲ್ಲಿ ಕರೆದುಕೊಂಡು ರಾಜೇಂದ್ರ ಹೋಗುವ ವೇಳೆ ಅವರನ್ನು ಅಡ್ಡಗಟ್ಟಿ ದರೋಡೆ ಮಾಡುವ ನಾಟಕವಾಡಿ ಸಂಗೀತಳ ಕತ್ತಿನಿಂದ ಸರವನ್ನು ಕಿತ್ತುಕೊಳ್ಳುವುದು ಈ ವೇಳೆ ಅಡ್ಡ ಬರುವ ರಾಜೇಂದ್ರನನ್ನು ಹತ್ಯೆಗೈದು ಪರಾರಿಯಾಗುವುದು ಅವರ ಉದ್ದೇಶವಾಗಿತ್ತು. ಹೀಗೆ ಮಾಡುವುದರಿಂದ ಯಾರೋ ದರೋಡೆಕೋರರು ಕೃತ್ಯ ಎಸಗಿರಬಹುದೆಂದುಕೊಳ್ಳುತ್ತಾರೆ. ತಾವು ಸಿಕ್ಕಿಬೀಳದೆ ತಪ್ಪಿಸಿಕೊಳ್ಳಬಹುದು ಎಂಬುದು ಅವರ ಆಲೋಚನೆಯಾಗಿತ್ತು.



ಸಂಗೀತಾ - ರಾಜೇಂದ್ರ

ಇತ್ತ ರಾಜೇಂದ್ರನಿಗೆ ಮನೆಯಲ್ಲಿಯೇ ಹಂತಕಿ ತನ್ನ ಬಲಿಗಾಗಿ ಕಾಯುತ್ತಿದ್ದಾಳೆ ಎಂಬ ಚಿಕ್ಕ ಅನುಮಾನವೂ ಬಂದಿರಲಿಲ್ಲ. ಆದರೆ ಹೆಂಡತಿ ಸಂಗೀತಾ ಮಾತ್ರ ಗಂಡನ ಅಂತಿಮ ದಿನಗಳನ್ನು ಎಣಿಸುತ್ತಾ ಕಾಲ ಕಳೆಯುತ್ತಿದ್ದಳು. ಕೊನೆಗೂ ಆ ದಿನ ಬಂದೇ ಬಿಟ್ಟಿತ್ತು. ಸಂಗೀತಾಳ ತಮ್ಮ ಸಂಜಯ್ ಗೆಳೆಯರೊಂದಿಗೆ ಸೇರಿ ಬಾವ ರಾಜೇಂದ್ರನನ್ನು ಮುಗಿಸಲು ತಯಾರಿ ನಡೆಸಿದ್ದನು. ಅದಕ್ಕಾಗಿ ಬಾಡಿಗೆ ಕಾರನ್ನು ಪಡೆದುಕೊಂಡಿದ್ದನು. ಎಲ್ಲವೂ ಅಂದುಕೊಂಡಂತೆ ಆಗಿದ್ದರಿಂದ ಅಕ್ಟೋಬರ್ 25ರಂದು ಮುಹೂರ್ತ ಫಿಕ್ಸ್ ಮಾಡಲಾಯಿತು.

ಅವತ್ತು ಡ್ಯೂಟಿ ಮುಗಿಸಿದ ಸಂಗೀತಾಳನ್ನು ಮನೆಗೆ ಕರೆದುಕೊಂಡು ಹೋಗಲು ಎಂದಿನಂತೆ ಗಂಡ ರಾಜೇಂದ್ರ ಬಂದಿದ್ದಾನೆ. ಅವಳನ್ನು ತನ್ನ ಸ್ಕೂಟರ್‌ನಲ್ಲಿ ಕೂರಿಸಿಕೊಂಡು ಮನೆಯತ್ತ ಹೊರಟಿದ್ದಾನೆ. ಆಗ ರಾತ್ರಿ 7.30ರ ಸಮಯವಾಗಿದ್ದು, ನಂಜನಗೂಡು ಪಟ್ಟಣದ ಹುಂಡುವಿನಹಳ್ಳಿ ಬಡಾವಣೆಯ ಮುಡಾ ಲೇಔಟ್ ಬಳಿ ಹೋಗುತ್ತಿದ್ದಾಗಲೇ ಮೊದಲೇ ಹೊಂಚು ಹಾಕಿ ಕೂತಿದ್ದ ಸಂಜಯ್, ವಿಘ್ನೇಶ್ ಮತ್ತು ಅಪ್ರಾಪ್ತ ಬಾಲಕ ಬಿಳಿಕಾರಿನಲ್ಲಿ ಅವರನ್ನು ಹಿಂಬಾಲಿಸಿ ಬೈಕ್‌ನ್ನು ಅಡ್ಡಗಟ್ಟಿದ್ದಾರೆ. ರಾಜೇಂದ್ರನಿಗೆ ಏನಾಗುತ್ತಿದೆ ಎಂಬುದು ಗೊತ್ತೇ ಆಗಿಲ್ಲ. ಅಷ್ಟರಲ್ಲಿಯೇ ಕಾರಿನಿಂದ ಇಳಿದು ಹೋಗಿ ಒಬ್ಬ ಸಂಗೀತಳ ಬಳಿ ಸರ ಕೊಡುವಂತೆ ಅವಾಜ್ ಹಾಕಿದರೆ ಮತ್ತಿಬ್ಬರು ನೇರವಾಗಿ ಹೋಗಿ ರಾಜೇಂದ್ರನ ಬಳಿ ಜಗಳ ತೆಗೆದು ಆತನಿಗೆ ಡ್ರ್ಯಾಗನ್‌ನಿಂದ ಚುಚ್ಚಿದ್ದಾರೆ. ಆತನಿಗೆ ಮತ್ತೆ ಚುಚ್ಚಬೇಕೆನ್ನುವ ವೇಳೆ ಅದೇ ಮಾರ್ಗವಾಗಿ ವಾಹನವೊಂದು ಬಂದಿದ್ದರಿಂದ ಹೆದರಿದ ಅವರು ಅಲ್ಲಿಂದ ಓಡಿ ಹೋಗಿದ್ದಾರೆ. ಅದೃಷ್ಟವಶಾತ್ ರಾಜೇಂದ್ರನ ಪ್ರಾಣ ಉಳಿದಿದೆ. ವಿಷಯ ತಿಳಿಯುತ್ತಿದ್ದಂತೆಯೇ ನಂಜನಗೂಡು ಪೊಲೀಸರು ಸ್ಥಳಕ್ಕೆ ಬಂದಿದ್ದು ಗಾಯಾಳು ರಾಜೇಂದ್ರನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಗೆ ದಾಖಲಿಸಲಾಯಿತು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಎಸ್ಪಿ ವಿಷ್ಣುವರ್ಧನ್ ಅವರು ಅಡಿಷನಲ್ ಎಸ್ಪಿ ಮಲ್ಲಿಕ್ ಹಾಗೂ ನಾಗೇಶ್, ಡಿವೈಎಸ್ಪಿ ರಘುರವರ ಮಾರ್ಗದರ್ಶನದಲ್ಲಿ ಹಾಗೂ ಇನ್ಸ್‌ಪೆಕ್ಟರ್ ರವೀಂದ್ರ, ಪಿಎಸ್ ಐಗಳಾದ ಕೃಷ್ಣಕಾಂತ ಕೋಳಿ ಮಂಜುನಾಥ್, ಎಎಸ್ಐ ದೇವರಾಜಯ್ಯ ನೇತೃತ್ವದಲ್ಲಿ ಸಿಬ್ಬಂದಿಗಳಾದ ಕೃಷ್ಣ, ಶಿವಕುಮಾರ್, ತಿಮ್ಮಯ್ಯ, ಮಹೇಶ್, ಚೇತನ್, ನವೀನ್ ಕುಮಾರ್, ಪೀರಪ್ಪ ಹಾದಿಮನಿ, ರವಿಕುಮಾರ್, ಮಹಿಳಾ ಸಿಬ್ಬಂದಿಗಳಾದ ಸರಿತಾ, ಸಹನ ಹಾಗೂ ಚಾಲಕ ಕೃಷ್ಣ ರವರನ್ನೊಳಗೊಂಡ ತಂಡ ರಚಿಸಿದ್ದಾರೆ.



ಪ್ರಕರಣದ ತನಿಖೆಗೆ ಮುಂದಾದ ತಂಡವು ಘಟನೆ ನಡೆದ ಸ್ಥಳ, ಸಿಸಿ ಕ್ಯಾಮರಾ ನೆರವು ಹಾಗೂ ವೈಜ್ಞಾನಿಕ ಅಂಶಗಳ ನೆರವಿನಿಂದ ತನಿಖೆ ಆರಂಭಿಸಿದಾಗ ಪತ್ನಿ ಸಂಗೀತಾ ಮೇಲೆಯೇ ಸಂಶಯ ಬರಲಾರಂಭಿಸಿತ್ತು. ಆಕೆಯ ವಿಚಾರಣೆ ನಡೆಸಿದಾಗ ಆಕೆ ನೀಡುತ್ತಿದ್ದ ಮಾಹಿತಿಯೂ ಆಕೆ ಮೇಲೆ ಸಂಶಯ ಪಡುವಂತೆ ಮಾಡಿತ್ತು. ಹೀಗಾಗಿ ಪೊಲೀಸರು ತಮ್ಮದೇ ಸ್ಟೈಲ್‌ನಲ್ಲಿ ವಿಚಾರಣೆ ನಡೆಸಿದಾಗ ಆಕೆ ನಿಜ ವಿಷಯವನ್ನು ಬಾಯಿ ಬಿಟ್ಟಿದ್ದಾಳೆ. ಹೀಗಾಗಿ ಹತ್ಯೆಗೆ ಯತ್ನಿಸಿ ಸಂಗೀತಾ, ತಮ್ಮ ಸಂಜಯ್, ಗೆಳೆಯ ವಿಘ್ನೇಶ್ ಮತ್ತು ಅಪ್ರಾಪ್ತ ಬಾಲಕನನ್ನು ಬಂಧಿಸಿ ಜೈಲಿಗೆ ಅಟ್ಟಿದ್ದಾರೆ. ದರೋಡೆ ಸನ್ನಿವೇಶ ಸೃಷ್ಟಿಸಿ ಪತಿಯನ್ನು ಹತ್ಯೆ ಮಾಡಲು ಯತ್ನಿಸಿದ ಪತ್ನಿ ಸಂಗೀತ ಮತ್ತು ಸಹಚರರ ಸಂಚು ಭೇದಿಸಿದ ನಂಜನಗೂಡು ಪೊಲೀಸರ ಕಾರ್ಯಕ್ಷಮತೆಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ☯

# ಕುಡುಕರ ಗಲಾಟೆ; ಸುಸ್ತಾದ ಸುರತ್ಕಲ್ ಪೊಲೀಸರು!

**ದಕ್ಷಿಣ ಕನ್ನಡ**

✍ ಮೋಹನ್ ಬೋಳಂಗಡಿ

ದಕ್ಷಿಣ ಕನ್ನಡ ಜಿಲ್ಲೆ ಅಂದರೆ ಕೋಮು ಸೂಕ್ಷ್ಮ ಪ್ರದೇಶ. ಅದರಲ್ಲೂ ಉಳ್ಳಾಲ, ಸುರತ್ಕಲ್, ಕಲ್ಲಡ್ಕ ಮೊದಲಾದ ಪ್ರದೇಶಗಳಲ್ಲಿ ಉಭಯ ಕೋಮುಗಳ ಮಧ್ಯೆ ಏನಾದರೂ ಸಂಘರ್ಷಗಳು ನಡೆದರೆ ವಿಪರೀತವಾಗಿ ತಲೆಕೆಡಿಸಿಕೊಳ್ಳುವುದು ಪೊಲೀಸರು. ಏಕೆಂದರೆ ಈ ಪ್ರದೇಶಗಳಲ್ಲಿ ಈ ಹಿಂದೆ ನಡೆದಂತಹ ಚಿಕ್ಕಪುಟ್ಟ ಘಟನೆಗಳು ಜಿಲ್ಲಾದ್ಯಂತ ವ್ಯಾಪಿಸಿ ಕೋಮು ಸಂಘರ್ಷಕ್ಕೆ ಕಾರಣವಾದಂತಹ ಉದಾಹರಣೆಗಳಿವೆ. ಅದಕ್ಕಾಗಿ ಪೊಲೀಸರು ಕ್ಷುಲ್ಲಕ ಎನಿಸುವಂತಹ ಘಟನೆಗಳನ್ನೂ ಸಹ ಗಂಭೀರವಾಗಿ ಪರಿಗಣಿಸುತ್ತಾರೆ ಮತ್ತು ಸೂಕ್ತ ಬಂದೋಬಸ್ತ್ ನಡೆಸುತ್ತಾರೆ. ಇದಕ್ಕೆ ಉದಾಹರಣೆ ಎಂಬಂತೆ ಕೆಲವು ದಿನಗಳ ಹಿಂದೆ ಅಕ್ಟೋಬರ್ 23ರಂದು ಸುರತ್ಕಲ್ ಸಮೀಪದ ಕಾನ ಎಂಬಲ್ಲಿನ ಬಾರೊಂದರಲ್ಲಿ ನಡೆದಂತಹ ಘಟನೆಯ ಹಿನ್ನೆಲೆಯಲ್ಲಿ ಹಬ್ಬಿದಂತಹ ವದಂತಿಗಳಿಂದಾಗಿ ಪೊಲೀಸರೇ ಬೇಸ್ತುಬಿದ್ದು ಹೋಗಿದ್ದಾರೆ. ಸಕಾಲದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಮತ್ತು ಅವರಿಗೆ ಆಶ್ರಯ ನೀಡಿದವರನ್ನು ಬಂಧಿಸಿ ನಿಟ್ಟುಸಿರು ಬಿಟ್ಟಿದ್ದಾರೆ.



ಕಮೀಷನರ್ ಸುಧೀರ್‌ಕುಮಾರ್ ರೆಡ್ಡಿ

### ಏನಾಯಿತು?

ಸುರತ್ಕಲ್‌ನಿಂದ ಬಜ್ಪೆಗೆ ಹೋಗುವ ರಸ್ತೆಯಲ್ಲಿ ಸಿಗುವಂತಹ ಸಣ್ಣ ಪ್ರದೇಶವೇ ಕಾನ. ಸುಮಾರು ಎರಡು ದಶಕಗಳ ಹಿಂದೆ ಈ ಪ್ರದೇಶಕ್ಕೆ ಕುಖ್ಯಾತಿಯೊಂದು ಇತ್ತು. ಯಾರಾದರೂ ಕಾನ ಎಂಬಲ್ಲಿಗೆ ಹೋಗುತ್ತೇನೆ ಎಂದು ಹೇಳಿದರೆ ಎಲ್ಲರೂ ಸಂಶಯದಿಂದ ನೋಡುತ್ತಿದ್ದರು. ಎಂಆರ್‌ಪಿಎಲ್ ಕಾರ್ಖಾನೆ ಅಸ್ತಿತ್ವಕ್ಕೆ ಬಂದ ನಂತರ ಈ ಪ್ರದೇಶ ಸಾಕಷ್ಟು ಸುಧಾರಿದೆ. ಸುಸಜ್ಜಿತ ರಸ್ತೆ ನಿರ್ಮಾಣವಾಗಿದೆ. ಈ ಪ್ರದೇಶದಲ್ಲಿ ಶೀನ ಎಂಬವರ ಮನೆಯಿತ್ತು. ಕಾನದ ಶೀನನ ಮನೆ ಎಂದರೆ ಪಡ್ಡೆ ಹೈಕಳಿಗೆ ದೈಹಿಕ ಕಸರತ್ತು ನಡೆಸುವಂತಹ ಜಾಗವಾಗಿತ್ತು. ಈಗ ಅಲ್ಲಿ ಆ ವ್ಯವಹಾರ ನಿಂತಿದೆ. ಆದರೂ ಹೆಸರು ಹಾಗೆಯೇ ಉಳಿದಿದೆ. ಇಂತಹ ಪರಿಸರದಲ್ಲಿ ಬಾರ್ ರೆಸ್ಟೋರೆಂಟ್ ಇದೆ. ಇದರಲ್ಲಿ ಸಾಕಷ್ಟು ವ್ಯವಹಾರವೂ ಇದೆ. ಆ ಬಾರಿಗೆ ಅಕ್ಟೋಬರ್ 22ರಂದು ರಾತ್ರಿ ಮದ್ಯ ಸೇವನೆಗೆಂದು ಬಂದವರು ಕಾನಕಟ್ಲದ ಸುಶಾಂತ್ ಅಲಿಯಾಸ್ ಕಡವಿ (29), ಕಾನ ಕಟ್ಲ ಬಳಿ ಬೈಕಲ ಮನೆಯ ಕೆವಿ ಅಲೆಕ್ಸ್ (27), ಸುರತ್ಕಲ್ ಇಂದಿರಾ ಕಟ್ಟೆಯ ನಿವಾಸಿ ನಿತಿನ್ (26) ಮತ್ತು ಗುರುರಾಜ್ ಆಚಾರಿ ಎಂಬವರು. ಅವರು ಅವರಷ್ಟಕ್ಕೆ ಕುಳಿತುಕೊಂಡು ಮದ್ಯಪಾನ ಮಾಡುತ್ತ ಮಾತನಾಡುತ್ತಿದ್ದರು.

ಅವರು ಕುಳಿತುಕೊಂಡಿದ್ದ ಟೇಬಲ್‌ನ ಪಕ್ಕದ ಟೇಬಲ್‌ನಲ್ಲಿಯೇ ಸುರತ್ಕಲ್ ಚೊಕ್ಕಬೆಟ್ಟುವಿನ ನಿಜಾಮ್ (23) ಮತ್ತು ಕೃಷ್ಣಾಪುರ ಹಿಲ್ ಸೈಡ್‌ನ ಹಸನ್ ಮುಕ್ಸೀದ್ (18) ಎಂಬವರಿಬ್ಬರು ಮದ್ಯಪಾನ ಮಾಡುತ್ತಿದ್ದರು. ಈ ಆರು ಮಂದಿಗೆ ಪರಸ್ಪರ ಗೆಳೆತನವಿರಲಿಲ್ಲ. ಬದಲಾಗಿ ಪರಿಚಯ ಇತ್ತು. ಎರಡೂ ಟೇಬಲ್ ಅಕ್ಕಪಕ್ಕದಲ್ಲಿದ್ದುದರಿಂದ ಅಲ್ಲಿ ಮಾತನಾಡುವಾಗ ಸ್ವರ ಏರು ಗತಿಯಲ್ಲಿ ಇದ್ದುದರಿಂದ ಅವರ ಮಧ್ಯೆ ಮಾತಿಗೆ ಮಾತು ಬೆಳೆಯಿತು. ಕೊನೆಗೆ ಹೊಡೆದಾಟದ ಹಂತಕ್ಕೆ ಬಂದಿತು. ಈ ಸಂದರ್ಭದಲ್ಲಿ ಹೊಟೇಲ್‌ನ ಸಿಬ್ಬಂದಿಗಳು ಅವರನ್ನು ಹೊಟೇಲ್‌ನಿಂದ ಹೊರಗೆ ಕಳುಹಿಸಿದರು. ಎಲ್ಲರೂ ಹೊರಗೆ ಬಂದು ತಾವು ನಿಲ್ಲಿಸಿದ್ದ ದ್ವಿಚಕ್ರ ವಾಹನಗಳತ್ತ ಬಂದರು. ಅಲ್ಲಿಯೂ ಮಾತುಕತೆ ನಡೆದಾಗ ಆರೋಪಿಗಳ ಪೈಕಿ ಗುರುರಾಜ ಆಚಾರಿ ತನ್ನಲ್ಲಿದ್ದ ಚಿಕ್ಕ ಚೂರಿಯಿಂದ ನಿಜಾಮ್‌ನ ಹೊಟ್ಟೆಗೆ ತಿವಿದ. ತಡೆಯಲು ಬಂದ ಹಸನ್ ಮುಕ್ಸಿದ್‌ಗೂ ಗೀರಿದ. ಇಬ್ಬರಿಗೂ ಗಾಯಗಳಾದಾಗ ಗುರುರಾಜ್ ಮತ್ತಿತರರು ಪರಾರಿ ಯಾದರು. ಗಾಯಾಳುಗಳನ್ನು ಅಲ್ಲಿಂದ ಸುಮಾರು 2 ಕಿ.ಮಿ. ದೂರದ ಮುಕ್ಕ ಶ್ರೀನಿವಾಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ನಿಜಾಮ್‌ಗೆ ಗಂಭೀರ ಗಾಯವಾಗಿದ್ದರಿಂದ ಪ್ರಥಮ ಚಿಕಿತ್ಸೆ ನೀಡಿ ಮಂಗಳೂರಿನ ಆಸ್ಪತೆಗೆ ಸ್ಥಳಾಂತರಿಸಲಾಯಿತು. ಅವರಿಬ್ಬರು ಅಪಾಯದಿಂದ ಪಾರಾಗಿದ್ದರು. ಆದರೆ ಈ ಘಟನೆ ಸ್ಥಳೀಯವಾಗಿ ಆತಂಕದ ವಾತಾವರಣ ನಿರ್ಮಾಣವಾಗಲು ಕಾರಣವಾಯಿತು. ವದಂತಿಗಳು ಹರಡಿತು. ಸುರತ್ಕಲ್ ಪೊಲೀಸರಿಗೆ ಮಾಹಿತಿಯೂ ಲಭಿಸಿತು. ಸ್ಥಳಕ್ಕೆ ಧಾವಿಸಿದ ಪೊಲೀಸ್ ತಂಡ ಸೂಕ್ತ ಮಾಹಿತಿಗಳನ್ನು ಕಲೆ ಹಾಕಿ ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿತು. ಯಾವುದೇ ರೀತಿಯ ವದಂತಿಗಳಿಗೆ ಕಿವಿ ಕೊಡಬಾರದು ಪರಿಸ್ಥಿತಿ ಬಿಗಡಾಯಿಸಿಲ್ಲ. ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ವತಃ ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಸಾಮಾಜಿಕ ಜಾಲತಾಣಗಳ ಮೂಲಕ ಸ್ಪಷ್ಟ ಪಡಿಸಬೇಕಾಯಿತು.








ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ನಾಲ್ಕು ಮಂದಿ ಆರೋಪಿಗಳನ್ನು ಘಟನೆ ನಡೆದ ಮರುದಿನವೇ ಬಂಧಿಸಿದ್ದರೆ ಪ್ರಮುಖ ಆರೋಪಿ ಗುರುರಾಜ ಆಚಾರಿಯನ್ನು ಮರುದಿನ ಬಂಧಿಸಿದ್ದಾರೆ. ಆರೋಪಿಗಳಿಗೆ ಕೃತ್ಯ ನಡೆದ ದಿನದಂದು ಆಶ್ರಯ ನೀಡಿದ್ದ ಹೊನ್ನಕಟ್ಟೆ ಕುಳಾಯಿಗುಡ್ಡೆಯ ಅರುಣ್ ಶೆಟ್ಟಿಯನ್ನು ಬಂಧಿಸಲಾಗಿದ್ದು, ಇನ್ನೊಬ್ಬ ಆರೋಪಿ ಅಶೋಕ್ ಎಂಬಾತನನ್ನು ಶೋಧ ನಡೆಸಲಾಗುತ್ತಿದೆ. ಕುಡುಕರ ಗಲಾಟೆ ಪೊಲೀಸರಿಗೆ ಇಕ್ಕಟ್ಟು ಸೃಷ್ಟಿ ಮಾಡಿದ್ದು ಮಾತ್ರ ಸುಳ್ಳಲ್ಲ. ☯

# ...ಬಸ್ ಅಪಘಾತಕ್ಕೆ ಕಾರಣವೇನು?

6 ☜

ಕಳೆದುಕೊಂಡು, ಮೂಗೇಟು ಬಿದ್ದು ಆಸ್ಪತೆಯಲ್ಲಿ ನರಳುತ್ತಿರೋ ನಿಷ್ಪಾಪಿಗಳ ಭವಿಷ್ಯದ ಗತಿ ಏನು? ಅವರಿನ್ನೂ ಆರೇಳು ತಿಂಗಳು ಅಥವಾ ವರ್ಷ ಕಾಲ ದುಡಿಮೆ ಮಾಡಲು ಆಗುವುದಿಲ್ಲ... ಅವರ ಕುಟುಂಬದ ನಿರ್ವಹಣೆ ಹೇಗೆ? ಈವಾಗೇನೋ ಅಡ್ಮಿಟ್ ಮಾಡಿಕೊಂಡು ಇಂಜೆಕ್ಷನ್ ಮಾತ್ರೆ ಕೊಡಲಾಗುತ್ತಿದೆ ಆಸ್ಪತ್ರಯಿಂದ ಡಿಸ್ಚಾರ್ಜ್ ಆದಮೇಲೆ ಅವರ ಜೀವನ ನಿರ್ವಹಣೆ ಹೇಗೆ?!



ಶಾಸಕ ಪಿ.ಎಂ. ನರೇಂದ್ರ ಸ್ವಾಮಿ




ಮೃತ ಮಹಿಳೆ



<Accident message>
Type: Fatal-02 (Updated)
Report Time: 19-10-2025, 19:00 Hrs
Accident Time: 19-10-2025,16:00 Hrs
Location: Bachanahalli Cross Near Malavalli
Bus No/Type:KA10F0458/KS, KA57F4775 & KA575064
Sch No/Route: 79,KLG-BNG/ ADL-BNG-KLG
Depot/Div: KLG/CJR, BMTC Depot 21 & 36
Details: ಮಳವಳ್ಳಿ ಸಮೀಪದ ಬಾಚನಹಳ್ಳಿ ಕ್ರಾಸ್ ಬಳಿ ಸಂಸ್ಥೆಯ ವಾಹನ ಹಾಗೂ 02 ಬಿಎಂಟಿಸಿ ವಾಹನಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಸಂಸ್ಥೆಯ ವಾಹನದ ಓರ್ವ ಮಹಿಳಾ ಪ್ರಯಾಣಿಕರು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಮೂರೂ ವಾಹನಗಳ ಸುಮಾರು 40 ಜನ ಪ್ರಯಾಣಿಕರು ಗಾಯಗೊಂಡಿರುತ್ತಾರೆ. 08 ಜನ ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿದ್ದು, 25 ಪ್ರಯಾಣಿಕರನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಹಾಗೂ ಉಳಿದ ಗಾಯಾಳುಗಳನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಿಸಲಾಗಿರುತ್ತದೆ. ಗಂಭೀರವಾಗಿ ಗಾಯಗೊಂಡಿದ್ದ ಮತ್ತೋರ್ವ ಮಹಿಳಾ ಪ್ರಯಾಣಿಕರು ಚಿಕಿತ್ಸೆ ಫಲಕಾರಿಯಾಗದೆ ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟಿರುವುದಾಗಿ ಮಾಹಿತಿ ನೀಡಿರುತ್ತಾರೆ.

ಪೊಲೀಸ್ ಕೇಸ್ ಆಗಿದೆ, ಪ್ರಕರಣ ನಾಳೆ ಕೋರ್ಟ್‌ಗೂ ಹೋಗುತ್ತದೆ ಆ ಮಾತು ಬೇರೆ. ಆದರೆ ವಿಚಾರಣೆ ವಾದ ವಿವಾದ ಮುಗಿದು ಎಷ್ಟೋ ವರ್ಷದ ಬಳಿಕ ಅಷ್ಟಿಷ್ಟು ಪರಿಹಾರ ಸಿಗಬಹುದು. ಅಲ್ಲಿವರೆಗೆ ಅವರೆಲ್ಲ ಏನು ಮಾಡಬೇಕು?! ಈ ಭೀಕರ ಅಪಘಾತಕ್ಕೆ ಕಾರಣವಾದ ಕೆಎಸ್‌ಆರ್‌ಟಿಸಿ ಸಂಸ್ಥೆ ಅಧಿಕಾರಿಗಳು ಕೂಡಲೇ ಸಂತ್ರಸ್ತರಿಗೆ ನೆರವು ನೀಡಬೇಕು. ಕೇವಲ ಆಸ್ಪತ್ರೆಗೆ ತೋರಿಸಿ ಚಿಕಿತ್ಸೆ ಕೊಡಿಸಿ ಮನೆಗೆ ಕಳಿಸಿ ಬಿಟ್ಟರೆ ಸಾಲದು... ಅಂದಹಾಗೆ, ಈ ಜನರಿಂದ ವೋಟ್ ಪಡೆದುಕೊಂಡು ಶಾಸಕರಾಗಿ ಮೆರೆಯುತ್ತಿರೋ ಜನಪ್ರತಿನಿಗಳು ಸಂಸದರೂ ಅಪಘಾತ ಸಂತ್ರಸ್ತರ ಭೇಟಿ ಮಾಡಿ ಸಹಾಯ ಮಾಡಬೇಕಿದೆ... ☯




ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್



ತಾಸುಗಟ್ಟಲೆ ಬಂದ್ ಆಗಿದ್ದ ಹೈವೇ

# ಅವತ್ತು ಸೌಂದರ್ಯ ಮುಖದ ಮೇಲೆ ಕಾಲಿಟ್ಟ... ಇವತ್ತು ಕಣ್ಣೀರಿಟ್ಟರು ರಾಜ ಮಾತೆ ರಮ್ಯಕೃಷ್ಣ!






**ಪಂ**ಚ ಭಾಷಾ ತಾರೆ ಸೌಂದರ್ಯ ನಮ್ಮನ್ನಗಲಿ 20 ವರ್ಷ ಕಳೆದವು. ಆದರೆ ಆಕೆಯನ್ನು ಸಿನಿರಸಿಕರು ಇಂದಿಗೂ ಮರೆಯೋಕೆ ಸಾಧ್ಯವಿಲ್ಲ. ಹೆಸರಿಗೆ ತಕ್ಕಂತೆ ಸೌಂದರ್ಯವತಿಯಾಗಿದ್ದ ಆಕೆ ನಟನೆಯಲ್ಲಿ ಕೂಡ ಮೋಡಿ ಮಾಡಿದವರು. ಸೌಂದರ್ಯ ಅಪ್ಪರು ಇವತ್ತಿಗೂ ಆಕೆಯನ್ನು ನೆನಪಿಸಿ ಕೊಳ್ಳುತ್ತಲೇ ಇದ್ದಾರೆ. ನಟಿ ರಮ್ಯಕೃಷ್ಣ ಕೂಡ ಸೌಂದರ್ಯ ಜೊತೆ ತೆರೆ ಹಂಚಿಕೊಂಡಿದ್ದಾರೆ. 'ಪಡೆಯಪ್ಪ' ಹಾಗೂ 'ಅಮ್ಮೋರು' ಸಿನಿಮಾಗಳಲ್ಲಿ ಸೌಂದರ್ಯ ಜೊತೆ ನಟಿಸಿದ್ದರು. ಪ್ರಸಿದ್ದ 'ಜಯಮ್ಮು ನಿಶ್ಚಯಮುರಾ' ಭಾಗಿ ಆಗಿದ್ದರು. ಈ ವೇಳೆ ತಮ್ಮ ಸಿನಿಜರ್ನಿ ಮತ್ತು ವೈಯಕ್ತಿಕ ಜೀವನದ ಬಗ್ಗೆ ಸಾಕಷ್ಟು ಸಂಗತಿ ಮಾತನಾಡಿದ್ದಾರೆ.




ಸೌಂದರ್ಯ ಜೊತೆಗಿನ ತಮ್ಮ ಒಡನಾಟದ ಬಗ್ಗೆ ಕೂಡ ಹೇಳಿಕೊಂಡು ಕಣ್ಣೀರು ಹಾಕಿದ್ದಾರೆ. ಖ್ಯಾತ ನಟ ಜಗಪತಿ ಬಾಬು ಈ ಕಾರ್ಯಕ್ರಮ ನಿರೂಪಣೆ ಮಾಡುತ್ತಾರೆ. ಸೌಂದರ್ಯ ಜೊತೆ ಅವರು ಕೂಡ ಕೆಲ ಸಿನಿಮಾಗಳಲ್ಲಿ ನಾಯಕನಟರಾಗಿ ನಟಿಸಿದ್ದರು. ಹಾಗಾಗಿ ಇಬ್ಬರೂ ದಿವಂಗತೆ ಸೌಂದರ್ಯರನ್ನು ನೆನಪಿಸಿಕೊಂಡಿದ್ದಾರೆ.

'ನನ್ನ ಮುಂದೆ ಬೆಳೆದು, ಉತ್ತುಂಗದ ಹಂತಕ್ಕೆ ಏರುತ್ತಿದ್ದ ಸಮಯದಲ್ಲೇ ಸೌಂದರ್ಯ ದೂರಾದಳು' ಎಂದು ರಮ್ಯಾಕೃಷ್ಣ ಕಣ್ಣೀರು ಹಾಕಿದ್ದಾರೆ.




1995ರಲ್ಲಿ 'ಅಮ್ಮೋರು' ಸಿನಿಮಾ ಚಿತ್ರೀಕರಣದ ಸಮಯದಲ್ಲಿ ಮೊದಲ ಬಾರಿ ನಾನು ಸೌಂದರ್ಯಳನ್ನು ನೋಡಿದ್ದೆ. ಆಗ ಆಕೆಯ ಬಗ್ಗೆ ತಿಳಿದುಕೊಂಡಿದ್ದೆ. ಚಿಕ್ಕಂದಿನಿಂದಲೂ ತನ್ನನ್ನು ತಾನು ತಿದ್ದಿ ತೀಡಿ ಬೆಳೆದವಳು. ಆಕೆಗೆ ಎಷ್ಟೇ ನೇಮು ಫೇಮು ಬಂದರು ಯಾರನ್ನೂ ಕೀಳಾಗಿ ಕಾಣುತ್ತಿರಲಿಲ್ಲ. ಹಗುರವಾಗಿ ಮಾತನಾಡುತ್ತಿರಲಿಲ್ಲ.

ಎಲ್ಲರಿಗೂ ಅದ್ಭುತವಾದ ವ್ಯಕ್ತಿಯಾಗಿ ಮಾತ್ರವಲ್ಲ, ಆತ್ಮೀಯ ಸ್ನೇಹಿತೆಯಾಗಿದ್ದಳು. ಆಕೆಯ ಜಾಗ ತುಂಬಲು ಯಾರಿಂದಲೂ ಸಾಧ್ಯವಿಲ್ಲ... ಎಂದು ರಮ್ಯಾಕೃಷ್ಣ ಹೇಳಿಕೊಂಡಿದ್ದಾರೆ. ರಜನಿಕಾಂತ್ ಜೊತೆ 'ಪಡೆಯಪ್ಪ' ಚಿತ್ರದಲ್ಲಿ ಸೌಂದರ್ಯ ಹಾಗೂ ರಮ್ಯಾಕೃಷ್ಣ ಇಬ್ಬರೂ ನಟಿಸಿದ್ದರು.ಇಬ್ಬರದ್ದು ತದ್ವಿರುದ್ಧ ಪಾತ್ರ.

ಅಹಂಕಾರವೇ ಮೈವೆತ್ತ ಶ್ರೀಮಂತರ ಮನೆ ಹುಡುಗಿ ನೀಲಾಂಬರಿಯಾಗಿ ರಮ್ಯಾಕೃಷ್ಣ ನಟಿಸಿದ್ದರು. ಆಕೆಯ ಮನೆ ಕೆಲಸದಾಕೆ ವಸುಂಧರ ಪಾತ್ರದಲ್ಲಿ ಸೌಂದರ್ಯ ನಟಿಸಿದ್ದರು. ತಾನು ಪ್ರೀತಿಸಿದ ಪಡೆಯಪ್ಪ ನನ್ನನ್ನು ಬಿಟ್ಟು ನನ್ನ ಮನೆಕೆಲಸದಾಕೆ ವಸುಂಧರಳನ್ನು ಪ್ರೀತಿಸುತ್ತಿದ್ದಾನೆ ಎಂದು ಗೊತ್ತಾದಾಗ ಆಕೆಯ ವಿರುದ್ಧ ಸೇಡು ತೀರಿಸಿ ಕೊಳ್ಳಲು ನೀಲಾಂಬರಿ ಮುಂದಾಗುತ್ತಾಳೆ. ಒಂದು ಸನ್ನಿವೇಶದಲ್ಲಿ ಬಹಳ ದರ್ಪದಿಂದ ಸೌಂದರ್ಯ ಮುಖದ ಮೇಲೆ ಕಾಲಿಟ್ಟು ಅವಮಾನ ಮಾಡುತ್ತಾರೆ ರಮ್ಯಾಕೃಷ್ಣ!

ಆ ದೃಶ್ಯವನ್ನು ಅಂದಿನ ಕಾರ್ಯಕ್ರಮದಲ್ಲಿ ಪ್ರದರ್ಶನ ಮಾಡಿದ್ದು, ಅದನ್ನು ರಮ್ಯಕೃಷ್ಣ ನೋಡುತ್ತಾ ಭಾವುಕರಾಗಿದ್ದಾರೆ. ಆ ಸನ್ನಿವೇಶದಲ್ಲಿ ನಟಿಸಲು ಸೌಂದರ್ಯ ಒಪ್ಪಿದ್ದು ಆಕೆಯ ದೊಡ್ಡಗುಣ ಎಂದು ಹೊಗಳಿ ಕೊಂಡಾಡಿದ್ದಾರೆ.

ಪಡೆಯಪ್ಪ ಚಿತ್ರದಲ್ಲಿ ಸೌಂದರ್ಯ ಮೇಲೆ ಸೇಡು ತೀರಿಸಿಕೊಳ್ಳುವ ಪಾತ್ರ ನನ್ನದು. ಹಾಗಾಗಿ ಅಂತಹ ದುರಂಹಕಾರದಿಂದ ವರ್ತಿಸುವ ಸನ್ನಿವೇಶದಲ್ಲಿ ನಟಿಸಬೇಕಾಯಿತು. ಆರಂಭದಲ್ಲಿ ನಟಿಸೋಕೆ ಸಾಧ್ಯವಾಗಲಿಲ್ಲ. ಆದರೆ ಆ ಸನ್ನಿವೇಶ ಕಥೆಗೆ ಬಹಳ ಮುಖ್ಯವಾಗಿತ್ತು. ಇಷ್ಟವಿಲ್ಲದಿದ್ದರೂ ಮಾಡಬೇಕಾಯಿತು.

ಆಗ ಎಲ್ಲಾ ದೇವರನ್ನು ಮನಸ್ಸಿನಲ್ಲಿ ಸ್ಮರಿಸಿದೆ. ಬಳಿಕ ಸೌಂದರ್ಯ ಮುಖದ ಮೇಲೆ ಕಾಲಿಟ್ಟು ನಟಿಸಿದೆ. ಕೆಲ ದಿನಗಳ ಕಾಲ ಅದೇ ಗುಂಗಿನಲ್ಲಿದ್ದೆ...ಎಂದು ನಟಿ ರಮ್ಯಾಕೃಷ್ಣ ಹೇಳಿರುವುದು ಇದೀಗ ವೈರಲ್ ಆಗಿದೆ. ಅಂದಹಾಗೆ, ಕೆ.ಎಸ್ ರವಿಕುಮಾರ್ ನಿರ್ದೇಶನದಲ್ಲಿ 'ಪಡೆಯಪ್ಪ' ಸಿನಿಮಾ ಮೂಡಿ ಬಂದಿತ್ತು. ಎ.ಆರ್ ರಹಮಾನ್ ಸಂಗೀತ, ರಜನಿ ಸ್ಟೈಲ್, ಶಿವಾಜಿ ಗಣೇಶನ್ ಅವರ ಮಾಗಿದ ನಟನೆ ಜೊತೆಗೆ, ಸೌಂದರ್ಯ ಹಾಗೂ ರಮ್ಯಾಕೃಷ್ಣ ಇಬ್ಬರೂ ಪೈಪೋಟಿಗೆ ಬಿದ್ದು ನಟಿಸಿದ್ದರು.

ನೀಲಾಂಬರಿ ಪಾತ್ರಕ್ಕಾಗಿ ರಮ್ಯಾಕೃಷ್ಣ ಫಿಲ್ಮ್ ಫೇರ್ ಪ್ರಶಸ್ತಿ ಕೂಡ ಪಡೆದಿದ್ದರು. ಅವತ್ತಿನ ಕಾಲಕ್ಕೆ ತಮಿಳು ಚಿತ್ರರಂಗದ ಎಲ್ಲಾ ಸಿನಿಮಾಗಳ ದಾಖಲೆ ಮುರಿದು 'ಪಡೆಯಪ್ಪ' ಸಂಚಲನ ಸೃಷ್ಟಿಸಿತ್ತು. ಕರ್ನಾಟಕದಲ್ಲಿ ಅಂಬರೀಷ್ ಬಿಡುಗಡೆ ಮಾಡಿದ್ದು ಕೋಟ್ಯಾಂತರ ರೂ ಸಂಪಾದಿಸಿದ್ದರು! ಬೆಂಗಳೂರಿನ ಪಲ್ಲವಿ, ಮೈಸೂರಿನ ಒಪೇರಾ, ಶಿವಮೊಗ್ಗ ಲಕ್ಷ್ಮಿ ಮುಂತಾದ ಚಿತ್ರಮಂದಿರಗಳಲ್ಲಿ ಸಿಲ್ವರ್ ಜ್ಯುಬಿಲಿ ಆಚರಿಸಿತ್ತು ಪಡೆಯಪ್ಪ!! ☯



# ಮಾರಿಕೊಂಡ ಪತ್ರಕರ್ತರ ಚಳಿ ಜ್ವರ ಬಿಡಿಸಿದ ಮಾರಿ ಸೆಲ್ವರಾಜ್!!



**ತ**ಮಿಳು ಚಿತ್ರರಂಗದ ಯಶಸ್ವಿ ನಿರ್ದೇಶಕ ಮಾರಿ ಸೆಲ್ವರಾಜ್. ಅವರ ನಿರ್ದೇಶನದ ಪೆರಿಯಿರುಮ್ ಪೆರುಮಾಳ್, ಕರ್ಣನ್, ಮಾಮನ್ನನ್, ವಾಳಾಯ್ ಅದ್ಭುತ ಯಶಸ್ಸು ದಾಖಲಿಸಿವೆ. ಜೊತೆಗೆ ಹತ್ತಾರು ಪ್ರಶಸ್ತಿ ಪುರಸ್ಕಾರ ಗಳಿಸಿವೆ.

ಮಾರಿ ಇದೀಗ 'ಬೈಸನ್ ಕಾಲ ಮಾದನ್' ಅನ್ನೋ ಸಿನಿಮಾ ನಿರ್ಮಿಸಿದ್ದಾರೆ ಕೂಡ. ಈ ಚಿತ್ರವು ಜಾತಿ ತಾರತಮ್ಯಕ್ಕೆ ತುತ್ತಾಗಿ ನರಳಿದ ಕಬಡ್ಡಿ ಆಟಗಾರನೊಬ್ಬನ ಕುರಿತದ್ದಾಗಿದೆ! ಸಿನಿಮಾ ರಿಲೀಸ್ ಆಗಿ ಮೂರನೇ ವಾರದಲ್ಲಿ ಮುನ್ನುಗ್ಗುತ್ತಿದೆ. ಇಂಥ ಸಮಯದಲ್ಲಿ ತಮಿಳಿನ ಕೆಲ ಮೇಲ್ಜಾತಿ ಪತ್ರಕರ್ತರು ಚಿತ್ರದ ಬಗ್ಗೆ ಕೆಟ್ಟ ವಿಮರ್ಶೆ ಬರೆದು ಕೋಣದ ಬಲಿ ಕೊಡಲು ಪ್ರಯತ್ನಿಸಿದ್ದರು. ಇದರಿಂದ ಕೆರಳಿದ ಮಾರಿ ಸೆಲ್ವ ರಾಜ್ ಅವರು

'ಬೈಸನ್' ಚಿತ್ರ ಕುರಿತು ಒಂದು ಪತ್ರಿಕಾಗೋಷ್ಠಿ ನಡೆಸಿದ್ದರು. ಅದರಲ್ಲಿ ಹಣಕ್ಕಾಗಿ ತಮ್ಮನ್ನು ತಾವು ಮಾರಿಕೊಂಡ ಪತ್ರಕರ್ತರಿಗೆ ಮಾರಿ ಸೆಲ್ವರಾಜ್ ನೀಡಿದ ಗುನ್ನ ಹೇಗಿತ್ತು ಗೊತ್ತಾ...

'ಜಾತಿ ಪದ್ಧತಿಯ ಬಗ್ಗೆ ತಮಿಳು ಸಮುದಾಯದಲ್ಲಿ ಒಂದೇ ರೀತಿಯ ನರೇಟಿವ್ ಇದೆ. ಆ ನರೇಟಿವ್ ಅನ್ನು ಒಡೆಯಬೇಕು, ಬದಲಾಯಿಸಬೇಕು.... ಜಾತಿಯ ಬಗೆಗಿನ ಸರಿಯಾದ ಅರ್ಥವನ್ನು ತಮಿಳುನಾಡಿನ ಸಮುದಾಯಕ್ಕೆ ನೀಡಬೇಕು ಎಂತಲೇ ಸತತ ಕಷ್ಟಪಟ್ಟು ನಾವು ಸಿನಿಮಾ ಮಾಡುತ್ತಿದ್ದೇವೆ. ನನ್ನ ಎಲ್ಲಾ ಸಿನಿಮಾಗಳನ್ನೂ ತಮಿಳು ಜನ ಮೆಚ್ಚಿಕೊಂಡು ಆಶೀರ್ವಾದ ಮಾಡಿದ್ದಾರೆ. ತಮಿಳುನಾಡು ಸರ್ಕಾರ ಪ್ರಶಸ್ತಿ ನೀಡಿ ಗೌರವಿಸಿದೆ. ಆ ಮೂಲಕ ನಮ್ಮ ಶ್ರಮ ಹಾಗೂ ನಾವು ಪ್ರತಿನಿಧಿಸುವ ಸಿದ್ಧಾಂತವನ್ನು ಅಂಗೀಕರಿಸಿದೆ. ಆದರೆ ಕೆಲ ಪತ್ರಕರ್ತರು ಇದ್ಯಾವುದರ ಬಗ್ಗೆಯೂ ಪ್ರಶ್ನೆ ಮಾಡಲ್ಲ! ಕನಿಷ್ಠ ಮೆಚ್ಚುಗೆಯನ್ನೂ ಸಹ ಸೂಚಿಸಲ್ಲ! ಬದಲಿಗೆ ಅಲ್ಯಾರೋ ಹತ್ತು ಜನ ಕುತ್ಕೊಂಡು ನಿಮ್ಮ ಸಿನಿಮಾ ಬಗ್ಗೆ ಹೀಗಂದ್ರಲ್ಲ, ಹಾಗಂದ್ರಲ್ಲ ಅಂತ ಬರೀ ಆ ಕುರಿತೆ ಪ್ರಶ್ನೆ ಮಾಡ್ತೀರಾ? ಏನೇನೋ ವರದಿ ಮಾಡ್ತೀರಾ? ನಮ್ ನರೇಟಿವ್ ನ ಹಾಗೇ ಬದಲಿಸೋಕೆ




ಟ್ರೈ ಮಾಡ್ತಾ ಇದ್ದೀರಾ....ಅಂದ್ರೆ, ಏನರ್ಥ?! ಹೌದು,ತಮ್ಮನ್ನು ತಾವು ಮೇಲ್ಜಾತಿ ಎಂದುಕೊಂಡವರು. ನಮ್ಮ ಸಿನಿಮಾಗಳ ಬಗ್ಗೆ ಹಾಗೆ ಹೇಳೋದು ಕಾಮನ್... ಆಪರೇಷನ್ ಮಾಡುವಾಗ ರೋಗಿ ಕೂಗಾಡುವುದು ಸಾಮಾನ್ಯ. ಹಾಗೆಂದು ಡಾಕ್ಟರ್ ಆಪರೇಷನ್ ಮಾಡದೆಯೇ ಇರೋಕಾಗುತ್ತಾ?? ಅಥವಾ ಖಾಯಿಲೆಯನ್ನು ವಾಸಿ ಮಾಡದೇ ಇರೋಕಾಗುತ್ತಾ?? ಖಾಯಿಲೆಯನ್ನು ವಾಸಿ ಮಾಡಬೇಕಾದ ಜವಾಬ್ದಾರಿ ವೈದ್ಯರ ಮೇಲಿರುವಂತೆ ನಮ್ಮ ಮೇಲೂ ಇದೆ.... ಪತ್ರಿಕಾರಂಗದಂತೆ ಸಿನಿಮಾ ಕೂಡ ಪ್ರಬಲ ಮಾಧ್ಯಮ... ಅನ್ನೋದನ್ನ ಮರೆಯಬೇಡಿ!' ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 2.11.2025

# ಪಿವಿಆರ್‌ಗೆ ಹೊಂಬಾಳೆ ಕಲಿಸಿದ ಹೊಸ ಪಾಠ.....

ಪಿವಿಆರ್ ಐನಾಕ್ಸ್‌ನವರಿಗೆ ಹೊಂಬಾಳೆ ಮತ್ತೊಮ್ಮೆ ಪಾಠ ಕಲಿಸಿದೆ. ಮತ್ತೊಮ್ಮೆ ಎನ್ನುವುದು ಏಕೆಂದರೆ... ಈ ಹಿಂದೆ 'ಕೆಜಿಎಫ್' ರಿಲೀಸ್ ಟೈಂನಲ್ಲೂ ಅವರಿಗೆ ಇಂಥದ್ದೇ ಪಾಠವೊಂದನ್ನು ಹೇಳಿಕೊಟ್ಟಿತ್ತು ಹೊಂಬಾಳೆ. ಈ ಬಾರಿಯೂ ಮತ್ತೊಮ್ಮೆ ಪಾಠ ಕಲಿಸಿದೆ. ಆಗಿದ್ದೇನೆಂದರೆ.....



ದೇಶಾದ್ಯಂತ 5ನೇ ವಾರದಲ್ಲಿ ಭರ್ಜರಿಯಾಗಿ ಪ್ರದರ್ಶನಗೊಳ್ಳುತ್ತಿರುವ 'ಕಾಂತಾರ' ಚಿತ್ರದ ಶೋಗಳನ್ನು ಕಳೆದ ವಾರ ಪಿವಿಆರ್‌ನವರು ಕಡಿಮೆ ಮಾಡಿದ್ದರು. ಈ ಬಗ್ಗೆ ಹೊಂಬಾಳೆಯವರಿಗೆ ಸಣ್ಣದೊಂದು ಕ್ಲೂ ಕೂಡಾ ಇರಲಿಲ್ಲ. ಸಡನ್ ಆಗಿ ಪಿವಿಆರ್‌ನಲ್ಲಿ ಕೊಟ್ಟಿದ್ದ ಶೋಗಳನ್ನ ಕಡಿಮೆ ಮಾಡಿದ್ದರಂತೆ ಪಿವಿಆರ್ ಐನಾಕ್ಸ್. ಇದಕ್ಕೆ ಹೊಂಬಾಳೆಯವರು ಕಲಿಸಿದ ಪಾಠವೇನು ಗೊತ್ತೇ.. ಪಿವಿಆರ್ ಐನಾಕ್ಸ್‌ಗೆ ಸಿನಿಮಾ ಕಂಟೆಂಟ್ ಅನ್ನೇ ಕೊಡದೇ ಇರುವ ನಿರ್ಧಾರ ಮಾಡಿದ್ದು!

'ಥಮ್ಮ' ಚಿತ್ರ ರಿಲೀಸ್ ಆಗಿತ್ತು. ರಶ್ಮಿಕಾ ಮಂದಣ್ಣ ಪ್ರಧಾನ ಭೂಮಿಕೆಯಲ್ಲಿರುವ ಹಿಂದಿಚಿತ್ರ ಪರವಾಗಿಲ್ಲ ಎನ್ನುವಂತೆ ಕಲೆಕ್ಷನ್ ಮಾಡುತ್ತಿದೆ. ಆ ಹಿಂದಿ ಚಿತ್ರಕ್ಕಾಗಿ 'ಕಾಂತಾರ ಚಾಪ್ಟರ್ 01' ಶೋಗಳನ್ನು ಕಡಿಮೆ ಮಾಡಿದಾಗ ಹೊಂಬಾಳೆಯವರು ಮಾಡಿರುವುದು ಇಷ್ಟು.

ಇಡೀ ದಕ್ಷಿಣ ಭಾರತದಲ್ಲಿ ಯಾವ ಪಿವಿಆರ್‌ಐನಾಕ್ಸ್‌ನಲ್ಲೂ ಕಾಂತಾರ ಶೋ ಕೊಡುವುದಿಲ್ಲ ಅನ್ನೋ ನಿರ್ಧಾರ. ಯಾವಾಗ ಹೊಂಬಾಳೆಯವರು ಸಿನಿಮಾ ಕಂಟೆಂಟ್‌ನ್ನೇ ಕೊಡುವುದಿಲ್ಲ ಎಂಬ ನಿರ್ಧಾರಕ್ಕೆ ಬಂದರೋ... ಆಗ ಪಿವಿಆರ್‌ನವರೇ ಸೊಂಟ ಬಗ್ಗಿಸಿದ್ದಾರೆ. ಕಾಂತಾರಕ್ಕೆ ಮೊದಲು ನೀಡಿದ್ದ ಶೋಗಳನ್ನು ಮತ್ತೆ ಕೊಟ್ಟಿದ್ದಾರೆ. ಈ ಬಗ್ಗೆ ಹೊಂಬಾಳೆಯವರು ಎಲ್ಲಿಯೂ ಸುದ್ದಿಗೋಷ್ಠಿ ಮಾಡಿ ಅಬ್ಬರಿಸಿಲ್ಲ... ಅಥವಾ ಸೋಷಿಯಲ್ ಮೀಡಿಯಾದಲ್ಲಿ ಆರ್ಭಟಿಸಿಲ್ಲ.

ವಿಡಿಯೋ ಮಾಡಿಲ್ಲ. ನ್ಯೂಸ್ ಚಾನೆಲ್ಲುಗಳಲ್ಲಿ ಕುಳಿತುಕೊಂಡು ಮಾತನಾಡಿಲ್ಲ. ಆದರೂ ಹೊಂಬಾಳೆಯವರ ಒಂದು ಮಾತಿಗೆ ಪಿವಿಆರ್ ಐನಾಕ್ಸ್‌ನವರು ಸರೆಂಡರ್ ಆಗಿದ್ದಾರೆ ಎಂದರೆ.. ಅದಕ್ಕೆ ಕಾರಣ ಕಾಂತಾರ ಎಂಬ ಪ್ಯೂರ್ ಕಂಟೆಂಟ್!! ಹೊಂಬಾಳೆಯವರ ಬಳಿ ಜನರ ಮೆಚ್ಚುಗೆಗಳಿಸಿರುವ ಒಳ್ಳೆಯ ಪ್ರಾಡಕ್ಟ್ ಇದೆ... ಹೀಗಾಗಿ ಯಾರಿಗೂ ಹೆದರದೆ ದಿಟ್ಟ ನಿರ್ಧಾರ ತೆಗೆದುಕೊಂಡರು ಮತ್ತು ಗೆದ್ದರು, ಅಷ್ಟೇ.

ಕಾಂತಾರ ಬಿಡುಗಡೆಗೆ ಮುಂಚೆ ರಾಜ್ಯ ಸರ್ಕಾರ ಏಕರೂಪ ಟಿಕೆಟ್ ದರ ಮಾಡಿದ್ದಾಗ ಇದೇ ಹೊಂಬಾಳೆಯವರು, ಪಿವಿಆರ್ ಐನಾಕ್ಸ್‌ನವರ ಬೆನ್ನಿಗೆ ನಿಂತಿದ್ದರು. ಈಗ ತಿರುಗಿ ನಿಂತಿದ್ದಾರೆ. ಏಕೆಂದರೆ.. ಇದು ಅಪ್ಪಟ ವ್ಯವಹಾರ!! ☯

# ಜೈಲು ಅಧಿಕಾರಿಗಳಿಗೆ ನ್ಯಾಯಾಧೀಶರು ಛೀಮಾರಿ!

ಆರೋಪಿ ದರ್ಶನ್‌ಗೆ ಜೈಲಿನಲ್ಲಿ ಕನಿಷ್ಠ ಸೌಲಭ್ಯ ನೀಡಿಲ್ಲ ಅಂತಾ ಆರೋಪಿಸಿ ದರ್ಶನ್ ಪರ ವಕೀಲರು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿ, ನ್ಯಾಯಾಲಯದ ಆದೇಶಕ್ಕೂ ಬೆಲೆ ಸಿಗದೆ ದರ್ಶನ್ ಚಳಿಯಲ್ಲಿ ನಡುಗುತ್ತಾ ಬಿದ್ದಿದ್ದಾರೆ. ಕಳೆದ ಎರಡೂವರೆ ತಿಂಗಳಿನಿಂದ ವಾದ ಪ್ರತಿವಾದ ಆಲಿಸಿದ್ದ ಕೋರ್ಟ್, ದರ್ಶನ್‌ಗೆ ಜೈಲಿನ ಮ್ಯಾನ್ಯುಯಲ್ ಪ್ರಕಾರ ಕನಿಷ್ಠ ಸೌಲಭ್ಯ ನೀಡುವಂತೆ ಸೂಚಿಸಿತ್ತು. ಇಂದು ಈ ಸಂಬಂಧ ಆದೇಶ ನೀಡಿದ್ದು, ದರ್ಶನ್‌ಗೆ ಮ್ಯಾನ್ಯುಯಲ್ ಪ್ರಕಾರ ಸೌಲಭ್ಯ ನೀಡಿಕೆಗೆ ಸೂಚನೆ ನೀಡಿದೆ.


ತಿಂಗಳಿಗೆ ಒಂದು ಸಾರಿ ಹೊಸ ಕಂಬಳಿ ನೀಡುವಂತೆ ಸೂಚಿಸಿ




ಇದೇ 31ರಂದು ಚಾರ್ಜಸ್ ಫ್ರೇಮ್ ಮಾಡೋದಾಗಿ ಸೂಚಿಸಿತ್ತು. ಅದರಂತೆ ಚಾರ್ಜಸ್ ಫ್ರೇಮ್ ಮಾಲಾಗಿದೆ. ದರ್ಶನ್ ತನ್ನ ಮೇಲಿನ ಆರೋಪಗಳನ್ನು ತಿರಸ್ಕರಿಸಿದ್ದಾರೆ. ಇದೇ ವೇಳೆ ಮಾತಾಡಿದ ದರ್ಶನ್ ಪರ ವಕೀಲ ಸುನೀಲ್, ಇದು ಬರೇ ಹಾಸಿಗೆ ತಲೆ ದಿಂಬು ವಿಚಾರ ಅಲ್ಲ. ಜೈಲಿನಲ್ಲಿ ಕನಿಷ್ಠ ಸೌಲಭ್ಯ ನೀಡಬೇಕು ಅಂತಾ ಕೋರ್ಟ್ ಆದೇಶ ನೀಡಿತ್ತು. ಆದರೆ ಜೈಲು ಅಧಿಕಾರಿಗಳು ಆದೇಶ ಉಲ್ಲಂಘನೆ ಮಾಡಿದ್ರು. ಹಾಗಾಗಿ ಕೋರ್ಟ್ ಇವತ್ತು ಜೈಲು ಅಧಿಕಾರಿಗಳಿಗೆ ಛೀಮಾರಿ ಹಾಕಿದೆ... ಎಂದಿದ್ದಾರೆ. ಜೈಲು ಮ್ಯಾನ್ಯುಯಲ್ ಫಾಲೋ ಮಾಡಿ, ಕನಿಷ್ಠ ಸೌಲಭ್ಯ ನೀಡಿ ಅಂತಾ ಆದೇಶ ನೀಡಿದೆ. ದರ್ಶನ್‌ಗೆ ಹಳೆಯ ಮತ್ತು ಹರಿದ ಚಾದರ ನೀಡಲಾಗಿದೆ. ತಿಂಗಳಿಗೊಮ್ಮೆ ಅದನ್ನು ಬದಲಾವಣೆ ಮಾಡಿ ಅಂತಾ ಹೇಳಿದೆ ಎಂದರು. ಇನ್ನೂ ಸರ್ಕಾರಿ ಪರ ವಕೀಲರು, ಟ್ರಯಲ್ ತಡ ಮಾಡ್ತಿದ್ದಾರೆ ಅಂತಾ ಆರೋಪ ಮಾಡಿದ್ರು. ಇದು ಸತ್ಯಕ್ಕೆ ದೂರವಾದ ವಿಚಾರ. ಸುಪ್ರೀಂ ಕೋರ್ಟ್ ಅದಷ್ಟು ಬೇಗ ಟ್ರಯಲ್ ಶುರು ಮಾಡಿ ಅಂತಾ ಹೇಳಿದೆ. ಹೊರತುಪಡಿಸಿ, ಇಷ್ಟೇ ದಿನದಲ್ಲಿ ಟ್ರಯಲ್ ಮಾಡಿ ಅಂತಾ ಹೇಳಿಲ್ಲ ಹೇಳಿದ್ದಾರೆ. ಇನ್ನೇನೋ ಟ್ರಯಲ್ ಶುರುವಾಗಲಿದೆ. ದರ್ಶನ್ ಭವಿಷ್ಯ ಕತ್ತಲೆಯಲ್ಲಿದೆ? ☯

# ಬಾಹುಬಲಿ ದಿ ಎಪಿಕ್ ಹೇಗಿದೆ?

ವಿಸ್ ಡೈರೆಕ್ಟರ್ ಎಸ್.ಎಸ್. ರಾಜಮೌಳಿ ಅವರ 'ಬಾಹುಬಲಿ' ಸರಣಿಯು ಭಾರತೀಯ ಸಿನಿ ಪ್ರೇಕ್ಷಕರ ಮನಸ್ಸಿನಲ್ಲಿ ವಿಶೇಷ ಸ್ಥಾನ ಪಡೆದಿದೆ. ಒಳ್ಳೆಯ ಕಥೆ, ಅದ್ದೂರಿ ನಿರ್ಮಾಣ ಮತ್ತು ಅದ್ಭುತ ದೃಶ್ಯಗಳು ಇದಕ್ಕೆ ಕಾರಣ. ಭಾಗ ಒಂದು ಮತ್ತು ಎರಡು ಎರಡೂ ಸಹ ಬ್ಲಾಕ್ ಬಸ್ಟರ್ ಆಗಿದ್ದವು. ಈಗ ಆ ಎರಡನ್ನೂ ಸೇರಿಸಿ ಸುಮಾರು ಎರಡು ಗಂಟೆ ದೃಶ್ಯಗಳನ್ನು ಕತ್ತರಿಸಿ ಟ್ರಿಮ್ ಮಾಡಿ 'ಬಾಹುಬಲಿ: ದಿ ಎಪಿಕ್' ಸಿದ್ದಪಡಿಸಲಾಗಿದೆ. ಈ ಚಿತ್ರಕ್ಕಾಗಿ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ. ಅಕ್ಟೋಬರ್ 31ರಂದು ಜಗತ್ತಿನಾದ್ಯಂತ ಎಪಿಕ್ ಬಿಡುಗಡೆ. ಈ ಹಿನ್ನಲೆಯಲ್ಲಿ ವಾರದ ಮುಂಚೆಯೇ ಸುಮಾರು ಎರಡೂವರೆ ನಿಮಿಷಗಳ ಟ್ರೇಲರ್ ಬಿಡಲಾಗಿದೆ. ಪ್ರಭಾಸ್ (ಅಮರೇಂದ್ರ ಬಾಹುಬಲಿ) ರಾಣಾ ದಗ್ಗುಬಾಟಿ (ಭಲ್ಲಾಳದೇವ)ರಮ್ಯಾಕೃಷ್ಣ (ಶಿವಗಾಮಿ ದೇವಿ) ಹಾಗೂ ಸತ್ಯರಾಜ್ (ಕಟ್ಟಪ್ಪ) ಕಾಣಿಸಿಕೊಂಡಿದ್ದಾರೆ.




ಟ್ರೇಲರ್‌ನ ಆರಂಭದಲ್ಲಿ, ಪ್ರಭಾಸ್ ತನ್ನ ಪ್ರೀತಿಯ ವೀರಾವೇಶದ ರೂಪದಲ್ಲಿ ಕಾಣುತ್ತಾನೆ. ನಂತರ, ಶಿವಗಾಮಿ ತನ್ನ ಇಬ್ಬರು ಮಕ್ಕಳಾದ ಅಮರೇಂದ್ರ ಬಾಹುಬಲಿ ಮತ್ತು ಭಲ್ಲಾಳದೇವ ಇಬ್ಬರೂ ಸಿಂಹಾಸನಕ್ಕೆ ಸಮಾನ ಸ್ಪರ್ಧಿಗಳು ಎಂದು ಘೋಷಿಸುತ್ತಾಳೆ. ಯಾರು ಅರ್ಹರೋ ಅವರೇ ಆಳುತ್ತಾರೆ ಎಂದು ಹೇಳುತ್ತಾಳೆ. ಜೊತೆಗೆ ಅದ್ಭುತ ಯುದ್ಧದ ದೃಶ್ಯಗಳೂ ಇವೆ. ಸತ್ಯರಾಜ್ ಕಟಪ್ಪನಾಗಿ ಮತ್ತು ಅನುಷ್ಕಾಶೆಟ್ಟಿ ದೇವಸೇನೆಯಾಗಿ, ತಮನ್ನಾ ಗ್ಲಾಮರ್ ಡಾಲ್ ಆಗಿ ಮಿಂಚಿದ್ದಾರೆ. ಈ ಟ್ರೇಲರ್ ನಮ್ಮನ್ನು 'ಬಾಹುಬಲಿ' ಸರಣಿಯ ಅದ್ಭುತ ಜಗತ್ತಿಗೆ ಕರೆದೊಯ್ಯುತ್ತದೆ.

ಇಂತಹ ಸಿನಿಮಾ ನಿರ್ಮಿಸಿ ಧನ್ಯತಾ ಭಾವ ಅನುಭವಿಸಿರೋ ನಿರ್ಮಾಪಕ ಶೋಭಾ ಯರ್ಲಗಡ್ಡ, ಯೂ ಟ್ಯೂಬ್‌ನಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಇದು ಸಿನಿಪ್ರಿಯರಲ್ಲಿ ಹಳೆಯ ನೆನಪುಗಳನ್ನು ಕೆರಳಿಸುತ್ತದೆ. ಅಂದಹಾಗೆ, ಬಾಹುಬಲಿ ದಿ ಎಪಿಕ್ ಅಡ್ವಾನ್ಸ್ ಬುಕಿಂಗ್ ಅಮೇರಿಕಾ ಒಂದರಲ್ಲೇ 2.5 ಕೋಟಿ ಮೀರಿದೆಯಂತೆ! ಹೈದ್ರಾಬಾದ್, ಚೆನ್ನೈ, ಬೆಂಗಳೂರು, ಮುಂಬೈ ಮುಂತಾದ ಮಹಾನಗರಗಳಲ್ಲಿ ಅಕ್ಟೋಬರ್ 29ರಿಂದಲೇ ಶೋ ಶುರುವಾಗಿದೆ!!







ಅಂದಹಾಗೆ, ಬಾಹುಬಲಿ ಎರಡು ಸರಣಿ ಸೇರಿಸಿದರೆ 5 ಗಂಟೆ 25 ನಿಮಿಷವಿತ್ತು. ಈಗ ಟ್ರಿಮ್ ಮಾಡಿರೋ ಎಪಿಕ್ 3.45 ನಿಮಿಷ ಇದೆಯಂತೆ. ಅಂದ್ರೆ, 2 ಗಂಟೆ 20 ನಿಮಿಷದ ದೃಶ್ಯಗಳನ್ನು ತೆಗೆಯಲಾಗಿದೆ. ಇದರಲ್ಲಿ ಯಾವ ದೃಶ್ಯ ಮತ್ತು ಹಾಡು ತೆಗೆಯಲಾಗಿದೆ? ಜನರಲ್ಲಿ ಈ ಬಗ್ಗೆ ವಿಪರೀತ ಕುತೂಹಲವಿದೆ.

ರಾಜ ಮೌಳಿ ಟೀಮ್ ಅಂತೂ ಬಾಯಿ ಬಿಟ್ಟಿಲ್ಲ. ಬಲ್ಲ ಮೂಲಗಳಿಂದ ತಿಳಿದು ಬಂದಿರುವುದೇನೆಂದರೆ, ತಮನ್ನಾ ಅನುಷ್ಕಾ ಅವರ ತಲಾ ಒಂದೊಂದು ಹಾಡು ಇರುವುದಿಲ್ಲವಂತೆ. ತಮನ್ನಾ ಜೊತೆ ಹುಡುಗಾಟ ಆಡುವ ದೃಶ್ಯಗಳನ್ನು ಕತ್ತರಿಸಲಾಗಿದೆಯಂತೆ. ಒಂದಷ್ಟು ಹಾಸ್ಯ ದೃಶ್ಯಗಳ ಜೊತೆ ಹಂದಿ ಬೇಟೆ ಕೂಡ ಡಿಲೀಟ್ ಆಗಿದೆಯಂತೆ... ಇಷ್ಟು ಮಾಹಿತಿ ಲೀಕ್ ಮಾಡಿರೋ ಬಾಹುಬಲಿ ಗ್ಯಾಂಗ್, ದೃಶ್ಯಗಳ ಮಾಹಿತಿ ಮಾತ್ರ ಬಹಿರಂಗ ಪಡಿಸಿಲ್ಲ... ಬಾಹುಬಲಿ ದಿ ಬಿಗಿನಿಂಗ್, ಬಾಹುಬಲಿ ದಿ ಕನ್‌ಕ್ಲುಶನ್ ಎರಡರಲ್ಲೂ ವೇಸ್ಟ್ ಅನ್ನೋ ಒಂದೇ ಒಂದು ದೃಶ್ಯ ಇರಲಿಲ್ಲ. ಹೀಗಾಗಿ, 2 ಗಂಟೆಗಳ ದೃಶ್ಯ ತೆಗೆಯಲು ವಷ್ಟರಲ್ಲಿ ರಾಜಮೌಳಿ ಅವರ ತಲೆ ಅದೆಷ್ಟು ಕೆಟ್ಟು ಕೆರ ಹಿಡಿದಿರಬಹುದೊ ನೀವೇ ಊಹಿಸಿಕೊಳ್ಳಿ... ☯

Vol. 41 No. 22 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==